# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ದಾವಣಗೆರೆ
ಶನಿವಾರ, ಜೂನ್ 18, 2022

ಸಂಪುಟ : 49 ಸಂಚಿಕೆ : 35 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 6 ರೂ : 5.00 www.janathavani.com janathavani@mac.com


## ಅಗ್ನಿವೀರರಿಗೆ ರಾಜ್ಯ ಪೊಲೀಸ್ ಇಲಾಖೆ ನೇಮಕದಲ್ಲಿ ಆದ್ಯತೆ

ಬೆಂಗಳೂರು, ಜೂ. 17 – ಸೈನ್ಯದ ನೂತನ ನೇಮಕ ಯೋಜನೆಯಲ್ಲಿ ನಾಲ್ಕು ವರ್ಷ ಕಾಲ ಕರ್ತವ್ಯ ಕಾರ್ಯನಿರ್ವಹಿಸಿ ಹೊರ ಬರುವ ಅಗ್ನಿವೀರರಿಗೆ ಪೊಲೀಸ್ ಸೇವೆಯ ನೇಮಕದಲ್ಲಿ ಆದ್ಯತೆ ನೀಡುವುದಾಗಿ ಗೃಹ ಸಚಿವ ಆರಗ ಜ್ಞಾನೇಂದ್ರ ಹೇಳಿದ್ದಾರೆ.

ಪತ್ರಕರ್ತರೊಂದಿಗೆ ಮಾತನಾಡುತ್ತಿದ್ದ ಅವರು, ಅಲ್ಪಾವಧಿಗೆ ಸೈನಿಕರ ನೇಮಕದ ಅಗ್ನಿಪಥ ಯೋಜನೆ ಉತ್ತಮವಾಗಿದೆ. ಇಸ್ರೇಲ್ ರೀತಿಯ ದೇಶಗಳಲ್ಲಿ ಸೈನಿಕ ಸೇವೆ ಕಡ್ಡಾಯವಾಗಿದೆ. ಭಾರತದಲ್ಲಿ ವೇತನದೊಂದಿಗೆ ನಾಲ್ಕು ವರ್ಷ ಕಾಲ ಅಗ್ನಿವೀರರನ್ನು ನೇಮಕ ಮಾಡಿಕೊಳ್ಳಲಾಗುತ್ತಿದೆ. ಇವರಲ್ಲಿ ಶೇ.25ರಷ್ಟು ಜನರನ್ನು ಸೈನಿಕ ಸೇವೆಗಳಿಗೆ ಸೇರ್ಪಡೆ ಮಾಡಿಕೊಳ್ಳಲಾಗುತ್ತಿದೆ ಎಂದಿದ್ದಾರೆ.

ಸೈನಿಕ ತರಬೇತಿ ಹೊಂದಿದ ಅಗ್ನಿವೀರರನ್ನು ಪೊಲೀಸ್ ಸೇವೆಗಳಿಗೆ ಸೇರ್ಪಡೆ ಮಾಡಿಕೊಳ್ಳಲು ನಾವು ಯೋಜಿಸಿದ್ದೇವೆ, ಇದರಿಂದ ನಮಗೆ ಸಹಾಯವಾಗಲಿದೆ. ಅಲ್ಲದೇ ಅವರಿಗೆ ಬೇರೆ ಉದ್ಯೋಗ ಅವಕಾಶಗಳೂ ಇವೆ. ಯುದ್ಧ ಹಾಗೂ ತುರ್ತು ಸಂದರ್ಭಗಳಲ್ಲಿ ಅವರ ಸೇವೆ ಬಳಸಿಕೊಳ್ಳಬಹುದು ಎಂದು ಸಚಿವರು ಹೇಳಿದ್ದಾರೆ.

ಅಗ್ನಿಪಥ ಯೋಜನೆಯನ್ನು ವಿರೋಧಿಸಿ ಹಿಂಸಾತ್ಮಕ ಪ್ರತಿಭಟನೆ ನಡೆಸುತ್ತಿರುವವರಿಗೆ ಕುಮ್ಮಕ್ಕು ನೀಡುತ್ತಿರುವವರು (2ನೇ ಪುಟಕ್ಕೆ)

### ವಯೋಮಿತಿ 23ಕ್ಕೆ ಹೆಚ್ಚಳ

**ನವದೆಹಲಿ, ಜೂ. 17 – ಅಗ್ನಿಪಥ ಯೋಜನೆಯಡಿ ಸೈನ್ಯಕ್ಕೆ ಸೇರ್ಪಡೆಯಾಗುವ ಸೈನಿಕರ ವಯೋಮಿತಿಯನ್ನು ಕೇಂದ್ರ ಸರ್ಕಾರ 21ರಿಂದ 23ಕ್ಕೆ ಹೆಚ್ಚಿಸಿದೆ. ನಾಲ್ಕು ವರ್ಷಗಳ ಅವಧಿಗಾಗಿ ಸೈನ್ಯ, ವಾಯುದಳ ಹಾಗೂ ನೌಕಾ ದಳಕ್ಕೆ ನಾಲ್ಕು ವರ್ಷಗಳ ಅಲ್ಪಾವಧಿಗೆ ಸೇರ್ಪಡೆ ಯಾಗಲು ಈ ಯೋಜನೆ ರೂಪಿಸಲಾಗಿತ್ತು.**

### ವಯೋಮಿತಿ ಹೆಚ್ಚಳಕ್ಕೆ ಬೊಮ್ಮಾಯಿ ಸ್ವಾಗತ

ಬೆಂಗಳೂರು, ಜೂ. 17 - ಅಗ್ನಿಪಥ ಯೋಜನೆಯಡಿ ನೇಮಕಾತಿ ವಯೋಮಿತಿಯನ್ನು 21 ರಿಂದ 23 ವರ್ಷಕ್ಕೆ ಏರಿಸುವ ಮೂಲಕ ಪ್ರಧಾನಮಂತ್ರಿ ನರೇಂದ್ರ ಮೋದಿ ನೇತೃತ್ವದ ಎನ್‌ಡಿಎ ಸರ್ಕಾರ ಜನರ ಅಗತ್ಯಗಳಿಗೆ ಸ್ಪಂದಿಸಿದೆ ಎಂಬುದನ್ನು ನಿರೂಪಿಸಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದ್ದಾರೆ.

ಕಳೆದ ಎರಡು ವರ್ಷಗಳಿಂದ ರಕ್ಷಣಾ ಪಡೆಗಳಿಗೆ ನೇಮಕಾತಿ ನಡೆದಿರಲಿಲ್ಲ, ಮೊದಲ ವರ್ಷದ ನೇಮಕಾತಿಯಲ್ಲಿ ವಯೋಮಿತಿಯನ್ನು ಹೆಚ್ಚಿಸಲಾಗಿದೆ. ಈ ನಿರ್ಧಾರದಿಂದ ದೊಡ್ಡ ಸಂಖ್ಯೆಯಲ್ಲಿ ಯುವಜನರಿಗೆ ಪ್ರಯೋಜನವಾ ಗಲಿದೆ ಎಂದವರು (2ನೇ ಪುಟಕ್ಕೆ)

## 'ಅಗ್ನಿಪಥ' : ಹಲವು ರಾಜ್ಯಗಳಲ್ಲಿ ಹಿಂಸಾಚಾರ

### ರೈಲು ಹಾಗೂ ಬಸ್ ಸೇರಿದಂತೆ ಸರ್ಕಾರಿ, ಖಾಸಗಿ ಆಸ್ತಿಗಳ ನಾಶ

### ಬಿಹಾರದ ಉಪ ಮುಖ್ಯಮಂತ್ರಿ ಮನೆ ಮೇಲೆ ದಾಳಿ

ನವದೆಹಲಿ, ಜೂ. 17 – ಸೈನ್ಯಕ್ಕೆ ಸೇರ್ಪಡೆಯ ಹೊಸ ಯೋಜನೆಯಾದ ಅಗ್ನಿಪಥದ ವಿರುದ್ಧ ದೇಶದ ಹಲವೆಡೆ ಹಿಂಸಾಚಾರ ನಡೆಸಲಾಗಿದ್ದು, ತೆಲಂಗಾಣದ ಸಿಕಂದರಾಬಾದ್‌ನಲ್ಲಿ ಪೊಲೀಸರ ಗುಂಡಿಗೆ ಸಿಲುಕಿ ಒಬ್ಬರು ಮೃತಪಟ್ಟಿದ್ದಾರೆ.

ಹಲವಾರು ರಾಜ್ಯಗಳಲ್ಲಿ ಉದ್ರಿಕ್ತರ ಗುಂಪು ರೈಲು, ಬಸ್, ಹಾಗೂ ಖಾಸಗಿ ವಾಹನಗಳಿಗೆ ಬೆಂಕಿ ಹಚ್ಚಿದೆ. ಹಲವು ನಗರಗಳ ರೈಲ್ವೆ ನಿಲ್ದಾಣಗಳ ಮೇಲೆ ದಾಳಿ ನಡೆಸಲಾಗಿದ್ದು, ಹೆದ್ದಾರಿಗಳಲ್ಲಿ ಹೆದರಿಕೆಯ ವಾತಾವರಣ ಮೂಡಿಸಲಾಗಿದೆ.

ಹಿಂಸಾಚಾರದ ನಂತರ 300ಕ್ಕೂ ಹೆಚ್ಚು ರೈಲುಗಳ ಪ್ರಯಾಣಕ್ಕೆ ಅಡ್ಡಿಯಾಗಿದೆ. 200 ರೈಲುಗಳನ್ನು ರದ್ದುಗೊಳಿಸಲಾಗಿದೆ ಎಂದು ರೈಲ್ವೆ ತಿಳಿಸಿದೆ.

ಇದುವರೆಗೂ ಏಳು ಬೋಗಿಗಳನ್ನು ಸುಡಲಾಗಿದೆ. ಬಿಹಾರದ ಹಾಜಿಪುರದಲ್ಲಿ ಚಲಿಸುತ್ತಿರುವ ರೈಲುಗಳಿಗೂ ಬೆಂಕಿ ಹಚ್ಚಿದ ಘಟನೆಗಳು ನಡೆದಿವೆ. ಉತ್ತರ ಪ್ರದೇಶದ ಬಲಿಯಾ ಜಿಲ್ಲೆಯಲ್ಲಿ ಒಂದು ಬೋಗಿಗೆ ಹಾನಿ ಮಾಡಲಾಗಿದೆ.

ಉತ್ತರ ಪ್ರದೇಶ, ತೆಲಂಗಾಣ, ಬಿಹಾರ, ಮಧ್ಯ (2ನೇ ಪುಟಕ್ಕೆ)







## ಸಿಕಂದರಾಬಾದ್ ರೈಲ್ವೆ ನಿಲ್ದಾಣದ ಮೇಲೆ ಪ್ರಕ್ಷುಬ್ಧರ ದಾಳಿ

### ಪೊಲೀಸ್ ಗುಂಡಿಗೆ ಓರ್ವನ ಸಾವು, ಎಂಟು ಜನರಿಗೆ ತೀವ್ರ ಗಾಯ

### ರೈಲುಗಳಿಗೆ ಬೆಂಕಿ - ನಿಲ್ದಾಣ ಧ್ವಂಸ, ಭಯಭೀತಗೊಂಡ ಜನರು; ಪ್ರಯಾಣಿಕರಿಗೂ ಕಲ್ಲೇಟಿನ ಗಾಯ

ಹೈದರಾಬಾದ್, ಜೂ. 17 – ಸೈನ್ಯ ಸೇರ್ಪಡೆಯ ಅಗ್ನಿಪಥ ಯೋಜನೆಯನ್ನು ವಿರೋಧಿಸಿ ತೆಲಂಗಾಣದ ಸಿಕಂದರಾಬಾದ್‌ನಲ್ಲಿ ಹಿಂಸಾತ್ಮಕ ಪ್ರತಿಭಟನೆ ನಡೆಸುತ್ತಿದ್ದವರನ್ನು ಚೆದುರಿಸಲು ಪೊಲೀಸರು ನಡೆಸಿದ ಗೋಲಿಬಾರ್‌ನಲ್ಲಿ ಓರ್ವ ವ್ಯಕ್ತಿ ಸಾವನ್ನಪ್ಪಿದ್ದು, ಎಂಟು ಜನ ತೀವ್ರವಾಗಿ ಗಾಯಗೊಂಡಿದ್ದಾರೆ.

ಗಾಯಗೊಂಡವರನ್ನು ಸಿಕಂದ (2ನೇ ಪುಟಕ್ಕೆ)

## ಮುಂದಿನ ವಾರದಿಂದ ಅಗ್ನಿಪಥ ನೇಮಕ

### ಸೈನ್ಯದ ಮೂರೂ ವಿಭಾಗಗಳಿಗೆ ನೇಮಕಾತಿ ಪ್ರಕ್ರಿಯೆ ಆರಂಭ

ನವದೆಹಲಿ, ಜೂ. 17 – ಅಗ್ನಿಪಥ ಯೋಜನೆಯಡಿ ಸೈನ್ಯದ ನೇಮಕಾತಿಯನ್ನು ಮುಂದಿನ ವಾರದಿಂದ ಆರಂಭಿಸುವುದಾಗಿ ಸೈನ್ಯ, ನೌಕಾ ದಳ ಹಾಗೂ ವಾಯುಪಡೆಗಳು ಘೋಷಿಸಿವೆ.

ಸೈನ್ಯಕ್ಕೆ ಸೇರಲು ಬಯಸುವ ಯುವಕರು ಸಿದ್ಧತೆ ಮಾಡಿಕೊಳ್ಳುವಂತೆ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಮನವಿ ಮಾಡಿಕೊಂಡಿದ್ದಾರೆ.

ಜೂನ್ 24ರಿಂದ ವಾಯುಪಡೆಗೆ ನೂತನ ನಿಯಮಗಳ ಅನ್ವಯ ಪ್ರವೇಶ ಆರಂಭವಾಗಲಿದೆ. ಆರಂಭಿಕ (2ನೇ ಪುಟಕ್ಕೆ)

## ಇಂದು ದ್ವಿತೀಯ ಪಿಯು ಪರಿಕ್ಷಾ ಫಲಿತಾಂಶ

ಬೆಂಗಳೂರು, ಜೂ. 17 - ದ್ವಿತೀಯ ಪಿಯುಸಿ ಪರೀಕ್ಷಾ ಫಲಿತಾಂಶ ನಾಳೆ ಶನಿವಾರ ಬೆಳಗ್ಗೆ 11 ಗಂಟೆಗೆ ಪ್ರಕಟವಾಗಲಿದೆ.

ಕಳೆದ ಏ.22ರಿಂದ ಮೇ 18ರ ವರೆಗೆ ನಡೆದ ದ್ವಿತೀಯ ಪಿಯುಸಿ ಪರೀಕ್ಷಾ ಫಲಿತಾಂಶವನ್ನು ಶನಿವಾರ ಬೆಳಗ್ಗೆ 11 ಗಂಟೆಗೆ ಪ್ರಕಟಿಸಲಾಗುವುದು ಎಂದು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಬಿ.ಸಿ.ನಾಗೇಶ್ ತಿಳಿಸಿದ್ದಾರೆ.

ರಾಜ್ಯಾದ್ಯಂತ ಒಟ್ಟು 6,84,255 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದರು. ಇದರಲ್ಲಿ 3,46,936 ಬಾಲಕರು, 3,37,319 ಬಾಲಕಿಯರು ಸೇರಿದಂತೆ 6,00,519 ಮಂದಿ ರೆಗ್ಯೂಲರ್ ವಿದ್ಯಾರ್ಥಿಗಳಾಗಿದ್ದರೆ, 61,808 ಪುನರಾವರ್ತಿತ, 28,928 ಮಂದಿ ಖಾಸಗಿ ಅಭ್ಯರ್ಥಿಗಳಾಗಿದ್ದರು. ಕಲಾ ವಿಭಾಗದಿಂದ 2,28,167, ವಾಣಿಜ್ಯ ವಿಭಾಗದಿಂದ 2,45,591 ಹಾಗೂ 2,10, 569 ವಿದ್ಯಾರ್ಥಿಗಳು ವಿಜ್ಞಾನ ವಿಭಾಗದವರಾಗಿದ್ದಾರೆ.

ಸರ್ಕಾರದ ಅಧಿಕೃತ ವೆಬ್‌ಸೈಟ್ ಹೊರತುಪಡಿಸಿ ಖಾಸಗಿ ವೆಬ್‌ಸೈಟ್‌ನಲ್ಲಿ ಪ್ರಕಟವಾಗುವ ಫಲಿತಾಂಶವನ್ನು ವಿದ್ಯಾರ್ಥಿಗಳು, ಪೋಷಕರು ಪರಿಗಣಿಸಬಾರದು ಎಂದು ಪದವಿ ಪೂರ್ವ ಶಿಕ್ಷಣ ಮಂಡಳಿ ತಿಳಿಸಿದೆ.

## ಜಿಎಸ್‌ಟಿ ದರ ಪರಿಷ್ಕರಣೆಗೆ ಒಮ್ಮತವಿಲ್ಲ

ನವದೆಹಲಿ, ಜೂ. 17 – ಜಿ.ಎಸ್.ಟಿ. ತೆರಿಗೆ ದರ ಪರಿಷ್ಕರಣೆಗೆ ಸಂಬಂಧಿಸಿದಂತೆ ಒಮ್ಮತಕ್ಕೆ ಬರಲು ಸಚಿವರ ಸಮಿತಿ ವಿಫಲವಾಗಿದೆ ಎಂದು ಮೂಲಗಳು ತಿಳಿಸಿವೆ. ಆದರೆ, ಒಮ್ಮತಕ್ಕೆ ಬರಲಾದ ಬೇರೆ ವಿಷಯಗಳ ಕುರಿತು ಸಚಿವರ ಸಮಿತಿ ತನ್ನ ವರದಿಯನ್ನು ಜಿ.ಎಸ್.ಟಿ. ಮಂಡಳಿಗೆ ಸಲ್ಲಿಸಲಿದೆ. ಅಂತಿಮ ವರದಿ ಸಲ್ಲಿಸಲು ಸಚಿವರ ಸಮಿತಿ ಹೆಚ್ಚಿನ (2ನೇ ಪುಟಕ್ಕೆ)



## ಕೇಂದ್ರ ಸರ್ಕಾರದಿಂದ ಇಡಿ ದುರ್ಬಳಕೆ

### ಬಿಜೆಪಿ ಸರ್ಕಾರದ ವಿರುದ್ಧ ಜಿಲ್ಲಾ ಕಾಂಗ್ರೆಸ್ ಆಕ್ರೋಶ-ಪ್ರತಿಭಟನೆ

ದಾವಣಗೆರೆ, ಜೂ.17- ಎಐಸಿಸಿ ಅಧ್ಯಕ್ಷೆ ಸೋನಿಯಾ ಗಾಂಧಿ ಮತ್ತು ಕಾಂಗ್ರೆಸ್ ಪಕ್ಷದ ನಾಯಕ ರಾಹುಲ್ ಗಾಂಧಿ ಅವರಿಗೆ ಕೇಂದ್ರ ಬಿಜೆಪಿ ಸರ್ಕಾರ ರಾಜಕೀಯ ದುರುದ್ದೇಶದಿಂದ ಇಡಿ ನೋಟಿಸ್ ನೀಡಿರುವುದಾಗಿ ಆರೋಪಿಸಿ ಜಿಲ್ಲಾ ಕಾಂಗ್ರೆಸ್ ವತಿಯಿಂದ ನಗರದಲ್ಲಿ ಇಂದು ಪ್ರತಿಭಟನೆ ನಡೆಸಲಾಯಿತು.

ಪಕ್ಷದ ಜಿಲ್ಲಾಧ್ಯಕ್ಷ ಹೆಚ್.ಬಿ. ಮಂಜಪ್ಪ ನೇತೃತ್ವದಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ವೃತ್ತದಲ್ಲಿರುವ ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡಿ ನಂತರ ಬೃಹತ್ ಪ್ರತಿಭಟನಾ ಮೆರವಣಿಗೆ ಮುಖೇನ ಜಯದೇವ ವೃತ್ತಕ್ಕೆ ಆಗಮಿಸಿ ಇಡಿ, ಪೊಲೀಸ್, ಸಿಬಿಐ ಬಿಜೆಪಿ ಕಪಿಮುಷ್ಠಿಯಲ್ಲಿರುವುದಾಗಿ ಬೋರ್ಡ್‌ನಲ್ಲಿ ಈ ಮೂರು ಇಲಾಖೆಗಳ ಭಿತ್ತಿ ಪತ್ರಗಳನ್ನಿಟ್ಟು ಪ್ರದರ್ಶಿಸಲಾಯಿತು.

ಬಳಿಕ ಉಪವಿಭಾಗಾಧಿಕಾರಿಗಳ ಕಚೇರಿಗೆ ತೆರಳಿ ರಾಷ್ಟ್ರಪತಿಗಳಿಗೆ ಉಪವಿಭಾಗಾಧಿಕಾರಿಗಳ ಮೂಲಕ ಮನವಿ ಸಲ್ಲಿಸಲಾಯಿತು.

ದೆಹಲಿಯಲ್ಲಿ ಕೇಂದ್ರ ಬಿಜೆಪಿ ಸರ್ಕಾರ ಇಡಿ ದುರ್ಬಳಕೆ ಮಾಡಿಕೊಂಡು ಕಾಂಗ್ರೆಸ್ ನಾಯಕರಿಗೆ ನೀಡುತ್ತಿರುವ ಕಿರುಕುಳದ ವಿರುದ್ಧ ಕಾಂಗ್ರೆಸ್ ಸಂಸದರು ಮತ್ತು ಎಐಸಿಸಿ ನಾಯಕರು ಪ್ರತಿಭಟನೆ ಮಾಡುವುದನ್ನು ಹತ್ತಿಕ್ಕುವ ಜೊತೆಗೆ, ಪ್ರತಿಭಟನೆಗೆ ಅವಕಾಶವನ್ನೂ ನೀಡದೆ ಎಐಸಿಸಿ ಕಚೇರಿಯ ಆವರಣದಲ್ಲಿ ಬಂಧನ ಮಾಡಿರುವುದಾಗಿ ಮಂಜಪ್ಪ ಆಕ್ರೋಶ ವ್ಯಕ್ತಪಡಿಸಿದರು.

ಎಐಸಿಸಿ ಅಧ್ಯಕ್ಷೆ ಸೋನಿಯಾ ಗಾಂಧಿ ಮತ್ತು ರಾಹುಲ್ ಗಾಂಧಿ ಅವರನ್ನು ಕೇಂದ್ರ ಬಿಜೆಪಿ ಸರ್ಕಾರ ಜಾರಿ ನಿರ್ದೇಶನಾಲಯದ ಮೂಲಕ ವಿಚಾರಣೆ ಮಾಡುತ್ತಿರುವುದು ರಾಜಕೀಯ ದುರುದ್ದೇಶವಾಗಿದೆ. ಬಿಜೆಪಿ ಸರ್ಕಾರ ದ್ವೇಷದ ರಾಜಕಾರಣ ಮಾಡುತ್ತಿದೆ. ಸ್ವತಂತ್ರ ಸಂಸ್ಥೆಗಳಾದ ಇ.ಡಿ, ಸಿಬಿಐಗಳನ್ನು ತನ್ನ ಕೈಗೊಂಬೆಯನ್ನಾಗಿಸಿ ಕೊಂಡು ಈ ದೇಶದಲ್ಲಿ ವಿರೋಧ ಪಕ್ಷಗಳ ಬಾಯಿ ಮುಚ್ಚಿಸುವ ಕೆಲಸ ಮಾಡುತ್ತಿದೆ. ದೇಶದ ಜನರು ಇದನ್ನು ಸುಮ್ಮನೆ ನೋಡುತ್ತಿದ್ದಾರೆ. ಕಾಲ ಬಂದಾಗ ತಕ್ಕ ಪಾಠ ಕಲಿಸಲಿದ್ದಾರೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಮಾಜಿ ಶಾಸಕ ಶಿವಮೂರ್ತಿ ನಾಯ್ಕ, ಕೆಪಿಸಿಸಿ ವಕ್ತಾರ ಡಿ. ಬಸವರಾಜ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ.ಶೆಟ್ಟಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕೆ.ಜಿ. ಶಿವಕುಮಾರ್, ಪಾಲಿಕೆ ವಿರೋಧ ಪಕ್ಷದ ನಾಯಕ ಮಂಜುನಾಥ ಗಡಿಗುಡಾಳ್, ಸದಸ್ಯರಾದ ಎ. ನಾಗರಾಜ್, ಸೈಯದ್ ಚಾರ್ಲಿ, ಮುಖಂಡರಾದ ಎಲ್.ಹೆಚ್. ಸಾಗರ್, ರೇವಣಸಿದ್ದಪ್ಪ, ಎಸ್.ಎಂ. ರುದ್ರೇಶ್ ಮತ್ತು ಇತರರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

## 81 ಕೈಗಾರಿಕಾ ಯೋಜನೆಗಳಿಗೆ ಸರ್ಕಾರದ ಅನುಮೋದನೆ

### 2,689 ಕೋಟಿ ರೂ. ಹೂಡಿಕೆಯ ನಿರೀಕ್ಷೆ

ಬೆಂಗಳೂರು, ಜೂ. 17 - ರಾಜ್ಯದಲ್ಲಿ ಕೈಗಾರಿಕಾ ಬೆಳವಣಿಗೆಗೆ ಮತ್ತಷ್ಟು ಉತ್ತೇಜನ ನೀಡಿ ಉದ್ಯೋಗಗಳ ಸೃಷ್ಟಿಗೆ ಒತ್ತು ನೀಡಿರುವ ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯು, 2,689.51 ಕೋಟಿ ರೂ. ಮೌಲ್ಯದ 81 ಕೈಗಾರಿಕಾ ಯೋಜನೆಗಳಿಗೆ ಸರ್ಕಾರ ಅನುಮೋದನೆ ನೀಡಿದೆ.

ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಡಾ.ಮುರುಗೇಶ್ ಆರ್. ನಿರಾಣಿ ನೇತೃತ್ವದಲ್ಲಿ ನಡೆದ 132ನೇ ರಾಜ್ಯ ಮಟ್ಟದ ಏಕ ಗವಾಕ್ಷಿ ತೆರವು ಸಮಿತಿ (ಎಸ್‌ಎಲ್‌ಎಸ್‌ಡಬ್ಲ್ಯುಸಿಸಿ) ಸಭೆ ಈ ಯೋಜನೆಗಳಿಗೆ ಅನುಮೋದನೆ ನೀಡಿತು.

ಸಮಿತಿಯು 50 ಕೋಟಿ ರೂ.ಗಿಂತ ಹೆಚ್ಚಿನ ಹೂಡಿಕೆಯ 7 ಪ್ರಮುಖ ಬೃಹತ್ ಮತ್ತು ಮಧ್ಯಮ ಗಾತ್ರದ ಕೈಗಾರಿಕಾ ಯೋಜನೆಗಳನ್ನು ಪರಿಗಣಿಸಿ ಅನುಮೋದನೆ ನೀಡಿದೆ. 1,229.43 ರೂ. ಮೌಲ್ಯದ ಈ ಯೋಜನೆಗಳು ರಾಜ್ಯದಲ್ಲಿ 1,734 ಜನರಿಗೆ ಉದ್ಯೋಗಾವಕಾಶಗಳನ್ನು ಸೃಷ್ಟಿಸುವ ನಿರೀಕ್ಷೆಯಿದೆ ಎಂದು ನಿರಾಣಿ ತಿಳಿಸಿದ್ದಾರೆ.

ಎಸ್‌ಎಲ್‌ಎಸ್‌ಡಬ್ಲ್ಯುಸಿಸಿ ಸಭೆಯಲ್ಲಿ 15 ಕೋಟಿ ರೂ.ಗಿಂತ (2ನೇ ಪುಟಕ್ಕೆ)

## 23-24ರಂದು ಆರೆಸ್ಸೆಸ್ ಬೈಠಕ್

### ಸರ್ಕಾರದ ಕಾರ್ಯನಿರ್ವಹಣೆ, ಹಿಂದುತ್ವದ ಚರ್ಚೆ

ಬೆಂಗಳೂರು, ಜೂ. 17 - ಬರುವ ಜೂನ್ 23 ಹಾಗೂ 24ರಂದು ಆರ್‌ಎಸ್‌ಎಸ್ ಎರಡು ದಿನಗಳ ಕಾಲ ಬೈಠಕ್ ನಡೆಸಲಿದೆ. ಈ ಸಂದರ್ಭದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನೇತೃತ್ವದ ಕಾರ್ಯ ನಿರ್ವಹಣೆ ಕುರಿತು ಪ್ರಮುಖವಾಗಿ ಚರ್ಚೆ ನಡೆಯಲಿದೆ.

ಕೇಶವ ಶಿಲ್ಪದಲ್ಲಿ ಸರ್ಕಾರದ ಕಾರ್ಯ ವೈಖರಿ ಹಾಗೂ ಹಿಂದುತ್ವ ಪ್ರತಿ ಪಾದನಾ ವಿಷಯಗಳಿಗೆ ಸಂಬಂಧಿಸಿದಂತೆ ಬೈಠಕ್ ನಡೆಸಲಿದೆ. ಬಸವರಾಜ ಬೊಮ್ಮಾಯಿ ಅವರ ಸಂಪುಟದಲ್ಲಿ ಆಯ್ದ ಕೆಲವು ಸಚಿವರು ಬೈಠಕ್‌ನಲ್ಲಿ ಪಾಲ್ಗೊಳ್ಳಲಿದ್ದಾರೆ.

ಈ ಸಂದರ್ಭದಲ್ಲಿ ತಮ್ಮ ಎಲ್ಲಾ ಕಾರ್ಯಕ್ರಮಗಳನ್ನು ರದ್ದುಗೊಳಿಸಿ ನಗರದಲ್ಲೇ ಉಳಿಯಬೇಕು ಹಾಗೂ ಸಂಘ ಆಹ್ವಾನಿಸಿದಾಗ ಕೇಶವ ಶಿಲ್ಪಕ್ಕೆ ಬರಬೇಕು ಎಂದು ಈಗಾಗಲೇ ಸೂಚನೆ ಹೋಗಿದೆ.

ಬೈಠಕ್ ಸಂದರ್ಭದಲ್ಲಿ ಬಿಜೆಪಿ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಬಿ.ಎಲ್. ಸಂತೋಷ್, ಸಂಘ ಪರಿವಾರದ ಮುಕುಂದ್, (2ನೇ ಪುಟಕ್ಕೆ)

## ರಾಣೇಬೆನ್ನೂರು: ಎಇ ಮನೆ ಮೇಲೆ ದಾಳಿ: ನಗದು, ಚಿನ್ನಾಭರಣ ಪತ್ತೆ

ರಾಣೇಬೆನ್ನೂರು, ಜೂ.17- ಆದಾಯಕ್ಕಿಂತ ಅಧಿಕ ಆಸ್ತಿ ಹೊಂದಿರುವ ಆರೋಪದ ಮೇಲೆ ಎಸಿಬಿ ಅಧಿಕಾರಿಗಳು ಶುಕ್ರವಾರ ನಗರದ ಮಾಗೋಡ ರಸ್ತೆ ಅಪ್ಪರ್ ತುಂಗಾ ಯೋಜನೆ (ಯುಟಿಪಿ) ಕಚೇರಿಯ ಸಹಾಯಕ ಎಂಜಿನಿಯರ್ (ಎಇ) ಚಂದ್ರಪ್ಪ ಓಲೇಕಾರ ಅವರಿಗೆ ಸೇರಿದ ಇಲ್ಲಿನ ಸಿದ್ಧಾರೂಢನಗರದ ಬಳಿಯ ಮನೆ, ಬ್ಯಾಡಗಿ ತಾಲ್ಲೂಕಿನ ಆಣೂರು ಗ್ರಾಮದಲ್ಲಿನ ಮನೆಗಳ ಮೇಲೆ ಏಕ ಕಾಲಕ್ಕೆ ದಾಳಿ ನಡೆಸಿ ಕಾಗದ ಪತ್ರಗಳ ಪರಿಶೀಲನೆ ನಡೆಸಿದರು.



ರಾಣೇಬೆನ್ನೂರಿನ ಸಿದ್ಧಾರೂಢನಗರದ ಮನೆಯಲ್ಲಿ ಅರ್ಧ ಕೆಜಿ ಬಂಗಾರ, ಒಂದೂವರೆ ಕೆಜಿ ಬೆಳ್ಳಿ, 13 ಲಕ್ಷ ನಗದು, ಚಂದ್ರಪ್ಪನವರ ಪತ್ನಿಯ ಹೆಸರಿನಲ್ಲಿ ಮೂರು, ತಾಯಿ ಮತ್ತು ತಮ್ಮ (ಚಂದ್ರಪ್ಪ) ಹೆಸರಿನಲ್ಲಿ ತಲಾ ಒಂದು ನಿವೇಶನಗಳಿವೆ. ಮೈದೂರಿನಲ್ಲಿ 25 ಎಕರೆ ಜಮೀನು ಹಾಗೂ ಬ್ಯಾಡಗಿ ತಾಲೂಕಿನ ಆಣೂರು ಗ್ರಾಮದಲ್ಲಿ 12 ಎಕರೆ ಜಮೀನು ಹೊಂದಿರುವುದು ಕಂಡುಬಂದಿದೆ.

ಚಂದ್ರಪ್ಪನವರ ಸ್ವಂತ ಊರು ಬ್ಯಾಡಗಿ ತಾಲ್ಲೂಕಿನ ಆಣೂರ ಗ್ರಾಮ. 2009ರಲ್ಲಿ ಲೋಕೋಪಯೋಗಿ ಇಲಾಖೆ ಮೂಲಕ ಕೆಲಸಕ್ಕೆ ಸೇರಿದ್ದು 2013ರಿಂದ ಇಲ್ಲಿನ ಮಾಗೋಡ ರಸ್ತೆಯ ಯುಟಿಪಿ ಕಚೇರಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ.

## ಲೌಡ್‌ಸ್ಪೀಕರ್ ನಿಯಮ ಕಟ್ಟುನಿಟ್ಟಾಗಿ ಪಾಲಿಸಲು ಹೈಕೋರ್ಟ್ ಸೂಚನೆ

ಬೆಂಗಳೂರು, ಜೂ. 17 – ಲೌಡ್‌ಸ್ಪೀಕರ್‌ಗಳನ್ನು ರಾತ್ರಿ 10ರಿಂದ ಬೆಳಿಗ್ಗೆ 6ರ ನಡುವೆ ಬಳಸದಂತೆ ರೂಪಿಸಲಾಗಿರುವ ನಿಯಮವನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ನಿರ್ದೇಶನ ನೀಡಿದೆ.



ಹೋಟೆಲ್, ಪಬ್ ಹಾಗೂ ಧಾರ್ಮಿಕ ಸ್ಥಳಗಳೂ ಸೇರಿದಂತೆ ಎಲ್ಲೆಡೆ ನಿಯಮ ಪಾಲನೆಯಾಗಬೇಕು. ಲೌಡ್‌ಸ್ಪೀಕರ್ ದುರ್ಬಳಕೆ ತಡೆಯಲು ಅಭಿಯಾನ ನಡೆಸಬೇಕು. ಈ ಬಗ್ಗೆ ಮೂರು ವಾರಗಳಲ್ಲಿ ವರದಿ ಸಲ್ಲಿಸಬೇಕು ಎಂದು ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ನಿರ್ದೇಶನ ನೀಡಿದೆ.

ಕೆಲ ಸಂಸ್ಥೆಗಳು ಹಾಗೂ ಧಾರ್ಮಿಕ ಸ್ಥಳಗಳು ಲೌಡ್‌ಸ್ಪೀಕರ್ ಬಳಸಲು ಅಕ್ರಮವಾಗಿ ಶಾಶ್ವತ ಅನುಮತಿ ನೀಡಲಾಗಿದೆ ಎಂದು ನ್ಯಾಯಾಲಯದ ಎದುರು ದೂರಲಾಗಿತ್ತು. ಆದರೆ, ಆ ರೀತಿಯ ಯಾವುದೇ ಅನುಮತಿ ನೀಡಿಲ್ಲ ಎಂದು ರಾಜ್ಯ ಸರ್ಕಾರ ಸ್ಪಷ್ಟಪಡಿಸಿದೆ.

## 500 ವರ್ಷಗಳ ನಂತರ ಮಹಾಕಾಳಿ ದೇವಾಲಯದಲ್ಲಿ ಧ್ವಜಾರೋಹಣ

### ಇಂದು ನವೀಕೃತ ದೇವಾಲಯ ಉದ್ಘಾಟಿಸಲಿರುವ ಪ್ರಧಾನಿ

ಅಹಮದಾಬಾದ್, ಜೂ. 17 – ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಗುಜರಾತ್‌ನ ಪಂಚಮಹಲ್ ಜಿಲ್ಲೆಯಲ್ಲಿರುವ ಪ್ರಸಿದ್ಧ ಮಹಾಕಾಳಿ ದೇವಾಲಯದಲ್ಲಿ ಸಾಂಪ್ರದಾಯಿಕ ಧ್ವಜಾರೋಹಣ ನೆರವೇರಿಸಲಿದ್ದಾರೆ.

ದೇವಾಲಯದ ಮೇಲಿದ್ದ ದರ್ಗಾವನ್ನು ಸ್ಥಳಾಂತರ ಮಾಡಿದ ಹಿನ್ನೆಲೆಯಲ್ಲಿ, 500 ವರ್ಷಗಳ ನಂತರ ದೇವಾಲಯದ ಶಿಖರದ ಮೇಲೆ ಸಾಂಪ್ರದಾಯಿಕ ಧ್ವಜ ಹಾರಲಿದೆ.

500 ವರ್ಷಗಳ ಹಿಂದೆ ಸುಲ್ತಾನ್ ಮಹಮದ್ ಬೇಗಡ ದೇವಾಲಯದ ಶಿಖರ ನಾಶಗೊಳಿಸಿದ್ದ. ಈಗ ಸರ್ವಸಮ್ಮತಿಯ ನಂತರ ದರ್ಗಾ ಸ್ಥಳಾಂತರಿಸಲಾಗಿದೆ. ದೇವಾಲಯವನ್ನು ಮರು ಅಭಿವೃದ್ಧಿಪಡಿಸಲಾಗಿದೆ.

ಶನಿವಾರ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ನವೀಕೃತ ಮಹಾಕಾಳಿ ದೇವಾಲಯವನ್ನು ಉದ್ಘಾಟಿಸಲಿದ್ದಾರೆ. ಇದೇ ವೇಳೆ ಅವರು ಶಿಖರದ ಮೇಲೆ ಧ್ವಜವನ್ನೂ ಹಾರಿಸಲಿದ್ದಾರೆ.

ದೇವಾಲಯವು ಯುನೆಸ್ಕೋದ ವಿಶ್ವ ಪಾರಂಪರಿಕ ತಾಣವಾದ ಚಂಪನೇರ್ - ಪಾವಘಡ ಆರ್ಕಿಯಾಲಜಿಕಲ್ ಪಾರ್ಕ್ ಪ್ರದೇಶದಲ್ಲಿದೆ.

15ನೇ ಶತಮಾನದಲ್ಲಿ ಸುಲ್ತಾನ್ ಮೊಹಮ್ಮದ್ ಬೇಗಡ ಚಂಪನೇರ್ ಮೇಲೆ ದಾಳಿ ನಡೆಸಿದಾಗ ದೇವಾಲಯಕ್ಕೆ ಹಾನಿಪಡಿಸಲಾಗಿತ್ತು. ನಂತರ ಮುಸ್ಲಿಮ್ ಸಂತ ಸಾದನ್‌ಷಾ ಪೀರ್ ದರ್ಗಾ ಅನ್ನು ದೇವಾಲಯದ ಮೇಲೆ ನಿರ್ಮಿಸಲಾಗಿತ್ತು ಎಂದು ದೇವಾಲಯದ ಟ್ರಸ್ಟಿ ಅಶೋಕ್ ಪಾಂಡ್ಯ ತಿಳಿಸಿದ್ದಾರೆ.

ಇದುವರೆಗೂ ದೇವಾಲಯದ ಮೇಲೆ ಧ್ವಜ ಹಾರಿಸಲು ಸಾಧ್ಯವಾಗುತ್ತಿರಲಿಲ್ಲ. ಮರು ನಿರ್ಮಾಣದ ವೇಳೆ ದರ್ಗಾ ನಿರ್ವಹಿಸುತ್ತಿದ್ದವರಿಗೆ ಮನವಿ ಮಾಡಿಕೊಂಡ ನಂತರ, ಅವರು ದರ್ಗಾ ಸ್ಥಳಾಂತರಕ್ಕೆ ಒಪ್ಪಿದರು ಎಂದು ಪಾಂಡ್ಯ (2ನೇ ಪುಟಕ್ಕೆ)

## ಜಿಲ್ಲೆಯ ಮೂರು ಕಡೆ ಯೋಗ ಕಾರ್ಯಕ್ರಮ

### ಸಂತೇಬೆನ್ನೂರು ಪುಷ್ಕರಣಿ, ಹರಿಹರದ ಹರಿಹರೇಶ್ವರ ದೇವಸ್ಥಾನ, ಹೊನ್ನಾಳಿಯ ಚನ್ನಪ್ಪ ಸ್ವಾಮಿ ದೇವಸ್ಥಾನದಲ್ಲಿ ಏಕಕಾಲದಲ್ಲಿ ಯೋಗ ದಿನಾಚರಣೆ

ದಾವಣಗೆರೆ, ಜೂ.17- ಜಿಲ್ಲಾ ಆಡಳಿತದಿಂದ ಜೂನ್ 21 ರಂದು ನಡೆಯುವ 8ನೇ ಅಂತರರಾಷ್ಟ್ರೀಯ ಯೋಗ ದಿನಾಚರಣೆಯನ್ನು ವಿಶೇಷವಾಗಿ ಆಚರಿಸಲಾಗುತ್ತಿದ್ದು, ಜಿಲ್ಲೆಯ 3 ಐತಿಹಾಸಿಕ ಸ್ಥಳಗಳಲ್ಲಿ ಯೋಗ ದಿನಾಚರಣೆಯನ್ನು ಮಾಡುವ ಮೂಲಕ ಯೋಗಾಭ್ಯಾಸ ಮಾಡಲಾಗುತ್ತದೆ ಎಂದು ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ ತಿಳಿಸಿದರು.

ಶುಕ್ರವಾರ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ಸಭೆಯ ನಂತರ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಜೂ.21 ರಂದು ಬೆಳಗ್ಗೆ 5.30 ರಿಂದ ಚನ್ನಗಿರಿ ತಾಲ್ಲೂಕು ಸಂತೆಬೆನ್ನೂರು ಐತಿಹಾಸಿಕ ಸ್ಥಳ ಪುಷ್ಕರಣಿ ಆವರಣ, ಹರಿಹರದ ಹರಿಹರೇಶ್ವರ ದೇವಸ್ಥಾನದ ಆವರಣ (2ನೇ ಪುಟಕ್ಕೆ)



## 23-24ರಂದು ಆರೆಸ್ಸೆಸ್ ಬೈಠಕ್

**(1ನೇ ಪುಟದಿಂದ)** ತಿಪ್ಪೇಸ್ವಾಮಿ, ಬಿಜೆಪಿಯ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ ಸೇರಿದಂತೆ ಪರಿವಾರದ ಇತರೆ ಸದಸ್ಯರು ಮುಖ್ಯಮಂತ್ರಿ ಹಾಗೂ ಸಚಿವರ ಜೊತೆ ಆಡಳಿತ ಮತ್ತು ಹಿಂದುತ್ವ ಪ್ರತಿಪಾದನೆ ಬಗ್ಗೆ ಚಿಂತನ-ಮಂಥನ ನಡೆಸಲಿದ್ದಾರೆ.

ರಾಜ್ಯ ವಿಧಾನಸಭಾ ಚುನಾವಣೆಗೆ ಇನ್ನು 9 ತಿಂಗಳು ಬಾಕಿ ಉಳಿದಿದೆ.ಈ ಹಂತದಲ್ಲಿ ಸರ್ಕಾರದ ವರ್ಚಸ್ಸು ಹೆಚ್ಚಾದರೆ ಪಕ್ಷದ ವರ್ಚಸ್ಸು ತಾನಾಗಿಯೇ ವೃದ್ಧಿಸುತ್ತದೆ ಎಂಬುದು ಆರ್.ಎಸ್.ಎಸ್. ನಿಲುವು.

ಕೆಲವು ಸಚಿವರು ಒಳ್ಳೆಯ ಆಡಳಿತ ನೀಡಿದರೂ ಅದನ್ನು ತಮ್ಮ ವೈಯಕ್ತಿಕ ವರ್ಚಸ್ಸು ವೃದ್ಧಿಗೆ ಬಳಕೆ ಮಾಡಿಕೊಳ್ಳುತ್ತಿದ್ದಾರೆಯೇ ಹೊರತು ಪಕ್ಷದ ಸಂಘಟನೆಗೆ ಗಮನ ಕೊಡುತ್ತಿಲ್ಲ ಎಂಬ ಆಕ್ಷೇಪಗಳೂ ಕೇಳಿ ಬರುತ್ತಿವೆ.

ಸರ್ಕಾರದ ವಿರುದ್ಧ ಭ್ರಷ್ಟಾಚಾರ ಮತ್ತು ಹಗರಣಗಳ ಆರೋಪ ಬಂದರೂ ಅದನ್ನು ಬಲವಾಗಿ ನಿರಾಕರಿಸುವ ಕೆಲಸವನ್ನೂ ಮಾಡಿಲ್ಲ, ವಿರೋಧಿಗಳಿಗೆ ಸೂಕ್ತ ಉತ್ತರವನ್ನೂ ನೀಡಿಲ್ಲ. ಪಠ್ಯ ಪುಸ್ತಕ ವಿಚಾರದಲ್ಲಿ ಬುದ್ಧ, ಅಂಬೇಡ್ಕರ್, ಬಸವಣ್ಣ, ಕುವೆಂಪು ವಿಷಯದಲ್ಲಿ ಸರ್ಕಾರ ಸಂಪೂರ್ಣವಾಗಿ ಎಡವಿದೆ ಎಂಬ ಟೀಕೆಗಳೂ ಕೇಳಿಬರುತ್ತಿವೆ.

ಪ್ರತಿಪಕ್ಷದ ಸದಸ್ಯರು ಮತ್ತು ಬುದ್ಧಿ ಜೀವಿಗಳು ಟೀಕಾಪ್ರಹಾರ ಮಾಡಿದ ಸಂದರ್ಭದಲ್ಲಿ ಸಚಿವರು ಸಮಜಾಯಿಷಿ ನೀಡುವ ಕಾರ್ಯವನ್ನೂ ಮಾಡಿಲ್ಲ, ಈ ವಿಚಾರದಲ್ಲಿ ಪೂರ್ಣವಾಗಿ ಎಡವಿದ್ದಾರೆ.

ಪ್ರಜ್ಞಾವಂತ ಮತದಾರರ ಕ್ಷೇತ್ರದಲ್ಲೂ ಪರಿಷತ್ ಚುನಾವಣೆಯಲ್ಲಿ ಹಿನ್ನಡೆಯಾಗಿದೆ. ಉತ್ತರ ಕರ್ನಾಟಕ ಭಾಗದವರನ್ನೇ ಮುಖ್ಯಮಂತ್ರಿಯನ್ನಾಗಿ ಮಾಡಿದರೂ ಪಕ್ಷ ಅಲ್ಲೇ ಸೋಲನುಭವಿಸುತ್ತಿದೆ ಎಂಬ ಸವಾಲೂ ಇದೆ. ಈ ಹಿನ್ನೆಲೆಯಲ್ಲಿ ಆರ್.ಎಸ್.ಎಸ್. ಬೈಠಕ್ ಪ್ರಾಮುಖ್ಯತೆ ಪಡೆದುಕೊಂಡಿದೆ.

ಈ ಎಲ್ಲಾ ವಿಚಾರಗಳನ್ನು ಮುಂದಿಟ್ಟುಕೊಂಡು ಎರಡು ದಿನಗಳ ಕಾಲ ಬೈಠಕ್ ನಡೆಸುವ ಸಂಘ ಪರಿವಾರ ಇನ್ನುಳಿದ ಅವಧಿಯಲ್ಲಿ ಸರ್ಕಾರ ಹೇಗೆ ನಡೆಯಬೇಕು ಹಾಗೂ ಹಿಂದುತ್ವ ಸಂಘಟನೆಗೆ ಯಾವ ಕಾರ್ಯಕ್ರಮಗಳನ್ನು ರೂಪಿಸಿಕೊಳ್ಳಬೇಕು ಎಂಬ ವಿಚಾರ ವಿನಿಮಯ ನಡೆಯಲಿದೆ ಎಂದು ಮೂಲಗಳು ತಿಳಿಸಿವೆ.

## ಮೂರು ಕಡೆ ಯೋಗ ಕಾರ್ಯಕ್ರಮ

**(1ನೇ ಪುಟದಿಂದ)** ಹಾಗೂ ಹೊನ್ನಾಳಿಯ ಚನ್ನಪ್ಪಸ್ವಾಮಿ ದೇವಸ್ಥಾನ, ಹಿರೇಕಲ್ಮಠ ಆವರಣದಲ್ಲಿ ನಡೆಯಲಿದೆ. ಏಕಕಾಲದಲ್ಲಿ ಒಟ್ಟು ಮೂರು ಕಡೆ ಯೋಗ ಮತ್ತು ಕಾರ್ಯಕ್ರಮ ಏರ್ಪಡಿಸಲಾಗಿದೆ.

5.30 ರಿಂದ 6.30 ರವರೆಗೆ ಧ್ಯಾನ, ಬೆಳಗ್ಗೆ 6.30 ರಿಂದ 7 ಗಂಟೆಯವರೆಗೆ ಉದ್ಘಾಟನೆ, ಬೆ.7 ರಿಂದ 7.35 ರವರೆಗೆ ಸಾಮಾನ್ಯ ಯೋಗ ಶಿಷ್ಟಾಚಾರ, 7.30 ರಿಂದ 8.30 ವೇದಿಕೆ ಕಾರ್ಯಕ್ರಮ ಇರಲಿದೆ. ಭಾಗವಹಿಸಿದ ಎಲ್ಲರಿಗೂ ಉಪಹಾರದ ವ್ಯವಸ್ಥೆ ಇರುತ್ತದೆ ಎಂದರು.

ಅಂತರರಾಷ್ಟ್ರೀಯ ಯೋಗ ದಿನಾಚರಣೆಗೆ ಪೂರ್ವಭಾವಿಯಾಗಿ ಜೂನ್ 18 ರ ಶನಿವಾರ ಬೆಳಗ್ಗೆ 7 ಗಂಟೆಯಿಂದ ಯೋಗ ನಡಿಗೆಯು ಹೈಸ್ಕೂಲ್ ಮೈದಾನದಿಂದ ಮೋತಿ ವೀರಪ್ಪ ಕಾಲೇಜು ಆವರಣದವರೆಗೆ ನಡೆಯಲಿದ್ದು ವಚನಾನಂದ ಸ್ವಾಮೀಜಿಯವರು ಭಾಗವಹಿಸುವರು. ಮತ್ತು ಇದೇ ದಿನ ಹರಿಹರದಲ್ಲಿ ಯೋಗ ನಡಿಗೆ ಬೆ.7 ರಿಂದ ಆರಂಭವಾಗಲಿದ್ದು ಗಾಂಧಿ ಮೈದಾನದಿಂದ ಹರಿಹರೇಶ್ವರ ದೇವಸ್ಥಾನದ ವರೆಗೆ ನಡೆಯಲಿದೆ.

ಜೂ.19 ರಂದು ಯೋಗ ದಿನಾಚರಣೆ ಅಂಗವಾಗಿ ದಾವಣಗೆರೆ ಲಯನ್ಸ್ ಕ್ಲಬ್ ಇಲ್ಲಿ ಯೋಗ ಸ್ಪರ್ಧೆಗಳನ್ನು ಆಯೋಜಿಸಲಾಗಿದೆ ಎಂದರು.

ಜೂ.21 ರ ಅಂತರರಾಷ್ಟ್ರೀಯ ಯೋಗ ದಿನಾಚರಣೆ ಸಂತೆಬೆನ್ನೂರು ಕಾರ್ಯಕ್ರಮದಲ್ಲಿ ವೈದ್ಯಶ್ರೀ ಚನ್ನಬಸವಣ್ಣನವರು ಮುಖ್ಯ ಯೋಗಪಟುವಾಗಿ ಭಾಗವಹಿಸುವರು. ದಾವಣಗೆರೆಯಿಂದ ಆಗಮಿಸುವ ಯೋಗಾಸ್ಥರಿಗೆ ಹೈಸ್ಕೂಲ್ ಮೈದಾನದಿಂದ ಉಚಿತ ಬಸ್ ವ್ಯವಸ್ಥೆ ಮಾಡಲಾಗಿದೆ ಎಂದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಆಯುಷ್ ಇಲಾಖೆ, ಭಾರತೀಯ ಪುರಾತತ್ವ ಇಲಾಖೆ, ಸ್ಮಾರ್ಟ್ ಸಿಟಿ ಲಿಮಿಟೆಡ್, ಜಿಲ್ಲಾ ಯೋಗ ಒಕ್ಕೂಟ, ಪ್ರವಾಸೋದ್ಯಮ ಇಲಾಖೆ, ಶಿಕ್ಷಣ ಇಲಾಖೆ ಸೇರಿದಂತೆ ಎಲ್ಲಾ ಇಲಾಖೆಗಳ ಸಹಯೋಗದೊಂದಿಗೆ ಯೋಗ ದಿನಾಚರಣೆ ಹಮ್ಮಿಕೊಳ್ಳಲಾಗಿದೆ ಎಂದರು.

ಅಪರ ಜಿಲ್ಲಾಧಿಕಾರಿ ಲೋಕೇಶ್, ಜಿಲ್ಲಾ ಆಯುಷ್ ಅಧಿಕಾರಿ ಶಂಕರಗೌಡ, ಯೋಗ ಒಕ್ಕೂಟದ ವಾಸು ರಾಯ್ಕರ್ ಈ ಸಂದರ್ಭದಲ್ಲಿದ್ದರು.

## ಯೋಜನೆಗಳಿಗೆ ಅನುಮೋದನೆ

**(1ನೇ ಪುಟದಿಂದ)** ಹೆಚ್ಚು ಹಾಗೂ 50 ಕೋಟಿ ರೂ.ಗಿಂತ ಕಡಿಮೆ ಹೂಡಿಕೆಯ 71 ಹೊಸ ಯೋಜನೆಗಳಿಗೆ ಅನುಮತಿ ನೀಡಲಾಗಿದೆ ಹಾಗೂ 1,308.06 ಕೋಟಿ ರೂ. ಮೌಲ್ಯದ ಈ ಯೋಜನೆಗಳು ರಾಜ್ಯದಲ್ಲಿ 5,091 ಜನರಿಗೆ ಉದ್ಯೋಗಗಳನ್ನು ಸೃಷ್ಟಿಸಲಿದೆ ಎಂಬ ವಿಶ್ವಾಸವನ್ನು ಅವರು ವ್ಯಕ್ತಪಡಿಸಿದ್ದಾರೆ.

## 500 ವರ್ಷಗಳ ನಂತರ ಧ್ವಜಾರೋಹಣ

**(1ನೇ ಪುಟದಿಂದ)** ಹೇಳಿದ್ದಾರೆ. ಸಾದನ್‌ಷಾ ಅವರು ಮೂಲತಃ ಹಿಂದೂ ಆಗಿದ್ದರು. ಅವರ ಹೆಸರು ಸಹದೇವ್ ಜೋಷಿ ಆಗಿತ್ತು. ಬೇಗಡ ಮನವೊಲಿಸಲು ಅವರು ಇಸ್ಲಾಂಗೆ ಮತಾಂತರವಾಗಿದ್ದರು. ದೇವಾಲಯದ ಸಂಪೂರ್ಣ ನಾಶ ತಡೆಯಲು ಸಾದನ್‌ಷಾ ನೆರವಾಗಿದ್ದರು ಎಂಬ ಐತಿಹ್ಯ ಇದೆ.

## ಇಂದು ವಿದ್ಯುತ್ ಗ್ರಾಹಕರ ಸಂವಾದ

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ದಾವಣಗೆರೆ ನಗರ ಉಪ ವಿಭಾಗ-1 ರ ವತಿಯಿಂದ ಇಂದು ಮಧ್ಯಾಹ್ನ 3 ರಿಂದ ಸಂಜೆ 5.30 ರವರೆಗೆ ವಿದ್ಯುತ್ ಗ್ರಾಹಕರ ಸಂವಾದ ನಡೆಯಲಿದೆ. ನಗರ ಉಪ ವಿಭಾಗ- 1 ರ ವ್ಯಾಪ್ತಿಗೆ ಬರುವ ಗ್ರಾಹಕರು ತಮ್ಮ ಅಹವಾಲುಗಳು ಇದ್ದಲ್ಲಿ ಸಂವಾದ ಕಾರ್ಯಕ್ರಮಕ್ಕೆ ಆಗಮಿಸಿ, ಸಮಸ್ಯೆ ಬಗೆಹರಿಸಿಕೊಳ್ಳಬಹುದು. ನಗರ ಉಪ ವಿಭಾಗ -2 ರ ವತಿಯಿಂದ ಕೂಡ ಇಂದು ಮಧ್ಯಾಹ್ನ 3 ರಿಂದ ಸಂಜೆ 5.30 ರವರೆಗೆ ಕೆಇಬಿ ವೃತ್ತದ ಬಳಿ ಇರುವ ಕಚೇರಿಯಲ್ಲಿ ವಿದ್ಯುತ್ ಗ್ರಾಹಕ ಸಂವಾದ ಏರ್ಪಡಿಸಲಾಗಿದೆ.

## ಹಾಲಿವಾಣ ಗ್ರಾಮದ ಹೆಚ್.ಬಿ. ಸಣ್ಣಸಿದ್ದಪ್ಪ ನಿಧನ



ಹರಿಹರ ತಾ. ಹಾಲಿವಾಣ ಗ್ರಾಮದ ವಾಸಿ ನಿವೃತ್ತ ಮುಖ್ಯ ಶಿಕ್ಷಕರಾದ

**ಹೆಚ್.ಬಿ. ಸಣ್ಣಸಿದ್ದಪ್ಪ** (84 ವರ್ಷ)

ಅವರು ದಿನಾಂಕ 17.06.2022ರ ಶುಕ್ರವಾರ ಸಂಜೆ 6.40ಕ್ಕೆ ನಿಧನರಾದರು. ಇಬ್ಬರು ಪುತ್ರರು, ಐವರು ಪುತ್ರಿಯರು, ಅಳಿಯಂದಿರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ : 18.06.2022ರ ಶನಿವಾರ ಮಧ್ಯಾಹ್ನ 1 ಗಂಟೆಗೆ ಹಾಲಿವಾಣ ಗ್ರಾಮದಲ್ಲಿರುವ ಮೃತರ ಸ್ವಂತ ಜಮೀನಿನಲ್ಲಿ ನೆರವೇರಲಿದೆ.

ದುಃಖತಪ್ತರು:

**ಹೆಚ್.ಬಿ. ಭೀಮರಾಜ್,**

ಶಿಕ್ಷಕರು, ಶ್ರೀ ಬೀರಲಿಂಗೇಶ್ವರ ಹಿರಿಯ ಪ್ರಾಥಮಿಕ ಶಾಲೆ, ಮಲೇಬೆನ್ನೂರು.

**ಹೆಚ್.ಬಿ. ಧರ್ಮರಾಜ್,**

ಶಿಕ್ಷಕರು, ಕರ್ನಾಟಕ ಪಬ್ಲಿಕ್ ಸ್ಕೂಲ್, ದೊಡ್ಡಬಾತಿ

**ಮತ್ತು ಬೆಳಕೆರೆ ವಂಶಸ್ಥರು, ಹಾಲಿವಾಣ ಗ್ರಾಮಸ್ಥರು ಹಾಗೂ ಬಂಧು-ಮಿತ್ರರು**

## ನಗರದಲ್ಲಿಂದು ಎಥ್ನಿಕ್ ಡೇ

ಜೈನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಲ್ಲಿ ಜನಾಂಗೀಯ ದಿನ (ಎಥ್ನಿಕ್ ಡೇ)ವನ್ನು ಇಂದು ಆಯೋಜಿಸಲಾಗಿದ್ದು, ಕಾಲೇಜಿನ ಎಲ್ಲಾ ವಿಭಾಗದ ವಿದ್ಯಾರ್ಥಿಗಳು ಸಾಂಪ್ರದಾಯಿಕ ಉಡುಗೆಯಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದು ಕಾಲೇಜಿನ ಪ್ರಾಂಶುಪಾಲ ಡಾ. ಡಿ.ಬಿ. ಗಣೇಶ್ ತಿಳಿಸಿದ್ದಾರೆ.

## ಎರಡು ಕ್ಷೇತ್ರಗಳ ಸ್ಪರ್ಧೆ ತಡೆಯಲು ಆಯೋಗದ ಪ್ರಸ್ತಾಪ

ನವದೆಹಲಿ, ಜೂ. 17 – ಒಂದಕ್ಕಿಂತ ಹೆಚ್ಚು ಕ್ಷೇತ್ರಗಳಲ್ಲಿ ಚುನಾವಣೆಗೆ ಸ್ಪರ್ಧಿಸುವುದನ್ನು ನಿಷೇಧಿಸುವಂತೆ ಕೇಂದ್ರ ಸರ್ಕಾರಕ್ಕೆ ಚುನಾವಣಾ ಆಯೋಗ ಪ್ರಸ್ತಾವನೆ ಸಲ್ಲಿಸಿದೆ. ಎರಡು ದಶಕಗಳ ಹಿಂದೆ ಇದೇ ರೀತಿಯ ಪ್ರಸ್ತಾವನೆ ಸಲ್ಲಿಸಲಾಗಿತ್ತು.

ಎರಡು ಕ್ಷೇತ್ರಗಳಲ್ಲಿ ಸ್ಪರ್ಧಿಸಿ ಎರಡರಲ್ಲೂ ಗೆದ್ದರೆ, ಒಂದು ಕ್ಷೇತ್ರಕ್ಕೆ ಅಭ್ಯರ್ಥಿ ರಾಜೀನಾಮೆ ನೀಡಬೇಕಾಗುತ್ತದೆ. ಆಗ ಮರು ಚುನಾವಣೆ ಬೊಕ್ಕಸಕ್ಕೆ ಹೊರೆಯಾಗುತ್ತದೆ.

ಎರಡು ಕಡೆ ಚುನಾವಣೆಗೆ ನಿಲ್ಲುವುದನ್ನು ನಿಷೇಧಿಸಬೇಕು. ಇಲ್ಲವೇ ಒಂದಕ್ಕೆ ರಾಜೀನಾಮೆ ನೀಡಿದ ಸಂದರ್ಭದಲ್ಲಿ ದಂಡ ವಿಧಿಸಬೇಕು ಎಂದು ಚುನಾವಣಾ ಆಯೋಗ ಶಿಫಾರಸ್ಸು ಮಾಡಿದೆ.

ಕಾನೂನು ಸಚಿವಾಲಯದ ಶಾಸಕಾಂಗ ಕಾರ್ಯದರ್ಶಿ ಜೊತೆ ಇತ್ತೀಚೆಗೆ ಚರ್ಚೆ ನಡೆಸುವಾಗ ಮುಖ್ಯ ಚುನಾವಣಾ ಆಯುಕ್ತ ರಾಜೀವ್ ಕುಮಾರ್ ಅವರು ಈ ಸುಧಾರಣೆಗೆ ಒತ್ತಾಯಿಸಿದ್ದಾರೆ.

ಶಾಸಕಾಂಗ ಇಲಾಖೆಯು ಚುನಾವಣಾ ಆಯೋಗಕ್ಕೆ ಸಂಬಂಧಿಸಿದಂತೆ ಸರ್ಕಾರದ ನೋಡಲ್ ಸಂಸ್ಥೆಯಾಗಿದೆ.

ಪ್ರಸಕ್ತ ಅಭ್ಯರ್ಥಿಯೊಬ್ಬರು ಎರಡು ಬೇರೆ ಬೇರೆ ಕ್ಷೇತ್ರಗಳಲ್ಲಿ ಚುನಾವಣೆಗೆ ಸ್ಪರ್ಧಿಸಲು ಅವಕಾಶವಿದೆ. 1996ರಲ್ಲಿ ಜನಪ್ರತಿನಿಧಿ ಕಾಯ್ದೆಗೆ ತಿದ್ದುಪಡಿ ತರುವ ಮೂಲಕ ಒಬ್ಬ ವ್ಯಕ್ತಿ ಸ್ಪರ್ಧಿಸಬಹುದಾದ ಕ್ಷೇತ್ರಗಳ ಸಂಖ್ಯೆಯನ್ನು ಎಡಕ್ಕೆ ಇಳಿಸಲಾಗಿತ್ತು. ಅದಕ್ಕೂ ಮುಂಚೆ ಅಭ್ಯರ್ಥಿಯೊಬ್ಬರು ಸ್ಪರ್ಧಿಸಬಹುದಾದ ಕ್ಷೇತ್ರಗಳ ಮೇಲೆ ಯಾವುದೇ ಮಿತಿ ಇರಲಿಲ್ಲ.

ಈಗಿರುವ ನಿಯಮಗಳನ್ನು ಮುಂದುವರೆಸಿದರೂ ಸಹ, ಉಪ ಚುನಾವಣೆ ಎದುರಾದಾಗ ಖರ್ಚು ಎದುರಾಗುತ್ತದೆ. ಈ ಹಿನ್ನೆಲೆಯಲ್ಲಿ ವಿಧಾನಸಭಾ ಚುನಾವಣೆ ಸಂದರ್ಭದಲ್ಲಿ 5 ಲಕ್ಷ ರೂ. ಹಾಗೂ ಲೋಕಸಭಾ ಚುನಾವಣೆ ಸಂದರ್ಭದಲ್ಲಿ 10 ಲಕ್ಷ ರೂ. ದಂಡ ವಿಧಿಸಬೇಕು. ದಂಡದ ಪ್ರಮಾಣವನ್ನು ಕಾಲಾನುಕಾಲಕ್ಕೆ ಹೆಚ್ಚಿಸಬೇಕು ಎಂದು ಆಯೋಗ ಪ್ರಸ್ತಾಪಿಸಿದೆ.

## ಮುರುಘರಾಜೇಂದ್ರ ವಿಶ್ವವಿದ್ಯಾನಿಲಯಕ್ಕೆ ಅಧಿಕೃತ ಮುದ್ರೆ: ಮುರುಘಾ ಶರಣರ ಹರ್ಷ



ಚಿತ್ರದುರ್ಗ, ಜೂ. 17- ಸರ್ಕಾರವು ಅಧಿಕೃತ ಮುದ್ರೆಯೊಂದಿಗೆ ಚಿತ್ರದುರ್ಗ ಜಿಲ್ಲೆಗೆ ಮುರುಘರಾಜೇಂದ್ರ ವಿಶ್ವವಿದ್ಯಾಲಯಕ್ಕೆ ಅನುಮೋದನೆ ನೀಡಿದೆ ಎಂದು ಡಾ. ಶಿವಮೂರ್ತಿ ಮುರುಘಾ ಶರಣರು ತಿಳಿಸಿದರು.

ಬೃಹನ್ಮಠದಲ್ಲಿ ನಿನ್ನೆ ಕರೆಯಲಾಗಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಶರಣರು, ಬಿ.ಎಸ್. ಯಡಿಯೂರಪ್ಪ ಮುಖ್ಯಮಂತ್ರಿ ಆಗಿದ್ದಾಗ ವಿಶ್ವವಿದ್ಯಾಲಯ ಮಂಜೂರು ಮಾಡಿದರು. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಉನ್ನತ ಶಿಕ್ಷಣ ಸಚಿವ ಡಾ. ಅಶ್ವತ್ಥನಾರಾಯಣ ಅವರು ನಿನ್ನೆ ಅನುಮೋದನೆ ನೀಡಿದ್ದಾರೆ. ಇದು ಈ ಜಿಲ್ಲೆಗೆ ಮುಕುಟಪ್ರಾಯವಾಗಿದೆ ಎಂದು ಹರ್ಷ ವ್ಯಕ್ತಪಡಿಸಿದರು.

ಡಾ. ಮೋಹನ್ ಕುಮಾರ್ ವಿಶ್ವವಿದ್ಯಾಲಯದ ಕುಲಪತಿಯಾಗಿದ್ದಾರೆ. ಡಾ. ಜಿತೇಂದ್ರಕುಮಾರ್ ಕುಲಸಚಿವರಾಗಿ ಕೆಲಸ ಮಾಡುತ್ತಿದ್ದಾರೆ. ಶೈಕ್ಷಣಿಕ ಬೆಳವಣಿಗೆಯೇ ನಿಜವಾದ ಬೆಳವಣಿಗೆ. ಯಾರೂ ಶಿಕ್ಷಣದಿಂದ ವಂಚಿತರಾಗಬಾರದು ಎಂದು 1966ರಲ್ಲಿ ಮಲ್ಲಿಕಾರ್ಜುನ ಶ್ರೀಗಳು ಪ್ರೌಢಶಾಲೆ ಆರಂಭಿಸಿ ಶೈಕ್ಷಣಿಕ ಪಯಣ ಆರಂಭಿಸಿದರು.

ಈ ವಿಶ್ವವಿದ್ಯಾಲಯವನ್ನು ಉತ್ತಮ ಹಂತದಲ್ಲಿ ಬೆಳೆಸುವ ಯೋಜನೆಯನ್ನು ಹಾಕಿಕೊಳ್ಳಲಾಗಿದೆ ಎಂದ ಶರಣರು, ಈ ನಾಡಿನ ಜನರ ಬೇಡಿಕೆಯನ್ನು ಮನ್ನಿಸಿ, ಬೀದಿಗೆ ಇಳಿದು ಭದ್ರಾ ಮೇಲ್ದಂಡೆ ಯೋಜನೆ ಜಾರಿಗೆ ತಂದಿದ್ದೇವೆ. ಕಳೆದ ವರ್ಷ ಮುಖ್ಯಮಂತ್ರಿಗಳನ್ನು ಕರೆದು ಹಿಂದುಳಿದ ಜಿಲ್ಲೆಗೆ ಕೈಗಾರಿಕಾ ಕಾರಿಡಾರ್ ಮಾಡಬೇಕೆಂದು ಒತ್ತಾಯಿಸಿದ್ದೇವೆ. ಅದು ಕಾರ್ಯರೂಪದಲ್ಲಿದೆ. ಚಿತ್ರದುರ್ಗ ಅಭಿವೃದ್ಧಿ ವಂಚಿತವಾಗಿತ್ತು. ಆ ಕಾರಣಕ್ಕಾಗಿ ನಾವು ಬಸವೇಶ್ವರ ವೈದ್ಯಕೀಯ ಕಾಲೇಜು ಆಸ್ಪತ್ರೆ ನಿರ್ಮಾಣ ಮಾಡಿದೆವು. ಸರ್ಕಾರ ದಾವಣಗೆರೆಯಲ್ಲಿ ವಿ.ವಿ. ಮಾಡಿತು. ಆದರೆ ಈ ಜಿಲ್ಲೆ ಹಾಗೆ ಉಳಿದಿತ್ತು.

ವೈದ್ಯಕೀಯ ಶಿಕ್ಷಣ ಇಲಾಖೆಯ ಕಾರ್ಯದರ್ಶಿ ಡಾ. ನವೀನ್ ರಾಜ್‌ಸಿಂಗ್, ಉನ್ನತ ಶಿಕ್ಷಣ ಇಲಾಖೆಯ ಆಯುಕ್ತರಾದ ಪ್ರದೀಪ್ ಮತ್ತು ತಾಂತ್ರಿಕ ಶಿಕ್ಷಣ ಇಲಾಖೆಯ ನಿರ್ದೇಶಕರಾದ ರವಿಚಂದ್ರ, ಅವರನ್ನೊಳಗೊಂಡ ತಜ್ಞರ ತಂಡವು ಕಳೆದ ತಿಂಗಳು 12ರಂದು ವಿಶ್ವವಿದ್ಯಾಲಯಕ್ಕೆ ಭೇಟಿ ನೀಡಿ ತಪಾಸಣೆ ನಡೆಸಿ ವರದಿ ನೀಡಿದ್ದರು. 55 ಎಕರೆ ಜಾಗದಲ್ಲಿ ಎಸ್‌ಜೆಎಂ ಕ್ಯಾಂಪಸ್‌ನಲ್ಲಿ ಆರಂಭಿಸಲಾಗಿದೆ. ವೈದ್ಯಕೀಯ, ದಂತ ವೈದ್ಯಕೀಯ, ಔಷಧಿ, ನರ್ಸಿಂಗ್, ತಾಂತ್ರಿಕ ಕಾಲೇಜುಗಳನ್ನೊಳಗೊಂಡಿದೆ. 52 ಸೀಟು ಪಿ.ಜಿ., 150 ವೈದ್ಯಕೀಯ ಸೀಟುಗಳು ಲಭ್ಯವಿದ್ದು ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಮತ್ತು ರಾಜೀವ್ ಗಾಂಧಿ ವಿಶ್ವವಿದ್ಯಾಲಯದಿಂದ ಈ ಕಾಲೇಜುಗಳು ಬೇರ್ಪಡುತ್ತವೆ ಎಂದು ಮಾಹಿತಿ ನೀಡಿದರು.

ಎಸ್.ಜೆ.ಎಂ. ವಿಶ್ವವಿದ್ಯಾಲಯದ ಕುಲಪತಿ ಡಾ. ಮೋಹನ್‌ಕುಮಾರ್, ರಿಜಿಸ್ಟ್ರಾರ್ ಜಿತೇಂದ್ರ ಸಿಂಗ್ ಶೆಖಾವತ್, ಎ.ಜೆ. ಪರಮಶಿವಯ್ಯ, ಕೆಇಬಿ ಷಣ್ಮುಖಪ್ಪ, ಪಟೇಲ್, ಶಿವಕುಮಾರ್, ಎಂ.ಟಿ. ಮಲ್ಲಿಕಾರ್ಜುನ ಸ್ವಾಮಿ, ಸುರೇಶ್‌ಬಾಬು, ಎನ್.ಬಿ. ರಾಜಶೇಖರ್, ಗುಂಡಾರ್ಪಿ ಸಿದ್ಧಾರ್ಥ, ವಿದ್ಯಾಸಂಸ್ಥೆಗಳ ಮುಖ್ಯಸ್ಥರುಗಳು ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

## 'ಅಗ್ನಿಪಥ' : ಹಿಂಸಾಚಾರ

**(1ನೇ ಪುಟದಿಂದ)** ಪ್ರದೇಶಗಳಲ್ಲಿ ಪ್ರತಿಭಟನೆಗಳನ್ನು ನಡೆಸಲಾಗಿದೆ. ಹಲವು ಕಡೆಗಳಲ್ಲಿ ರೈಲು ಹಳಿಗಳ ಮೇಲೆ ಕುಳಿತು ಪ್ರತಿಭಟನೆ ನಡೆಸಲಾಗಿದೆ. ಹೆದ್ದಾರಿಗಳಲ್ಲಿ ವಾಹನಗಳ ಮೇಲೆ ಕಲ್ಲು ತೂರಲಾಗಿದೆ. ರೈಲ್ವೆ ನಿಲ್ದಾಣಗಳಲ್ಲಿ ಆಸ್ತಿಗಳಿಗೆ ಹಾನಿ ಮಾಡಿ ಹಿಂಸಾಚಾರ ನಡೆಸಲಾಗಿದೆ.

ಬಿಹಾರದ ಬಕ್ಸಾರ್, ಭಾಗಲ್ಪುರ ಹಾಗೂ ಸಮಷ್ಟಿಪುರಗಳಲ್ಲಿ ಹೆದ್ದಾರಿಗಳಲ್ಲಿ ಟೈರ್‌ಗಳನ್ನು ಸುಟ್ಟು ಸಂಚಾರಕ್ಕೆ ಅಡ್ಡಿಪಡಿಸಲಾಗಿದೆ. ಬಿಹಾರದಲ್ಲಿ ನಾಳೆ ಬಂದ್‌ಗೆ ಕರೆ ನೀಡಲಾಗಿದ್ದು, ಪ್ರತಿಪಕ್ಷವಾದ ಆರ್.ಜೆ.ಡಿ. ಬೆಂಬಲ ವ್ಯಕ್ತಪಡಿಸಿದೆ.

ಬಿಹಾರದ ಉಪ ಮುಖ್ಯಮಂತ್ರಿ ರೇಣು ದೇವಿ ಮನೆಯ ಮೇಲೆ ದುಷ್ಕರ್ಮಿಗಳು ದಾಳಿ ನಡೆಸಿದ್ದಾರೆ. ಬಿಹಾರದ ಬಿಜೆಪಿ ಶಾಸಕರೊಬ್ಬರ ಕಾರಿನ ಮೇಲೆ ದಾಳಿ ನಡೆಸಲಾಗಿದ್ದು, ರಾಜ್ಯ ಬಿಜೆಪಿ ಅಧ್ಯಕ್ಷ ಸಂಜಯ್ ಜೈಸ್ವಾಲ್ ಅವರು ಬೆಟ್ಟಿಯಾ ನಗರದಲ್ಲಿ ಹೊಂದಿರುವ ಮನೆಯನ್ನು ಧ್ವಂಸಗೊಳಿಸಿದ್ದಾರೆ.

ತೆಲಂಗಾಣದ ಸಿಕಂದರಾಬಾದ್ ನಿಲ್ದಾಣದಲ್ಲಿ ಹಿಂಸಾತ್ಮಕ ಪ್ರತಿಭಟನೆ ನಡೆಸಿದಾಗ, ಜನರನ್ನು ಚೆದುರಿಸಲು ರೈಲ್ವೆ ರಕ್ಷಣಾ ಪಡೆಗಳು ಗುಂಡು ಹಾರಿಸಿವೆ. ಹಿಂಸಾಚಾರದ ನಂತರ ಹರಿಯಾಣ ಸರ್ಕಾರ ಫರೀದಾಬಾದ್ ಜಿಲ್ಲೆಯ ಬಲ್ಲಭ್‌ಘರ್ ಪ್ರದೇಶದಲ್ಲಿ 24 ಗಂಟೆಗಳ ಕಾಲ ಅಂತರ್ಜಾಲ ಹಾಗೂ ಎಸ್.ಎಂ.ಎಸ್. ಸೇವೆ ರದ್ದುಗೊಳಿಸಿದೆ. ರಾಜ್ಯದ ಹಿಸಾರ್ ಹಾಗೂ ಫತೇಹಾಬಾದ್ ನಗರಗಳಲ್ಲಿ ಪ್ರತಿಭಟನೆಗಳು ನಡೆದಿವೆ.

## ಸಿಕಂದರಾಬಾದ್ : ಪ್ರಕ್ಷುಬ್ಧರ ದಾಳಿ

**(1ನೇ ಪುಟದಿಂದ)** ರಾಬಾದ್‌ನ ಗಾಂಧಿ ಆಸ್ಪತ್ರೆಗೆ ದಾಖಲಿಸಲಾಗಿದೆ. ನಗರದ ಮುಖ್ಯ ರೈಲ್ವೆ ನಿಲ್ದಾಣವನ್ನು ಪ್ರಕ್ಷುಬ್ಧರು ಧ್ವಂಸಗೊಳಿಸಿದ್ದಾರೆ.

ಲಾಠಿ ಪ್ರಹಾರ ಹಾಗೂ ಅಶ್ರುವಾಯು ಸಿಡಿಸಿದ ನಂತರವೂ ಗುಂಪು ನಿಯಂತ್ರಣಕ್ಕೆ ಬಾರದ ಕಾರಣ ರೈಲ್ವೆ ಪೊಲೀಸರು ಗೋಲಿಬಾರ್ ನಡೆಸಬೇಕಾಯಿತು ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದ್ದಾರೆ.

ಗುಂಪು ನಡೆಸಿದ ಕಲ್ಲು ತೂರಾಟದಲ್ಲಿ ಇಬ್ಬರು ಪೊಲೀಸ್ ಪೇದೆಗಳು ಗಾಯಗೊಂಡಿದ್ದಾರೆ. ಹಿರಿಯ ಪೊಲೀಸ್ ಅಧಿಕಾರಿಗಳು ಸ್ಥಳಕ್ಕೆ ಧಾವಿಸಿ ಪರಿಸ್ಥಿತಿಯ ಪರಿಶೀಲನೆ ನಡೆಸಿದ್ದಾರೆ.

ಕಲ್ಲು ತೂರಾಟ ನಡೆಸಿದ ಗುಂಪು, ರೈಲ್ವೆ ಬೋಗಿಯೊಂದಕ್ಕೆ ಬೆಂಕಿ ಹಚ್ಚಿ, ರೈಲ್ವೆ ಆಸ್ತಿ ಹಾನಿಪಡಿಸಿತ್ತು.

ರೈಲ್ವೆ ನಿಲ್ದಾಣದ ಹೊರಗಿದ್ದ ಬಸ್ಸುಗಳ ಮೇಲೂ ಕಲ್ಲು ತೂರಾಟ ನಡೆಸಲಾಯಿತು. ನಂತರದಲ್ಲಿ ರೈಲ್ವೆ ನಿಲ್ದಾಣಕ್ಕೆ ಬರುವ ಎಲ್ಲ ರೈಲುಗಳನ್ನು ತಡೆಯಲಾಗಿದೆ.

ನೂರಾರು ಜನರ ಗುಂಪು ಬಡಿಗೆ ಹಾಗೂ ಕಲ್ಲುಗಳನ್ನು ಹಿಡಿದು ರೈಲ್ವೆ ಪ್ಲಾಟ್‌ಫಾರಂ 1 ಹಾಗೂ 2ಕ್ಕೆ ನುಗ್ಗಿ ಧ್ವಂಸ ನಡೆಸಿದೆ. ಪ್ರಯಾಣಿಕರು ಸುರಕ್ಷತೆಗಾಗಿ ಪಲಾಯನ ಮಾಡಬೇಕಾಯಿತು. ಕಲ್ಲು ತೂರಾಟದಲ್ಲಿ ಕೆಲ ಪ್ರಯಾಣಿಕರಿಗೂ ಗಾಯಗಳಾಗಿವೆ.

ನಂತರ ಕೊಲ್ಕೊತಾಗೆ ತೆರಳುತ್ತಿದ್ದ ಈಸ್ಟ್ ಕೋಸ್ಟ್ ಎಕ್ಸ್‌ಪ್ರೆಸ್ ರೈಲಿಗೆ ಬೆಂಕಿ ಹಚ್ಚಲಾಗಿದೆ. ಅಜಂತಾ ಎಕ್ಸ್‌ಪ್ರೆಸ್ ಹಾಗೂ ಎಂ.ಎಂ.ಟಿ.ಎಸ್. ರೈಲುಗಳಿಗೆ ಬೆಂಕಿ ಹಚ್ಚಲಾಗಿದೆ.

ಸಾರಿಗೆ ರೈಲಿನ ಸರಕುಗಳನ್ನು ಹಳಿ ಮೇಲೆ ಸುರಿದು ಬೆಂಕಿ ಹಚ್ಚಲಾಯಿತು. ಇದರಿಂದಾಗಿ ಹಳಿಗಳಿಗೆ ಸಂಪೂರ್ಣ ಹಾನಿಯಾಗಿದೆ. ಐದು ಅಗ್ನಿಶಾಮಕ ವಾಹನಗಳು ಎರಡು ಗಂಟೆ ಕಾಲ ಶ್ರಮಿಸಿ ಬೆಂಕಿ ನಂದಿಸಿವೆ.

## ಮುಂದಿನ ವಾರದಿಂದ ನೇಮಕ

**(1ನೇ ಪುಟದಿಂದ)** ಹಂತದಲ್ಲಿ ಎರಡು ದಿನಗಳ ಪ್ರಕ್ರಿಯೆ ನಡೆಯಲಿದೆ ಎಂದು ಏರ್ ಚೀಫ್ ಮಾರ್ಷಲ್ ವಿ.ಆರ್. ಚೌಧರಿ ತಿಳಿಸಿದ್ದಾರೆ.

ಶೀಘ್ರದಲ್ಲೇ ನೇಮಕ ಆರಂಭವಾಗಲಿದೆ ಎಂದು ನೌಕಾ ದಳ ಸಹ ತಿಳಿಸಿದೆ. ವಾರದಲ್ಲೇ ನೇಮಕಕ್ಕೆ ಅಧಿಸೂಚನೆ ಹೊರಡಿಸಲಾಗುವುದು ಎಂದು ನೌಕಾ ದಳದ ಹಿರಿಯ ಕಮಾಂಡರ್ ಒಬ್ಬರು ತಿಳಿಸಿದ್ದಾರೆ.

ನೂತನ ಯೋಜನೆಯ ಅನ್ವಯ ನೇಮಕಕ್ಕೆ ಸೈನ್ಯದ ಮೂರೂ ದಳಗಳು ಸನ್ನದ್ಧವಾಗಿವೆ. ಮುಂದಿನ ವರ್ಷ ಜೂನ್ ವೇಳೆಗೆ ಹೊಸ ತಂಡ ಸೇವೆಗೆ ರೂಪುಗೊಳ್ಳಲಿದೆ ಎಂದು ಹಿರಿಯ ಸೈನಿಕ ಅಧಿಕಾರಿಯೊಬ್ಬರು ಹೇಳಿದ್ದಾರೆ.

ಅಗ್ನಿಪಥ ಯೋಜನೆಯ ಪೂರ್ಣ ಲಾಭದ ಅರಿವು ಪ್ರತಿಭಟನಾ ನಿರತ ಯುವಕರಿಗೆ ಇಲ್ಲ ಎಂದೂ ಅಧಿಕಾರಿಗಳು ತಿಳಿಸಿದ್ದಾರೆ.

ಡಿಸೆಂಬರ್ ತಿಂಗಳಲ್ಲಿ ಅಗ್ನಿಪಥ ಯೋಜನೆಯಡಿ ಆಯ್ಕೆಯಾದವರಿಗೆ ತರಬೇತಿ ಆರಂಭವಾಗಲಿದೆ ಎಂದೂ ಸೈನ್ಯದ ಅಧಿಕಾರಿಗಳು ಹೇಳಿದ್ದಾರೆ.

## ರಾಜ್ಯ ಪೊಲೀಸ್ ನೇಮಕದಲ್ಲಿ ಆದ್ಯತೆ

**(1ನೇ ಪುಟದಿಂದ)** ಯಾರು ಎಂಬುದರ ಬಗ್ಗೆ ಕೇಂದ್ರ ಹಾಗೂ ರಾಜ್ಯಗಳು ತನಿಖೆ ನಡೆಸಬೇಕಿದೆ ಎಂದೂ ಅವರು ತಿಳಿಸಿದ್ದಾರೆ. ಭವಿಷ್ಯದಲ್ಲಿ ಏನೋ ಆಗಲಿದೆ ಎಂದು ರೈಲು ಹಾಗೂ ಸಾರ್ವಜನಿಕ ಆಸ್ತಿಗಳಿಗೆ ಬೆಂಕಿ ಹಚ್ಚಬಾರದು. ದೇಶದಲ್ಲಿ ಬದಲಾವಣೆಯಾಗಬಾರದು ಎಂದು ಬಯಸುವ ಒಂದು ವರ್ಗವಿದ್ದು, ಅವರು ಹಿಂಸಾಚಾರಕ್ಕೆ ಕುಮ್ಮಕ್ಕು ನೀಡುತ್ತಿದ್ದಾರೆ ಎಂದು ಸಚಿವರು ತಿಳಿಸಿದ್ದಾರೆ.

## ವಯೋಮಿತಿ ಹೆಚ್ಚಳಕ್ಕೆ ಬೊಮ್ಮಾಯಿ ಸ್ವಾಗತ

**(1ನೇ ಪುಟದಿಂದ)** ತಿಳಿಸಿದ್ದಾರೆ. ತಾಯ್ನಾಡಿನ ಸೇವೆಯ ಪಥದಲ್ಲಿ ಯಶಸ್ವಿಯಾಗಿ ನಡೆದು ತಮ್ಮ ಉಜ್ವಲ ಭವಿಷ್ಯವನ್ನು ಯುವಜನತೆ ರೂಪಿಸಿಕೊಳ್ಳಲಿದ್ದಾರೆ. ದೇಶದ ಯುವಜನರ ಪರವಾಗಿ ಪ್ರಧಾನಮಂತ್ರಿಗಳಿಗೆ ಟ್ವೀಟ್ ಮೂಲಕ ಧನ್ಯವಾದ ತಿಳಿಸಿದ್ದಾರೆ.

## ಜಿಎಸ್‌ಟಿ ದರ ಪರಿಷ್ಕರಣೆಗೆ ಒಮ್ಮತವಿಲ್ಲ

**(1ನೇ ಪುಟದಿಂದ)** ಸಮಯ ಕೇಳಲಿದೆ. ಜೂನ್ 28 ಹಾಗೂ 29ರಂದು ಜಿ.ಎಸ್.ಟಿ. ಮಂಡಳಿಯ ಸಭೆ ಶ್ರೀನಗರದಲ್ಲಿ ನಡೆಯಲಿದೆ.

## ರಾಗಿಮಸಲವಾಡ : ಪಂಚಮಸಾಲಿ ಸಭೆ



ಹರಪನಹಳ್ಳಿ, ಜೂ. 17- ತಾಲ್ಲೂಕಿನ ರಾಗಿಮಸಲವಾಡದಲ್ಲಿ ಸುತ್ತಲಿನ ಹಳ್ಳಿಗಳ ಪಂಚಮಸಾಲಿ ಸಮಾಜ ಬಾಂಧವರಿಗೆ ಕರೆಯಲಾಗಿದ್ದ ಸಭೆಯಲ್ಲಿ ಸಮಾಜದ ಮುಖಂಡರು, ಸಮಾಜದ ಜಿಲ್ಲಾ ಮಾಜಿ ಸದಸ್ಯರು, ಗ್ರಾ.ಪಂ. ಸದಸ್ಯರು, ಸಮಾಜ ಬಾಂಧವರು, ಸಮಾಜಮುಖಿ ಚಿಂತನೆ, ಸಮಸ್ಯೆಗಳ ಬಗ್ಗೆ ಚರ್ಚಿಸಿದರು. ಎಸ್ಸೆಸ್ಸೆಲ್ಸಿಯಲ್ಲಿ ಅತಿ ಹೆಚ್ಚು ಅಂಕ ಪಡೆದವರನ್ನು ಶಿಕ್ಷಣ ತಜ್ಞ ಹಾಗೂ ಸಮಾಜ ಸೇವಕ ಚಿಕ್ಕಮೇಗಳಕೆರೆಯ ಡಾ. ಜಯಣ್ಣ ಕಂಚಿಕೆರೆ ಅವರನ್ನು ಸನ್ಮಾನಿಸಿ, ಗೌರವಿಸಲಾಯಿತು.

## ಟ್ರ್ಯಾಕ್ಟರ್ - ಶಾಲಾ ವಾಹನದ ನಡುವೆ ಡಿಕ್ಕಿ: ಶಾಲಾ ಮಕ್ಕಳು ಪಾರು



ದಾವಣಗೆರೆ, ಜೂ. 17- ಟ್ರ್ಯಾಕ್ಟರ್ ಹಾಗೂ ಶಾಲಾ ವಾಹನದ ನಡುವೆ ಅಪಘಾತ ಸಂಭವಿಸಿದ್ದು, ಮಕ್ಕಳು ಅಪಾಯದಿಂದ ಪಾರಾದ ಘಟನೆ ಹೊಸ ಕುಂದುವಾಡ ಬಳಿಯ ರಾಷ್ಟ್ರೀಯ ಹೆದ್ದಾರಿ 48ರಲ್ಲಿ ನಡೆದಿದೆ. ಟ್ರ್ಯಾಕ್ಟರ್ ಪಲ್ಟಿಯಾಗಿದ್ದು, ಚಾಲಕನಿಗೆ ಗಂಭೀರ ಗಾಯಗಳಾಗಿವೆ. ಅದೃಷ್ಟ ವಶಾತ್ ಮಕ್ಕಳಿಗೇನೂ ಆಗಿಲ್ಲ. ಕೋಳಿ ಫುಡ್ ಹೊತ್ತೊಯ್ಯುತ್ತಿದ್ದ ಟ್ರ್ಯಾಕ್ಟರ್ ಹಾಗೂ ಶಾಲೆ ಮುಗಿಸಿ ಮಕ್ಕಳನ್ನು ಮನೆಗೆ ಬಿಡಲು ತೆರಳುತ್ತಿದ್ದ ಬಸ್ ನಡುವೆ ಡಿಕ್ಕಿ ಸಂಭವಿಸಿದೆ.

ಪುಷ್ಪ ಮಹಾಲಿಂಗಪ್ಪ ಶಾಲೆಗೆ ಸೇರಿದ ಬಸ್ ಇದಾಗಿದ್ದು, ಹಳೇ ಕುಂದುವಾಡದಿಂದ ದಾವಣಗೆರೆಗೆ ತೆರಳುತ್ತಿತ್ತು. ಅಪಘಾತದಲ್ಲಿ ಶಾಲಾ ಬಸ್ ಜಖಂಗೊಂಡಿದೆ. ಮಕ್ಕಳಿಗೆ ಸಣ್ಣ-ಪುಟ್ಟ ಗಾಯಗಳಾಗಿದ್ದು, ಕೂದಲೆಳೆ ಅಂತರದಿಂದ ಮಕ್ಕಳು ಬಚಾವಾಗಿದ್ದಾರೆ. ದಕ್ಷಿಣ ಸಂಚಾರಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಈ ಘಟನೆ ನಡೆದಿದೆ.

## ರಸ್ತೆ ವಿಭಜಕಕ್ಕೆ ಬಸ್ ಡಿಕ್ಕಿ : ಪಾರು



ದಾವಣಗೆರೆ, ಜೂ.17- ಖಾಸಗಿ ಬಸ್ಸೊಂದರ ಸ್ಟೇರಿಂಗ್ ರಾಡ್ ಕಟ್ಟಾದ ಪರಿಣಾಮ ಬಸ್ಸು ಚಾಲಕನ ನಿಯಂತ್ರಣ ತಪ್ಪಿ ರಸ್ತೆ ವಿಭಜಕಕ್ಕೆ ಡಿಕ್ಕಿ ಹೊಡೆದ ಘಟನೆ ಹದಡಿ ರಸ್ತೆಯಲ್ಲಿ ಸಂಭವಿಸಿದೆ.

ವಿಮಾನಮಟ್ಟಿಯ ಬಳಿ ಇರುವ ಎಂಆರ್‌ಪಿ ಬಾರ್ ಮುಂಭಾಗದ ರಸ್ತೆಯಲ್ಲಿ ಈ ಘಟನೆ ನಡೆದಿದೆ. ಈ ವೇಳೆ ಬಸ್ಸು ರಸ್ತೆ ಮಧ್ಯದ ಡಿವೈಡರ್ ಮೇಲೆ ಸಾಗಿದೆ. ಸ್ಟೇರಿಂಗ್ ರಾಡ್ ಕಟ್ಟಾಗಿ ರಸ್ತೆ ಮಧ್ಯೆ ಇರುವ ಡಿವೈಡರ್ ಮೇಲೆ ಬಸ್ ಹತ್ತಿ ಬಸ್ಸಿನ ಮುಂಭಾಗ ಸಂಪೂರ್ಣ ಜಖಂಗೊಂಡಿದ್ದು, ಅದೃಷ್ಟವಶಾತ್ ಯಾವುದೇ ಪ್ರಾಣಾಪಾಯವಾಗಿಲ್ಲ. ಚನ್ನಗಿರಿ ಕಡೆಯಿಂದ ಬರುತ್ತಿದ್ದ ಖಾಸಗಿ ಬಸ್ ನಿಧಾನಗತಿಯಲ್ಲಿದ್ದ ಕಾರಣ, ಅಲ್ಲದೇ ಬಸ್ಸಿನ ಚಾಲಕನ ಸಮಯ ಪ್ರಜ್ಞೆಯಿಂದಾಗಿ ಯಾವುದೇ ಅನಾಹುತ ಸಂಭವಿಸಿಲ್ಲ.

ಈ ವೇಳೆ ಚಾಲಕ ಬಸ್ಸನ್ನು ಡಿವೈಡರ್ ಕಡೆ ತಿರುಗುಸಿದ ಪ್ರಯುಕ್ತ ಡಿವೈಡರ್ ಅಡ್ಡ ಬಂದು ಬಸ್ ಅಲ್ಲೇ ನಿಂತಿದೆ. ಒಂದು ವೇಳೆ ರಸ್ತೆ ವಿಭಜಕ ಇರದೇ ಇದ್ದಿದ್ದರೆ ಅಥವಾ ಬಲಗಡೆ ಚಲಿಸುವ ಬದಲು ಎಡಭಾಗಕ್ಕೆ ಚಲಿಸಿದ್ದರೆ ಭಾರೀ ಅನಾಹುತ ಸಂಭವಿಸುತ್ತಿತ್ತು ಎನ್ನಲಾಗಿದೆ.

## ಹೊನ್ನಾಳಿ ಉಪ ವಿಭಾಗಾಧಿಕಾರಿ ಹುಲ್ಲುಮನಿ ತಿಮ್ಮಣ್ಣಗೆ ಪಿತೃ ವಿಯೋಗ



ದಾವಣಗೆರೆ, ಜೂ. 17- ಹೊನ್ನಾಳಿ ಉಪ ವಿಭಾಗಾಧಿಕಾರಿ ಹುಲ್ಲುಮನಿ ತಿಮ್ಮಣ್ಣ ಅವರ ತಂದೆ ಗೋವಿಂದಪ್ಪ (78) ಗುರುವಾರ ಸಂಜೆ 4.15ಕ್ಕೆ ದಾವಣಗೆರೆಯಲ್ಲಿ ನಿಧನರಾದರು.

ಮೃತರಿಗೆ ಒಬ್ಬ ಪುತ್ರ, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು-ಬಾಂಧವರು ಇದ್ದಾರೆ. ದಾವಣಗೆರೆಯ ಹಿಂದೂ ರುದ್ರಭೂಮಿಯಲ್ಲಿ ಶುಕ್ರವಾರ ಬೆಳಗ್ಗೆ 11ಕ್ಕೆ ಅಂತ್ಯಕ್ರಿಯೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

### ಮಲೇಬೆನ್ನೂರಿನ ಮಂಜುನಾಥ ಸ್ವಾಮಿ ನಿಧನ



ಮಲೇಬೆನ್ನೂರು ಪಟ್ಟಣದ ಇಂದಿರಾನಗರದ ವಾಸಿ ನಿವೃತ್ತ ಮುಖ್ಯ ಶಿಕ್ಷಕರಾದ ಹೆಚ್. ಕೊಟ್ರಬಸಯ್ಯನವರ ದ್ವಿತೀಯ ಪುತ್ರ ಹಾಗೂ ಗುತ್ತಿಗಾದಾರ ಮಂಜುನಾಥಸ್ವಾಮಿ (48 ವರ್ಷ) ಅವರು ದಿನಾಂಕ 16.06.2022ರ ಗುರುವಾರ ತಡರಾತ್ರಿ 1 ಗಂಟೆಗೆ ದಾವಣಗೆರೆಯಲ್ಲಿ ಹೃದಯಾಘಾತದಿಂದ ನಿಧನರಾದರು. ತಂದೆ, ತಾಯಿ, ಸಹೋದರ, ಪತ್ನಿ, ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 17.06.2022ರ ಶುಕ್ರವಾರ ಮಧ್ಯಾಹ್ನ 3 ಗಂಟೆಗೆ ಶಾಮನೂರು ರುದ್ರಭೂಮಿಯಲ್ಲಿ ನೆರವೇರಿತು.

### ಲಿಂಗದಹಳ್ಳಿ ಕುರ್ಕಿ ಬಸಪ್ಪ ನಿಧನ



ದಾವಣಗೆರೆ ತಾಲ್ಲೂಕು ಲಿಂಗದಹಳ್ಳಿ ಗ್ರಾಮದ ವಾಸಿ ಕುರ್ಕಿ ಬಸಪ್ಪ (97) ಇವರು ದಿನಾಂಕ : 17.06.2022 ರ ಶುಕ್ರವಾರ ಮಧ್ಯಾಹ್ನ 1.30 ಕ್ಕೆ ನಿಧನರಾದರು. ಪತ್ನಿ, ಇಬ್ಬರು ಪುತ್ರರು, ಮೂವರು ಪುತ್ರಿಯರು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆ ದಿನಾಂಕ: 18.06.2022ರ ಶನಿವಾರ ಬೆಳಿಗ್ಗೆ 11 ಗಂಟೆಗೆ ದಾವಣಗೆರೆ ತಾಲ್ಲೂಕು ಲಿಂಗದಹಳ್ಳಿ ಗ್ರಾಮದಲ್ಲಿ ನೆರವೇರಲಿದೆ.

### ಕುರ್ಕಿ ಕೆ.ಸಿ.ಸಿದ್ದಪ್ಪ ನಿಧನ



ದಾವಣಗೆರೆ ತಾಲ್ಲೂಕು ಕುರ್ಕಿ ಗ್ರಾಮದ ವಾಸಿ ಸಿದ್ದಪ್ಪ ಕೆ.ಸಿ. (83) ಇವರು ದಿನಾಂಕ: 17.06.2022 ರ ಶುಕ್ರವಾರ ರಾತ್ರಿ 10:30 ಕ್ಕೆ ನಿಧನರಾದರು. ಮೃತರ ಪತ್ನಿ, ಇಬ್ಬರು ಪುತ್ರರು, ಓರ್ವ ಪುತ್ರಿ, ಸೊಸೆಯಂದಿರು, ಅಳಿಯ, ಮೊಮ್ಮಕ್ಕಳು ಹಾಗೂ ಅಪಾರ ಬಂಧು ಬಳಗ ವನ್ನು ಅಗಲಿರುವ ಮೃತರ ಅಂತ್ಯಕ್ರಿಯೆ ದಿನಾಂಕ: 18.06.2022 ರ ಶನಿವಾರ ಮಧ್ಯಾಹ್ನ 12 ಗಂಟೆಗೆ ಮೃತರ ಸ್ವಗ್ರಾಮವಾದ ದಾವಣಗೆರೆ ತಾಲ್ಲೂಕು ಕುರ್ಕಿ ಗ್ರಾಮದ ಮೃತರ ಜಮೀನಿನಲ್ಲಿ ನೆರವೇರಲಿದೆ.

## ಹೊನ್ನಾಳಿ ತಾಲ್ಲೂಕು ಸಾಧು ವೀರಶೈವ ಸಮಾಜದ ಅಧ್ಯಕ್ಷ ಕರೇಗೌಡಪ್ಪ ನಿಧನ



ಹೊನ್ನಾಳಿ, ಜೂ. 17- ಹೊನ್ನಾಳಿ ತಾಲ್ಲೂಕು ಸಾಧು ವೀರಶೈವ ಲಿಂಗಾ ಯಿತ ಸಮಾಜದ ಅಧ್ಯಕ್ಷ ಕೆ.ಕರಿಗೌಡರು (73) ಇಂದು ಸಂಜೆ 6.30 ಕ್ಕೆ ನಿಧನರಾದರು. ಶಿವಮೊಗ್ಗದಲ್ಲಿ ಗುರುವಾರ ನಡೆದ ಅಪಘಾತದಿಂದ ತೀವ್ರ ಅಸ್ವಸ್ಥರಾದ ಅವರನ್ನು ನಂಜಪ್ಪ ಆಸ್ಪತ್ರೆಗೆ ಚಿಕಿತ್ಸೆಗಾಗಿ ದಾಖಲಿಸಲಾಗಿತ್ತು, ಚಿಕಿತ್ಸೆ ಫಲಕಾರಿಯಾಗದೆ ಶುಕ್ರವಾರ ಮೃತಪಟ್ಟಿದ್ದಾರೆ. ಮೃತರು ಓರ್ವ ಪುತ್ರ, ಓರ್ವ ಪುತ್ರಿಯನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ನಾಳೆ ಶನಿವಾರ ಸ್ವಗ್ರಾಮ ಬೆನಕನಹಳ್ಳಿಯ ರುದ್ರಭೂಮಿಯಲ್ಲಿ ಮಧ್ಯಾಹ್ನ 1 ಗಂಟೆಗೆ ನಡೆಯಲಿದೆ.

**ಸಂತಾಪ:** ಸಾಧು ವೀರಶೈವ ಸಮಾಜದ ಹೊನ್ನಾಳಿ ತಾಲ್ಲೂಕು ಘಟಕದ ಅಧ್ಯಕ್ಷರಾದ ಕರೇಗೌಡರು ನಿಧನಕ್ಕೆ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಬಿ. ವಾಮದೇವಪ್ಪ ಹಾಗೂ ಶ್ರೀಮತ್ ಸಾಧು ಸದ್ಧರ್ಮ ವೀರಶೈವ ಸಂಘ ತೀವ್ರ ಸಂತಾಪ ವ್ಯಕ್ತಪಡಿಸಿದೆ.

ಸಮಾಜ ಹಾಗೂ ಸಿರಿಗೆರೆ ಗುರು ಪರಂಪರೆಯ ಬಗ್ಗೆ ಅಪಾರ ಶ್ರದ್ಧಾ- ಭಕ್ತಿಯನ್ನು ಇಟ್ಟುಕೊಂಡು ಸೇವೆ ಸಲ್ಲಿಸುತ್ತಿದ್ದ ಹಿರಿಯ ಚೇತನ ಅಕಾಲಿಕ ನಿಧನ ಸಮಾಜ ಹಾಗೂ ಶ್ರೀಮಠಕ್ಕೆ ತುಂಬಲಾರದ ನಷ್ಟವಾಗಿದೆ ಎಂದು ಶ್ರೀಮತ್ ಸಾಧು ಸದ್ಧರ್ಮ ವೀರಶೈವ ಸಂಘ ಕಂಬನಿ ಮಿಡಿದಿದೆ.

# ಖಾಸಗಿ ಕಾಲೇಜಿಗೆ ಶಾಸಕ ಕರುಣಾಕರ ರೆಡ್ಡಿ ದಿಢೀರ್ ಭೇಟಿ : ಶುಲ್ಕ ಕಡಿಮೆ ಮಾಡಲು ಸೂಚನೆ

ಹರಪನಹಳ್ಳಿ, ಜೂ. 17- ಕಳೆದ ಹದಿನೈದು ದಿನಗಳಿಂದ ಪಟ್ಟಣದ ಎಸ್.ಎಸ್.ಹೆಚ್ ಜೈನ್ ಪಿಯು ಕಾಲೇಜಿನಲ್ಲಿ ಪಿಯುಸಿ ವಿದ್ಯಾರ್ಥಿಗಳಿಂದ ಹೆಚ್ಚುವರಿ ಶುಲ್ಕ ಪಡೆಯಲಾಗುತ್ತಿದೆ ಎಂಬ ಆರೋಪದ ಹಿನ್ನೆಲೆಯಲ್ಲಿ ವಿವಿಧ ಸಂಘಟನೆಗಳ ಮುಖಂಡರು ನಿರಂತರವಾಗಿ ಪ್ರತಿಭಟನೆ ನಡೆಸುತ್ತಿದ್ದ ಪರಿಣಾಮ ಶುಕ್ರವಾರ ದಿಢೀರನೇ ಶಾಸಕ ಜಿ. ಕರುಣಾಕರ ರೆಡ್ಡಿ ಅವರು ಕಾಲೇಜಿಗೆ ಭೇಟಿ ನೀಡಿ, ಶುಲ್ಕದ ವಿಚಾರವಾಗಿ ಕಾಲೇಜು ಆಡಳಿತ ಮಂಡಳಿ, ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳೊಂದಿಗೆ ಪರಿಶೀಲನೆ ನಡೆಸಿದರು.

ಈ ವೇಳೆ ಪ್ರತಿಭಟನಾ ನಿರತ ಕಾರ್ಯಕರ್ತರು, ಸಂಘಟನೆಯ ಮುಖಂಡರು, ವಿದ್ಯಾರ್ಥಿಗಳು, ಪೋಷಕರು ಕಾಲೇಜಿನ ಆಡಳಿತ ಮಂಡಳಿ ಧೋರಣೆಯ ವಿರುದ್ಧ ತಮ್ಮ ಅಳಲನ್ನು ಶಾಸಕರಲ್ಲಿ ತೋಡಿಕೊಂಡರು.

ಸಮಸ್ಯೆ ಆಲಿಸಿದ ಶಾಸಕರು ಕಾಲೇಜಿನ ಸಿಬ್ಬಂದಿಗಳೊಂದಿಗೆ ಪ್ರಾಚಾರ್ಯರ ಕೊಠಡಿಗೆ ಆಗ ಮಿಸಿ, ಇಲ್ಲಿಯವರೆಗೆ ನಡೆದ ದಾಖಲಾತಿ ವಿವರ,




ಶುಲ್ಕ, ರಶೀದಿ ಮತ್ತು ಉಪನ್ಯಾಸಕರ ವೇತನ ಪಟ್ಟಿ ಹಾಗೂ ಸಿಬ್ಬಂದಿಗಳ ಹಾಜರಾತಿ ಪರಿಶೀಲಿಸಿದ ವೇಳೆ ಪ್ರಾಚಾರ್ಯರು ಮತ್ತು ಆಡಳಿತ ಮಂಡಳಿಯವರು ಗೈರಾಗಿದ್ದು ಕಂಡು ಬಂದ ಹಿನ್ನೆಲೆಯಲ್ಲಿ ಈ ಕುರಿತು ಜಿಲ್ಲಾ ಉಪನಿರ್ದೇಶಕರಿಗೆ ದೂರವಾಣಿ ಕರೆ ಮಾಡಿ ಮಾತನಾಡಿ, ಈ ಕಾಲೇಜಿನಲ್ಲಿ ಸರ್ಕಾರದ ಮಾನದಂಡಗಳನ್ನು ಮೀರಿ ಹೆಚ್ಚುವರಿ ಶುಲ್ಕ ಪಡೆಯುತ್ತಿರುವುದು ಗಮನಕ್ಕೆ ಬಂದಿದ್ದು ತಾವು ಕೂಡಲೇ ಮಧ್ಯ ಪ್ರವೇಶ ಮಾಡಿ, ಸರ್ಕಾರದ ಹಾಗೂ ಕಾಲೇಜು ಆಡಳಿತ ಮಂಡಳಿಯ ಸಮನ್ವಯದಂತೆ ಶುಲ್ಕ ಪಡೆದು ವಿದ್ಯಾರ್ಥಿಗಳ ಶಿಕ್ಷಣಕ್ಕೆ ಅವಕಾಶ ಮಾಡಿಕೊಡಬೇಕೆಂದು ಹೇಳಿದರು.

ಉಪನಿರ್ದೇಶಕರ ಆದೇಶದ ಮೇರೆಗೆ ಕಾಲೇಜು ಶುಲ್ಕದ ನ್ಯೂನತೆ ಬಗ್ಗೆ ತನಿಖಾ ವರದಿ ಮಾಡಿಕೊಳ್ಳಲು ನೇಮಿಸಲಾಗಿದ್ದ, ಲಕ್ಷ್ಮೀಪುರ ಕಾಲೇಜು ಪ್ರಾಚಾರ್ಯ ರಾಮಚಂದ್ರಪ್ಪನವರಿಂದ ಮಾಹಿತಿ ಪಡೆದ ಶಾಸಕರು ಗೈರಾದ ಕಾಲೇಜಿನ ಪ್ರಾಚಾರ್ಯರು ಹಾಗೂ ಶುಲ್ಕದ ಮಾಹಿತಿ ಪ್ರಕಾರ ವರದಿಯನ್ನು ಡಿಡಿಪಿಯುಗೆ ಸಲ್ಲಿಸಲು ಸೂಚಿಸಿದರು.

ಬಳಿಕ ಕಾಲೇಜು ಪ್ರಾಚಾರ್ಯ ಬಸವರಾಜಪ್ಪ ನವರೊಂದಿಗೆ ದೂರವಾಣಿ ಮೂಲಕ ಮಾತನಾಡಿ, ತಾವು ಯಾಕೆ ಗೈರಾಗಿದ್ದೀರಾ, ಗೈರು ಆಗಿದ್ದರೆ ಇನ್ನೊಬ್ಬರಿಗೆ ಪ್ರಭಾರಿಯಾಗಿ ವಹಿಸಿ ತೆರಳಬೇಕಾಗಿತ್ತು. ಕೂಡಲೇ ನಿಮ್ಮ ಆಡಳಿತ ಮಂಡಳಿಯೊಂದಿಗೆ ಮಾತನಾಡಿ, ಹರಪನಹಳ್ಳಿ ತಾಲ್ಲೂಕಿನ ಗ್ರಾಮೀಣ ಭಾಗದಿಂದ ವಿದ್ಯಾರ್ಥಿಗಳು ಹೆಚ್ಚಾಗಿ ವ್ಯಾಸಂಗ ಮಾಡಲು ಬರುತ್ತಾರೆ. ಆದ್ದರಿಂದ ಸರ್ಕಾರದ ನಿಯಮಾನುಸಾರ ಶುಲ್ಕ ಪಡೆಯಿರಿ, ಪೋಷಕರಿಗೆ ಅನುಕೂಲವಾಗುವಂತೆ ಹಂತ ಹಂತವಾಗಿ ಶುಲ್ಕ ಪಾವತಿ ಮಾಡಿಸಿಕೊಳ್ಳಿ ಎಂದು ಸೂಚಿಸಿದರು.

ಈ ಸಂದರ್ಭದಲ್ಲಿ ಮುಖಂಡರಾದ ಬಾಗಳಿ ಕೊಟ್ರೇಶಪ್ಪ, ವಕೀಲರಾದ ಕೆಂಗಳ್ಳಿ ಪ್ರಕಾಶ್, ಕೆ.ಎಂ. ಪ್ರಾಣೇಶ್, ಮುತ್ತಿಗಿ ರೇವಣಸಿದ್ದಪ್ಪ, ಮುಖಂಡರಾದ ಬಿ. ಮೆಹಬೂಬಸಾಬ್, ಕಣಿವಿ ಹಳ್ಳಿ ಮಂಜುನಾಥ್, ಎಂ. ಮಲ್ಲೇಶ್, ದಾದಪುರ ಶಿವಾನಂದ, ವಿದ್ಯಾರ್ಥಿ ಸಂಘಟನೆಯ ಮುಖಂಡ ರಾದ ಶ್ರೀಕಾಂತ ಯಾದವ್, ವೆಂಕಟೇಶ್, ಶಿವರಾಜ ಉಪಸ್ಥಿತರಿದ್ದರು.

# ಭ್ರಷ್ಟ ಅಧಿಕಾರಿಗಳಿಗೆ ಎಸಿಬಿ ಬಿಸಿ

## 21 ಅಧಿಕಾರಿಗಳಿಗೆ ಸೇರಿದ 80 ಸ್ಥಳಗಳಲ್ಲಿ ಏಕ ಕಾಲಕ್ಕೆ ದಾಳಿ: ಅಕ್ರಮ ಸಂಪತ್ತು ಪತ್ತೆ

ಬೆಂಗಳೂರು, ಜೂ. 17 - ರಾಜ್ಯ ಸರ್ಕಾರದ 21 ಭ್ರಷ್ಟ ಅಧಿಕಾರಿಗಳಿಗೆ ಸೇರಿದ 80 ಸ್ಥಳಗಳ ಮೇಲೆ ಏಕಕಾಲಕ್ಕೆ ಬೆಳ್ಳಂ ಬೆಳಿಗ್ಗೆ ಎಸಿಬಿ ಅಧಿಕಾರಿಗಳು ಮೆಗಾ ರೇಡ್ ನಡೆಸಿದ್ದು, 300ಕ್ಕೂ ಹೆಚ್ಚು ಪೊಲೀಸರು ದಾಳಿಯಲ್ಲಿ ಪಾಲ್ಗೊಂಡು ಭಾರೀ ಪ್ರಮಾಣದ ಅಕ್ರಮ ಸಂಪತ್ತು ಪತ್ತೆ ಹಚ್ಚಿದ್ದಾರೆ.



ಕಳೆದ ಕೆಲ ದಿನಗಳಿಂದ ಖಾಲಿ ಇದ್ದ ಲೋಕಾಯುಕ್ತರ ನೇಮಕದ ಬೆನ್ನಲ್ಲೇ ಎಸಿಬಿ ಅಧಿಕಾರಿಗಳು ಭಾರೀ ಪ್ರಮಾಣದ ದಾಳಿ ನಡೆಸಿ ಸಂಚಲನ ಸೃಷ್ಟಿಸಿದ್ದಾರೆ. ಭ್ರಷ್ಟ ಅಧಿಕಾರಿಗಳೊಂದಿಗೆ ಇಬ್ಬರು ನಿವೃತ್ತ ಸರ್ಕಾರಿ ನೌಕರರಿಗೂ ಬಿಸಿ ಮುಟ್ಟಿರುವುದು ವಿಶೇಷವಾಗಿದೆ.

ಹೂವಿನಹಡಗಲಿ ಸಣ್ಣ ನೀರಾವರಿ ಇಲಾಖೆಯ ಸಹಾಯಕ ಎಂಜಿನಿಯರ್ ಪರಮೇಶ್ವರಪ್ಪ, ರಾಣೇಬೆ ನ್ನೂರು ಯುಟಿಪಿ ಕಚೇರಿಯ ಚಂದ್ರಪ್ಪ ಸಿ. ಓಲೇಕಾರ್ ಹಾಗೂ ಬೆಂಗಳೂರಿನ ನಿವೃತ್ತ ಭೂಸ್ವಾಧೀನಾಧಿಕಾರಿ ಜನಾರ್ದನ್ ಎಸಿಬಿ ಬಲೆಗೆ ಬಿದ್ದವರು.

ರಾಜಧಾನಿಯ ಬಿಟಿಎಂ ಬಡಾವಣೆಯ ಎಲ್‌ಬಿಎಸ್ ನಗರ ನಿವಾಸಿ ಉಪಮುಖ್ಯ ವಿದ್ಯುತ್ ಇನ್ಸ್‌ಪೆಕ್ಟರ್ ಸಿದ್ದಪ್ಪ ನಿವಾಸದ ಮೇಲೆ ದಾಳಿ ನಡೆಸಿದಾಗ ಕಂತೆ ಕಂತೆ ನೋಟುಗಳು, ಕೆ.ಜಿ.ಗಟ್ಟಲೆ ಚಿನ್ನಾಭರಣ ಮತ್ತಿತರೆ ಆಸ್ತಿ ದಾಖಲೆ ಪತ್ರಗಳು ಪತ್ತೆಯಾಗಿವೆ.

ಶಿವಮೊಗ್ಗದಲ್ಲಿ 4 ಹಾಗೂ ಹೊನ್ನಾಳಿಯಲ್ಲಿ 3 ನಿವೇಶನಗಳನ್ನು ಹೊಂದಿರುವ ಪತ್ರಗಳು, 2 ಮನೆ, ಹುಟ್ಟೂರಿನಲ್ಲಿ 8 ಎಕರೆ ತೋಟ, ತಾವರೆ ಚಿಕ್ಕನಹಳ್ಳಿಯಲ್ಲಿ 1.7 ಎಕರೆ ಭೂಮಿ, 7 ಲಕ್ಷ ನಗದು, 1 ಕೆ.ಜಿ.ಗೂ ಹೆಚ್ಚು ಚಿನ್ನಾಭರಣ ಹಾಗೂ ಐಷಾರಾಮಿ ಕಾರು ಹೊಂದಿರುವು ದು ಬೆಳಕಿಗೆ ಬಂದಿದೆ. ಬಿಡಿಎನಲ್ಲಿ ಮಾಲಿ ಕೆಲಸ ಮಾಡುವ ಶಿವಲಿಂಗಯ್ಯ ಬೆಂಗಳೂರಿನ ಪ್ರತಿಷ್ಠಿತ ಬಡಾ ವಣೆಗಳಲ್ಲಿ ಮೂರು ಭವ್ಯ ಬಂಗಲೆಗಳನ್ನು ಹೊಂದಿರು ವುದು ಹಲವರನ್ನು ಹುಬ್ಬೇರಿಸುವಂತೆ ಮಾಡಿದೆ.

ಬಾಗಲಕೋಟೆ ಆರ್‌ಟಿಒ ಯಲ್ಲಪ್ಪ ಎನ್.ಪಡಸಾಲಿ, ಬಾಗಲಕೋಟೆ ನಿರ್ಮಿತಿ ಕೇಂದ್ರದ ಯೋಜನಾ ನಿರ್ದೇಶಕ ಶಂಕರಪ್ಪ ನಾಗಪ್ಪ ಗೋಗಿ, ಗದಗ ಆರ್‌ಡಿಪಿಆರ್ ಪಂಚಾಯತ್ ಗ್ರೇಡ್ ಕಾರ್ಯದರ್ಶಿ ಪ್ರದೀಪ್ ಎಸ್. ಹಾಲೂರ್, ಬೆಂಗಳೂರಿನ ಉಪ ಮುಖ್ಯ ವಿದ್ಯುತ್ ಇನ್ಸ್‌ಪೆಕ್ಟರ್ ಸಿದ್ದಪ್ಪ ಟಿ., ಬೀದರನ ಜಿಲ್ಲಾ ಯೋಜನಾಕಾರಿ ತಿಪ್ಪಣ್ಣ ಪಿ.ಸಿರಸಂಗಿ, ಬೀದರ ಪಶು ವಿಶ್ವವಿದ್ಯಾಲಯದ ಸಹಾಯಕ ನಿಯಂತ್ರಕ ಮೃತ್ಯುಂಜಯ ಚನ್ನಬಸಯ್ಯ ತಿರಣಿ, ಚಿಕ್ಕಬಳ್ಳಾಪುರ ನೀರಾವರಿ ಇಲಾಖೆಯ ಇಇ ಮೋಹನ್‌ಕುಮಾರ್, ಕಾರವಾರದ ಜಿಲ್ಲಾ ರಿಜಿಸ್ಟ್ರಾರ್ ಶ್ರೀಧರ್, ಲೋಕೋಪ ಯೋಗಿ ಇಲಾಖೆಯ ನಿವೃತ್ತ ಕಾರ್ಯ ಪಾಲಕ ಅಭಿಯಂತರ ಮಂಜುನಾಥ್ ಜಿ., ಬಿಡಿಎನಲ್ಲಿ ಗ್ರೂಪ್ 'ಸಿ' ಸಿಬ್ಬಂದಿ ಶಿವಲಿಂಗಯ್ಯ, ಕೊಪ್ಪಳ ಪೊಲೀಸ್ ಇನ್ಸ್‌ಪೆಕ್ಟರ್ ಉದಯರವಿ, ಕಡೂರು ಪುರಸಭೆಯ ಕೇಸ್ ವರ್ಕರ್ ಬಿ.ಜಿ. ತಿಮ್ಮಯ್ಯ, ಲೋಕೋಪಯೋಗಿ ಇಲಾಖೆ ಯಲ್ಲಿ ಕಾರ್ಯಪಾಲಕ ಅಭಿಯಂತರರಾಗಿ ಸೇವೆ ಯಿಂದ ನಿವೃತ್ತರಾಗಿರುವ ಮಂಜು ನಾಥ್, ಭೂಮಾಪನ ಇಲಾಖೆಯ ನಿವೃತ್ತ ಅಧಿಕಾರಿ ಜನಾರ್ದನ್ ನಿವಾಸಗಳ ಮೇಲೂ ಎಸಿಬಿ ಅಧಿಕಾರಿಗಳು ದಾಳಿ ನಡೆಸಿದ್ದಾರೆ.

ಮಂಜುನಾಥ್ ಅವರ ಬಸವೇಶ್ವರ ನಗರದ ಶಾರದಾ ಕಾಲೋನಿಯಲ್ಲಿರುವ ನಿವಾಸದ ಮೇಲೆ ದಾಳಿ ನಡೆಸಿ ಜಯನಗರ 9ನೆ ಬ್ಲಾಕ್‌ನ ಚೈತನ್ಯ ಗೋಲ್ಡ್ ಕಾಂಪ್ಲೆಕ್ಸ್ ಹಾಗೂ ಮಗಳ ಹೆಸರಿನಲ್ಲಿರುವ ಕೆ.ಆರ್.ಪುರಂನ (4ನೇ ಪುಟಕ್ಕೆ)

# ಏಕಾಏಕಿ ನಿವೃತ್ತಿ : ಪುನಃ ಕೆಲಸ ಸೇರ್ಪಡೆಗೆ ಪೌರ ಕಾರ್ಮಿಕರ ಮನವಿ

ದಾವಣಗೆರೆ, ಜೂ.17 - ನಗರದ ಸ್ವಚ್ಛತಾ ಕಾರ್ಯದಲ್ಲಿ ತೊಡಗಿರುವ ಪೌರ ಕಾರ್ಮಿಕರ ದಾಖಲಾತಿ ಪರಿಶೀಲಿಸದೇ ಯಾವುದೇ ಸೇವಾ ಭದ್ರತೆ ನೀಡದೇ ಏಕಾಏಕಿ ವಯಸ್ಸಾಗಿದೆ ಎಂದು ನಗರ ಪಾಲಿಕೆಯಿಂದ ಪೌರ ಕಾರ್ಮಿಕರನ್ನು ನಿವೃತ್ತಿಗೊಳಿಸಿದ್ದು, ಪುನಃ ಕೆಲಸಕ್ಕೆ ಸೇರಿಸಿಕೊಳ್ಳುವಂತೆ ಕರ್ನಾಟಕ ರಾಜ್ಯ ಮಹಾನಗರ ಪಾಲಿಕೆ, ನಗರಸಭೆ, ಪುರಸಭೆಗಳ ಪೌರ ಕಾರ್ಮಿಕರ ಮಹಾ ಸಂಘದ ನೇತೃತ್ವದಲ್ಲಿ ಪೌರಕಾರ್ಮಿಕರು ಮೊನ್ನೆ ಜಿಲ್ಲಾಡಳಿತಕ್ಕೆ ಮನವಿ ಸಲ್ಲಿಸಿದರು.

ಮೂಲ ದಾಖಲಾತಿಗಳನ್ನು ಪರಿಶೀಲಿಸಿ ಪುನಃ ಕೆಲಸಕ್ಕೆ ತೆಗೆದುಕೊಳ್ಳುವಂತೆ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಅವರಿಗೆ ಪೌರ ಕಾರ್ಮಿಕರು ಮನವಿ ಸಲ್ಲಿಸಿದರು.

ಆರೋಗ್ಯ ಇಲಾಖೆಯಲ್ಲಿ ಇತ್ತೀಚಿಗೆ ಗುತ್ತಿಗೆ ಪದ್ಧತಿ ರದ್ದಾಗಿ ನೇರ ಪಾವತಿಯಡಿ ಕಾರ್ಯನಿರ್ವಹಿಸುತ್ತಿರುವ ಕಾರ್ಮಿಕರಿಗೆ ಯಾವುದೇ ಸೇವಾ ಭದ್ರತೆ ಇಲ್ಲದೇ ಏಕಾಏಕಿ ಕಾರ್ಮಿಕರನ್ನು ಕರ್ತವ್ಯದಿಂದ ವಿಮುಕ್ತಿಗೊಳಿಸಿರುವ ನಗರ ಪಾಲಿಕೆ ಕ್ರಮದ ಬಗ್ಗೆ ಸಂಘವು ಅಸಮಾಧಾನ ವ್ಯಕ್ತಪಡಿಸಿದೆ.

ನೇರ ಪಾವತಿ ಪದ್ಧತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಕಾರ್ಮಿಕರನ್ನು ಏಕಕಾಲದಲ್ಲಿ 60 ವರ್ಷ ವಯಸ್ಸಾಗಿದೆ ಎಂದು ದಾಖಲಾತಿಗಳನ್ನು ಪರಿಶೀಲನೆ ನಡೆಸದೇ ವಯೋ ನಿವೃತ್ತಿ ನೀಡಲಾಗಿದೆ. ಗುತ್ತಿಗೆ ಪದ್ಧತಿ ನಡೆಯುವ ಸಂದರ್ಭದಲ್ಲಿ ಗುತ್ತಿಗೆದಾರ ಕೊಟ್ಟ ಮಾಹಿತಿ ಮೇಲೆಯೇ ಅನಕ್ಷರಸ್ಥರಾಗಿರುವ ಪೌರ ಕಾರ್ಮಿಕರ ಸರಿಯಾದ ವಯಸ್ಸನ್ನು ದೃಢೀಕರಿಸದ ಕಾರ್ಮಿಕರನ್ನು ನಿವೃತ್ತಿಗೊಳಿಸಿರುವುದು ಸರಿಯಲ್ಲ ಎಂದು ದೂರಿದರು.

ಈ ವೇಳೆ ಸಂಘದ ರಾಜ್ಯ ಕಾರ್ಯಾಧ್ಯಕ್ಷ ಎಲ್.ಎಂ. ಹನುಮಂತಪ್ಪ, ರಾಜ್ಯ ಉಪಾಧ್ಯಕ್ಷ ಎಲ್.ಹೆಚ್. ಸಾಗರ್, ಪೌರ ಕಾರ್ಮಿಕರ ಸಂಘದ ಪ್ರಧಾನ ಕಾರ್ಯದರ್ಶಿ ಎನ್. ನೀಲಗಿರಿಯಪ್ಪ, ಪೌರ ಮತ್ತು ಗುತ್ತಿಗೆ ಸಫಾಯಿ ಕರ್ಮಚಾರಿಗಳ ಸಂಘದ ಅಧ್ಯಕ್ಷ ಜಿ. ಬಸವರಾಜ್ ಸೇರಿದಂತೆ ಇತರರು ಇದ್ದರು.

# ಅಪ್ರಾಪ್ತೆ ಅಪಹರಣ : ಆರೋಪಿಗೆ ಶಿಕ್ಷೆ

ದಾವಣಗೆರೆ, ಜೂ.17 - ಅಪ್ರಾಪ್ತ ಬಾಲಕಿಯನ್ನು ಪ್ರೀತಿಸುವುದಾಗಿ ನಂಬಿಸಿ ಆಕೆಯನ್ನು ಅಪಹರಿಸಿದ್ದ ಆರೋಪಿಗೆ ನ್ಯಾಯಾಲಯವು 4 ವರ್ಷಗಳ ಕಾಲ ಜೈಲು ಸಜೆ ಹಾಗೂ ದಂಡ ವಿಧಿಸಿದೆ.

ಆಜಾದ್ ನಗರದ ಸುಭಾನ್ ಎಂಬಾತ ಶಿಕ್ಷೆಗೆ ಒಳಗಾದ ಆರೋಪಿ. ಸ್ಥಳೀಯ ನಿವಾಸಿಯೊಬ್ಬರ ಮನೆಯಿಂದ ಅಪ್ರಾಪ್ತ ಬಾಲಕಿಯನ್ನು ಅಪಹರಿಸಿ ಮಹಾರಾಷ್ಟ್ರಕ್ಕೆ ಕರೆದುಕೊಂಡು ಹೋಗಿದ್ದ ಆರೋಪದ ಹಿನ್ನೆಲೆಯಲ್ಲಿ ನ್ಯಾಯಾಧೀಶರಾದ ಎನ್. ಶ್ರೀಪಾದ ಅವರು ಆರೋಪಿಯ ವಿರುದ್ಧ ಆರೋಪ ಸಾಬೀತಾದ ಹಿನ್ನೆಲೆಯಲ್ಲಿ ಈ ಆದೇಶ ಹೊರಡಿಸಿದ್ದಾರೆ.

ಆರೋಪಿ ಸುಭಾನ್ 2019ರಲ್ಲಿ ಅಪ್ರಾಪ್ತ ಬಾಲಕಿಯನ್ನು ಪ್ರೀತಿಸುವುದಾಗಿ ನಂಬಿಸಿ ಮದುವೆಯಾಗುವುದಾಗಿ ಪುಸಲಾಯಿಸಿ ಆಕೆಯನ್ನು ಮಹಾರಾಷ್ಟ್ರಕ್ಕೆ ಕರೆದುಕೊಂಡು ಹೋಗಿದ್ದ. ಈ ಹಿನ್ನೆಲೆಯಲ್ಲಿ ಸಂತ್ರಸ್ತೆಯ ಅಜ್ಜಿ ದಾವಣಗೆರೆ ನಗರದ ಮಹಿಳಾ ಠಾಣೆಗೆ ದೂರು ನೀಡಿದ್ದರು. ದೂರು ದಾಖಲಿಸಿಕೊಂಡು ತನಿಖೆ ನಡೆಸಿದ ಅಂದಿನ ಠಾಣಾಧಿಕಾರಿ ಪ್ರಕಾಶ್ ಅವರು ಆರೋಪಿತನ ವಿರುದ್ಧ ದೋಷಾರೋಪಣೆ ಪಟ್ಟಿ ಸಲ್ಲಿಸಿದ್ದರು.

ಪ್ರಕರಣದ ವಿಚಾರಣೆ ನಡೆಸಿದ ನಗರದ ಎರಡನೇ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶರಾದ ಎನ್.ಶ್ರೀಪಾದ್ ಅವರು ಆರೋಪಿತನ ವಿರುದ್ಧ ಆರೋಪ ಸಾಬೀತಾದ ಹಿನ್ನೆಲೆಯಲ್ಲಿ 4 ವರ್ಷ ಜೈಲು ವಾಸ ಹಾಗೂ ಹತ್ತು ಸಾವಿರ ದಂಡ ವಿಧಿಸಿ ತೀರ್ಪು ನೀಡಿದ್ದಾರೆ.

ಈ ಪ್ರಕರಣದಲ್ಲಿ ಸರ್ಕಾರದ ಪರವಾಗಿ ವಿಶೇಷ ಅಭಿಯೋಜಕರಾದ ರೇಖಾ ಎಸ್. ಕೋಟೆಗೌಡರ್ ವಾದ ಮಂಡಿಸಿದ್ದರು.

# ಯುರೋಪ್‌ಗೆ ರಷ್ಯಾ ಅನಿಲ ಪೂರೈಕೆ ಕಡಿತ

ಪ್ರೇಗ್, ಜೂ. 17 – ಯುರೋಪ್‌ಗೆ ನೈಸರ್ಗಿಕ ಅನಿಲ ಪೂರೈಸುವುದನ್ನು ರಷ್ಯಾ ಮತ್ತೆ ಕಡಿಮೆ ಮಾಡಿದೆ. ಇಟಲಿ ಹಾಗೂ ಸ್ಲೋವೇಕಿಯಾಗಳಿಗೆ ಪೂರೈಸುವ ಅನಿಲವನ್ನು ಅರ್ಧದಷ್ಟು ಇಳಿಕೆ ಮಾಡಲಾಗಿದೆ. ಫ್ರಾನ್ಸ್‌ಗೆ ಅನಿಲ ಪೂರೈಸುವುದನ್ನು ಸಂಪೂರ್ಣ ನಿಲ್ಲಿಸಲಾಗಿದೆ.

ಕಳೆದ ಮೂರು ದಿನಗಳಿಂದ ಗಣನೀಯ ಪ್ರಮಾಣದಲ್ಲಿ ಇಂಧನ ಪೂರೈಕೆ ನಿಲ್ಲಿಸಲಾಗುತ್ತಿದೆ. ಇದರಿಂದಾಗಿ ಯುರೋಪ್‌ನ ವಿದ್ಯುತ್ ಉತ್ಪಾದನೆಗೆ ಹಿನ್ನಡೆಯಾಗಿದೆ. ಜರ್ಮನಿ ಹಾಗೂ ಆಸ್ಟ್ರಿಯಾಗಳಲ್ಲಿ ಅತಿ ಹೆಚ್ಚಿನ ಪರಿಣಾಮ ಕಂಡು ಬಂದಿದೆ. ಯುರೋಪ್ ಒಕ್ಕೂಟ ದಲ್ಲಿ ಈಗಾಗಲೇ ದಾಖಲೆ ಮಟ್ಟದಲ್ಲಿರುವ ಅನಿಲ ಬೆಲೆ ಮತ್ತಷ್ಟು ಏರಿಕೆಯಾಗಿದೆ.

ತಾಂತ್ರಿಕ ಕಾರಣದಿಂದಾಗಿ ಜರ್ಮನಿ ಹಾಗೂ ಫ್ರಾನ್ಸ್‌ಗಳಿಗೆ ಅನಿಲ ಪೂರೈಕೆ ನಿಲ್ಲಿಸಲಾಗುತ್ತಿದೆ. ಅನಿಲ ಪೂರೈಕೆಗೆ ಅಗತ್ಯ ಉಪಕರಣಗಳನ್ನು ಕೆನಡಾದಲ್ಲಿ ಸಜ್ಜುಗೊಳಿಸಲಾಗುತ್ತಿದೆ. ಆದರೆ, ಪಾಶ್ಚಾತ್ಯ ದೇಶಗಳ ನಿರ್ಬಂಧಗಳಿಂದಾಗಿ ಈ ಉಪಕರಣಗಳು ಅಲ್ಲೇ ಸ್ಥಗಿತವಾಗಿವೆ ಎಂದು ರಷ್ಯಾ ಹೇಳಿದೆ.

# ನಗರದಲ್ಲಿ ಇಂದು ಬೆಸ್ಕಾಂ ವಿಭಾಗ - 1ರ ಗ್ರಾಹಕರ ಸಂವಾದ

ಬೆಸ್ಕಾಂ ನಗರ ಉಪ ವಿಭಾಗ-1 ರ ವತಿಯಿಂದ ಇಂದು ಮಧ್ಯಾಹ್ನ 3 ರಿಂದ 5.30 ರವರೆಗೆ ಗ್ರಾಹಕರ ಸಂವಾದ ನಡೆಯಲಿದ್ದು, ನಗರ ಉಪ ವಿಭಾಗ-1 ರ ವ್ಯಾಪ್ತಿಗೆ ಬರುವ ಗ್ರಾಹಕರು ತಮ್ಮ ಅಹವಾಲುಗಳೇನಾದರೂ ಇದ್ದಲ್ಲಿ ಮಧ್ಯಾಹ್ನ 3 ಗಂಟೆಗೆ ವಿದ್ಯಾನಗರದ ರವಿಂದ್ರನಾಥ ಪಾರ್ಕ್‌ನಲ್ಲಿ ಹಾಜರಾಗಬೇಕಾಗಿ ಕೋರಲಾಗಿದೆ.

# ನಲ್ಲಿ ನೀರಿನಲ್ಲಿ ದುರ್ವಾಸನೆ-ಅನಾರೋಗ್ಯ

ಎಂ. ಚಿದಾನಂದ ಕಂಚಿಕೇರಿ




ಹರಿಹರ, ಜೂ. 17 - ನಗರದ ತುಂಗಭದ್ರಾ ನದಿಯಲ್ಲಿ ನೀರಿನ ಪ್ರಮಾಣ ಕಡಿಮೆ ಆಗಿರುವ ನಡುವೆ, ನಗರಸಭೆಯ ವತಿಯಿಂದ ಸಾರ್ವಜನಿಕರಿಗೆ ಅಶುದ್ಧವಾದ ನೀರು ಸರಬರಾಜು ಮಾಡುತ್ತಿರುವುದರಿಂದ ಸಾರ್ವಜನಿಕರು ರೋಗಗಳಿಗೆ ತುತ್ತಾಗಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ನದಿಯ ನೀರಿನ ಹರಿವು ಬಹಳ ಕಡಿಮೆಯಾಗಿ ನೀರು ದುರ್ವಾಸನೆ ಬೀರುತ್ತಿದೆ. ಎಷ್ಟೇ ಶುದ್ಧೀಕರಣ ಮಾಡಿದರೂ ಸಹ ದುರ್ವಾಸನೆ ಕಡಿಮೆ ಆಗದೇ ಈ ನೀರು ಕುಡಿಯಲು ಯೋಗ್ಯವಿಲ್ಲದಂತಾಗಿದೆ. ನಗರದ ಎಲ್ಲಾ ಬಡಾವಣೆಗಳಿಗೆ ಇದೇ ನೀರು ಸರಬರಾಜಾಗಿದ್ದು, ಅನೇಕರು ವಿವಿಧ ರೀತಿಯ ರೋಗಗಳಿಗೆ ತುತ್ತಾಗಿ ಚಿಕಿತ್ಸೆ ಪಡೆಯವಂತಾಗಿದೆ.

ನೀರು ಶುದ್ಧೀಕರಣ ಮಾಡುವಾಗ ಅದಕ್ಕೆ ಬಳಸುವ ಪೌಡರ್ ಹೆಚ್ಚು ಹಾಕಿದರೆ, ಇನ್ನೂ ಹೆಚ್ಚಿನ ದುಷ್ಪರಿಣಾಮ ಬೀರಬಹುದು. ಹೀಗಾಗಿ, (4ನೇ ಪುಟಕ್ಕೆ)

## ಪ್ರಯೋಗ ಮಾಡಿದ್ದೇವೆ, ಸಮಸ್ಯೆ ಇಲ್ಲ

ಕಳೆದ 15 ದಿನದ ಕೆಳಗೆ ಹಳ್ಳದಕೇರಿ ಬಡಾವಣೆಯಲ್ಲಿ ಈ ರೀತಿಯ ಸಮಸ್ಯೆ ಬಂದಾಗ, ಅಲ್ಲಿ ಸರಬರಾಜು ಆಗುವ ನೀರನ್ನು ಸ್ಯಾಂಪಲ್ ತೆಗೆದುಕೊಂಡು ಪ್ರಯೋಗ ಶಾಲೆಯಲ್ಲಿ ಪರಿಶೀಲನೆ ನಡೆಸಲಾಗಿದೆ. ಅಲ್ಲಿ ಯಾವುದೇ ಸಮಸ್ಯೆ ಬರಲಿಲ್ಲ. ಫಿಲ್ಟರ್ ಸಮಸ್ಯೆ ನಮ್ಮಲ್ಲಿ ಇರುವುದಿಲ್ಲ. 24/7 ನೀರು ಸಪ್ಲೈ ಲೈನ್ ಮನೆಯ ಹತ್ತಿರ ಪೈಪ್ ಲೀಕೇಜ್ ಆಗಿದ್ದರೆ, ಚರಂಡಿ ನೀರು ಮಿಕ್ಸ್ ಆಗಿ ನೀರು ದುರ್ವಾಸನೆ ಬೀರುವ ಸಾಧ್ಯತೆ ಇರುತ್ತದೆ. ಬೆಳಗ್ಗೆ ಆ ಬಡಾವಣೆಯ ಸುತ್ತಮುತ್ತಲಿನ 100 ಮೀಟರ್ ಪ್ರದೇಶದಲ್ಲಿ ಚೆಕ್ ಮಾಡಿಸಲಾಗುತ್ತದೆ ಎಂದು ಪೌರಾಯುಕ್ತ ಐಗೂರು ಬಸವರಾಜ್ ಹೇಳಿದರು.

## ಫಿಲ್ಟರ್‌ಗೆ ಹಾಕಿದರೂ ವಾಸನೆ ಕಡಿಮೆಯಾಗುತ್ತಿಲ್ಲ

ನಮ್ಮ ನಲ್ಲಿಯಲ್ಲಿ ಹರಿದು ಬರುತ್ತಿರುವ ನೀರು ಬಹಳ ಗಬ್ಬುವಾಸನೆ ಬೀರುತ್ತದೆ. ನಾವು ನಮ್ಮ ಮನೆಯಲ್ಲಿ ಇರುವ ವಾಟರ್ ಫಿಲ್ಟರ್‌ಗೆ ನೀರು ಹಾಕಿ ಶುದ್ಧೀಕರಣ ಮಾಡಿದರು ಸಹ ದುರ್ವಾಸನೆ ಕಡಿಮೆ ಆಗುತ್ತಿಲ್ಲ. ಈ ನೀರಿನಿಂದಾಗಿ ಆರೋಗ್ಯದಲ್ಲಿ ವ್ಯತ್ಯಾಸವಾಗಿ ಎರಡು ದಿನ ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆ ಪಡೆಯುವಂತಾಗಿದೆ ಎಂದು ಕೆ.ಜಿ. ಶಿವಯೋಗಿ ಹೇಳಿದ್ದಾರೆ.

# ಮರಾಠ ವಿದ್ಯಾರ್ಥಿಗಳಿಗೆ ಪುರಸ್ಕಾರ

ದಾವಣಗೆರೆ, ಜೂ.17 - ಕರ್ನಾಟಕ ಕ್ಷತ್ರಿಯ ಮರಾಠ ಪರಿಷತ್ ಜಿಲ್ಲಾ ಘಟಕದಿಂದ ಎಸ್ಸೆಸ್ಸೆಲ್ಸಿಯಲ್ಲಿ ಶೇ.75ಕ್ಕೂ ಹೆಚ್ಚು ಅಂಕ ಗಳಿಸಿರುವ ಸಮಾಜದ ವಿದ್ಯಾರ್ಥಿಗಳಿಗೆ ಜಿಲ್ಲಾ ಮಟ್ಟದ ಛತ್ರಪತಿ ಶಿವಾಜಿ ಮಹರಾಜ್ ಹಾಗೂ ಜೀಜಾಮಾತಾ ಪ್ರತಿಭಾ ಪುರಸ್ಕಾರ ನೀಡಲಾಗುವುದು.

ಹೆಸರು ನೋಂದಣಿಗೆ ಇದೇ ದಿನಾಂಕ 25 ಕೊನೆ ದಿನ. ವಿವರಕ್ಕೆ ಕೃಷ್ಣರಾವ್ ಸಾವಂತ್ (9342514779), ಚೇತನ ಶಿವಕುಮಾರ್ (9731 289333), ಹನುಮಂತರಾವ್ (7019178175), ಟೇಕೋಜಿ ರಾವ್ ಹರಿಹರ ತಾ, (6362320831), ಸತೀಶ್ ರಾವ್ ಚನ್ನಗಿರಿ (960687 3944), ಅಣ್ಣೋಜಿರಾವ್ ಕಣಿವೆ ಬಿಳಚಿ (9449285481), ಗಜೇಂದ್ರ ಸಿಂಧೆ ಕತ್ತಲಗೆರೆ (9480566890), ಲಕ್ಷ್ಮಣರಾವ್ ಹರಪನಹಳ್ಳಿ ತಾ, (9916828264) ಸಂಪರ್ಕಿಸಲು ಜಿಲ್ಲಾ ಅಧ್ಯಕ್ಷ ಜಿ.ಹೆಚ್. ಮರಿಯೋಜಿರಾವ್ ತಿಳಿಸಿದ್ದಾರೆ.


## ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಮಸ್ತ ನಾಗರಿಕರಿಗೂ ತಿಳಿಯಪಡಿಸುವುದೇನೆಂದರೆ **ಪರಶುರಾಮ ಆರ್. ಬಿನ್ ಲೇಟ್ ರೇಣುಕಮ್ಮ ಮತ್ತು ರಾಜಪ್ಪ** ಇವರುಗಳು (ವಾದಿ), **ಮಂಜಮ್ಮ ಕೋಂ ರೇವಣಸಿದ್ದಪ್ಪ, ಯಶೋಧಮ್ಮ ಕೋಂ ಲೇಟ್ ರಾಜಪ್ಪ**, ಇವರುಗಳು (ಪ್ರತಿವಾದಿಗಳು), ಇವರ ವಿರುದ್ಧ ಈ ಕೆಳಗಿನ ಅನುಸೂಚಿಯಲ್ಲಿ ವರ್ಣಿಸಲಾದ ಸ್ವತ್ತಿನ ಮೇಲೆ ಅಸಲು ದಾವೆ ಸಂಖ್ಯೆ : 249/2021ನ್ನು ಪಾಲು ವಿಭಾಗಕ್ಕಾಗಿ ಮತ್ತು ಇನ್ನಿತರೆ ಪರಿಹಾರಗಳನ್ನು ಕೋರಿ 1ನೇ ಹೆಚ್ಚುವರಿ ಕಿರಿಯ ಸಿವಿಲ್ ನ್ಯಾಯಾಲಯ ಹಾಗೂ ಜೆಎಂಎಫ್‌ಸಿ ಕೋರ್ಟ್, ದಾವಣಗೆರೆ. ಇಲ್ಲಿ ಸಲ್ಲಿಸಿದ್ದು ಸದರಿ ಪ್ರಕರಣವು ಪ್ರಸ್ತುತ ಈಗ ಚಾಲ್ತಿಯಲ್ಲಿರುತ್ತದೆ. ಅಲ್ಲದೇ ಘನ ನ್ಯಾಯಾಲಯವು ಎದುರುದಾರರ ಅಂದರೆ ಪ್ರತಿವಾದಿಗಳ ವಿರುದ್ಧ ಸದರಿ ಕೆಳಗಿನ ಅನುಸೂಚಿಯ ಸ್ವತ್ತುಗಳನ್ನು ಯಾರಿಗೂ, ಯಾವುದೇ ರೀತಿಯಿಂದ ಮಾರಾಟ ಮಾಡಬಾರದೆಂದು ತಡೆಯಾಜ್ಞೆ ನೀಡಿರುತ್ತದೆ. ಪ್ರಸ್ತುತ ಈಗ ಈ ದಾವೆಯಲ್ಲಿರುವ ಸ್ವತ್ತನ್ನು ಎದುರುದಾರರು ಅಂದರೆ ಪ್ರತಿವಾದಿಯರು ಮಾರಲು ಹಾಗೂ ಇನ್ನಿತರೆ ಕಾನೂನಿಗೆ ವಿರೋಧವಾದ ಚಟುವಟಿಕೆಗಳನ್ನು ಮಾಡುವುದು ಬೆಳಕಿಗೆ ಬಂದಿರುತ್ತದೆ. ಈ ಕೆಳಗಿನ ಅನುಸೂಚಿಯ ಸ್ವತ್ತನ್ನು ಸಾರ್ವಜನಿಕರು ಖರೀದಿಸಬಾರದೆಂದು ಹಾಗೂ ಇನ್ನಿತರೆ ಕಾನೂನಿಗೆ ವಿರೋಧವಾದ ಚಟುವಟಿಕೆಗಳನ್ನು ಮಾಡಬಾರದೆಂದು ಈ ಮೂಲಕ ತಿಳಿಯಪಡಿಸಿದೆ. ಅಲ್ಲದೇ ರೇಣುಕಾ ಬಿಲ್ಡರ್ಸ್, ಪಿ.ಬಿ. ರಸ್ತೆ, ಅಗ್ನಿಶಾಮಕದಳ ಕಛೇರಿ ಎದುರು, ಪೆಟ್ರೋಲ್ ಬಂಕ್ ಪಕ್ಕ, ದಾವಣಗೆರೆ. ಇವರು ಈ ಜಮೀನಿನ ಕರಾರು ಮಾಡಿಕೊಂಡು ಸೈಟುಗಳ್ನು ಮಾಡಿ ಸಾರ್ವಜನಿಕರಿಗೆ ಕ್ರಯಕ್ಕೆ ಕೊಡುತ್ತಿರುವ ಮಾಹಿತಿ ಬಂದಿರುತ್ತದೆ. ಹಾಗಾಗಿ ಈ ವಿಚಾರದ ಬಗ್ಗೆ ಸಮಸ್ತ ಸಾರ್ವಜನಿಕರು ಎಚ್ಚರಿಕೆ ವಹಿಸಬೇಕಾಗಿ ಈ ಮೂಲಕ ಕೋರಿದೆ. ಆದಾಗ್ಯೂ ಸಾರ್ವಜನಿಕರು ಅಥವಾ ಯಾರಾದರೂ ಮಾರಾಟ ಪ್ರಕ್ರಿಯೆಯಲ್ಲಿ ಹಾಗೂ ಇನ್ನಿತರೆ ಕಾನೂನಿಗೆ ವಿರೋಧವಾದ ಚಟುವಟಿಕೆಗಳಲ್ಲಿ ತೊಡಗಿದರೆ ಅವರ ವಿರುದ್ಧ ಸೂಕ್ತ ಕಾನೂನಿನ ಕ್ರಮಗಳನ್ನು ಜರುಗಿಸಲಾಗುವುದು ಎಂದು ಈ ಮೂಲಕ ತಿಳಿಯತಕ್ಕದ್ದು.

**ಅನುಸೂಚಿ :** ಆವರಗೆರೆ ಗ್ರಾಮ, ಕಸಬಾ ಹೋಬಳಿ, ದಾವಣಗೆರೆ ತಾಲ್ಲೂಕು ಸರ್ವೆ ನಂ: 129 (ಇತ್ತೀಚಿನ ಪೋಡುಗಳ ಸಂಖ್ಯೆ: 129/1, 129/ಪಿ1) ಇದರ ವಿಸ್ತೀರ್ಣ 3 ಎಕರೆ 34 ಗುಂಟೆ ಜಮೀನಿಗೆ **ಚಕ್ಕುಬಂದಿ : - ಪೂರ್ವಕ್ಕೆ** : ಸರ್ವೆ ನಂ. 98 ರಿಂದ 103 ರ ಜಮೀನುಗಳು **ಪಶ್ಚಿಮಕ್ಕೆ** : ವಿರೂಪಾಕ್ಷಪ್ಪ ಚೆನ್ನಬಸಪ್ಪ ನವರ ಜಮೀನು **ಉತ್ತರಕ್ಕೆ** : ಇದೇ ಸರ್ವೆ ನಂಬರಿನಲ್ಲಿ ಉಳಿದ ಜಮೀನು **ದಕ್ಷಿಣಕ್ಕೆ** : ಅಂಬರಕರ್‌ರವರ ಜಮೀನು.

ಕಕ್ಷಿದಾರರ ಸಹಿ(ವಾದಿ)
(ಪರಶುರಾಮ .ಆರ್.,)

ಸಹಿ
ಅಜಯ್.ಸಿ. (ಎ.ಸಿ) ವಕೀಲರು,
ದಾವಣಗೆರೆ. ಮೊ: 97430 19896








**ಬಾಡಿಗೆಗೆ ಇದೆ**

ದಾವಣಗೆರೆ ಹದಡಿ ಮುಖ್ಯರಸ್ತೆ, ಟಿ.ವಿ.ಎಸ್. ಶೋ ರೂಂ ಪಕ್ಕ, ಉದಯ ಮಾರ್ಟ್ (ವಾಣಿ ರೈಸ್ ಮಿಲ್) ಎದುರು, ಶಿವಕುಮಾರಸ್ವಾಮಿ ಬಡಾವಣೆಯಲ್ಲಿ ಸುಸಜ್ಜಿತವಾದ ಮಳಿಗೆ 1ನೇ ಮಹಡಿ ಎಲ್ಲಾ ರೀತಿಯ ವ್ಯಾಪಾರಗಳಿಗೆ ಯೋಗ್ಯವಾದ 1104 ಅಡಿಗಳು ಹಾಗೂ 3250 ಅಡಿ ಸೆಲ್ಲರ್ ಬಾಡಿಗೆಗೆ ಇದೆ. ಮತ್ತು 4508 ಮೇಲ್ಭಾವಣಿ ಖಾಲಿ ಜಾಗ ಬಾಡಿಗೆಗೆ ಇದೆ.

96205 95579, 87924 53686

**ಸೈಟ್ ಮಾರಾಟಕ್ಕೆ (ಬಂಗ್ಲೆ)**

1) ಶಿವ ಪಾರ್ವತಿ 50x100 ಪೂರ್ವ
2) ವಿದ್ಯಾನಗರ 80x100 ಉತ್ತರ
3) ವಿನಾಯಕ ಬಡಾವಣೆ 40x93 ಉತ್ತರ
4) KHB ಕಾರ್ನರ್ 55X78 ಪೂರ್ವ, 60X80 ಪೂರ್ವ, 50X80 ಸೌತ್

ಕಿರಣ್ ಬೂಸ್ನೂರ್ : 98440-63409

ಕಮರ್ಷಿಯಲ್ ಕಾಂಪ್ಲೆಕ್ಸ್, ಸೈಟ್ ಮಾರಾಟಕ್ಕೆ 40x60, 30x40, 55x85, 32x80

**ಸೈಟ್‌ಗಳು ಮಾರಾಟಕ್ಕಿವೆ**

ಶಿವ-ಪಾರ್ವತಿ ಬಡಾವಣೆ ಪಕ್ಕ ಹೊಸ ಬನಶಂಕರಿ ಬನಶಂಕರಿ ಬಡಾವಣೆಯಲ್ಲಿ 30x25 ಉತ್ತರ ಅಕ್ಕ-ಪಕ್ಕ, ಸ್ವಾಮಿ ವಿವೇಕಾನಂದ ಬಡಾವಣೆಯಲ್ಲಿ 30x50 ಪಶ್ಚಿಮ ಅಕ್ಕ-ಪಕ್ಕ, 40x60 ಪೂರ್ವ

ಸ್ವಾಮಿ ಏಜೆಂಟ್, ವಿದ್ಯಾನಗರ 97421 44715

**ಮನೆ ಬಾಡಿಗೆಗಿದೆ**

ಸುಸಜ್ಜಿತ, ವಾಸ್ತು ಪ್ರಕಾರ ಉತ್ತರಾಭಿಮುಖವಾಗಿರುವ ವಿಶಾಲವಾದ ಹಾಲ್, ಕಿಚನ್, 2 ಬೆಡ್ ರೂಂ, ಪೂಜಾ ರೂಂ ಇರುವ ಏಳೂವರೆ ಚದುರವುಳ್ಳ, 24 ಗಂಟೆ ನೀರಿನ ವ್ಯವಸ್ಥೆಯಿರುವ ಮನೆ ದೇವರಾಜ ಅರಸು ಬಡಾವಣೆ 'ಎ' ಬ್ಲಾಕ್ ಅನ್ನಪೂರ್ಣೇಶ್ವರಿ ದೇವಸ್ಥಾನದ ಹತ್ತಿರ ಬಾಡಿಗೆಗಿದೆ. ಸಂಪರ್ಕಿಸಿ.

79750 35395

**ಟ್ಯಾಂಕ್ ಕ್ಲೀನಿಂಗ್**

ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ. ಅತ್ಯುತ್ತಮ ಸೇವೆಗೆ ಸಂಪರ್ಕಿಸಿ

99863 61250
91132 85992

**ಮನೆಯಲ್ಲಿ ನೀರು ಸೋರುವುದಕ್ಕೆ ಪರಿಹಾರ (ವಾಟರ್ ಪ್ರೂಫಿಂಗ್)**

ನಿಮ್ಮ ಮನೆಯಲ್ಲಿ ಸೀಲಿಂಗ್, ಬಾತ್ ರೂಂ, ಟ್ಯಾಂಕ್ ಮತ್ತು ಹೊರಗಡೆ ಗೋಡೆ ಸೀಳಿರುವುದಕ್ಕೆ ಮತ್ತು ಯಾವುದೇ ರೀತಿಯ ನೀರಿನ ಲೀಕೇಜ್‌ಗೆ ಕಡಿಮೆ ಖರ್ಚಿನಲ್ಲಿ ಪರ್ಮನೆಂಟ್ ಆಗಿ ಸರಿ ಮಾಡಿಕೊಡಲಾಗುವುದು. ಗ್ಯಾರಂಟಿ ಇರುತ್ತದೆ. ನಿರಂತರವಾಗಿ 15 ವರ್ಷಗಳಿಂದ ಸೇವೆ.

ವಿಶ್ವಾಸಿ ಎಂಟರ್‌ಪ್ರೈಸಸ್ 81050 40110

**ಸೈಟ್ ಮಾರಾಟಕ್ಕೆ**

ಉತ್ತರ 30×50 (ಅಪ್ರೂವಲ್) ಪಿ.ಬಿ. ರೋಡ್ ಸಾಯಿ ಹೋಟೆಲ್ ಮುಂದೆ ಸವಣೂರು ಪ್ಲಾಜಾದ ಅಪೊಲೋ ಕಾಂಪೌಂಡ್ ಹಿಂದೆ, ಅವೋಪ ಲೇಔಟ್‌ನಲ್ಲಿ

ಕಿರಣ್ ಬೂಸ್ನೂರ್ : 97315 63409

**3 BHK ಫ್ಲಾಟ್ ಲೀಸ್‌ಗೆ ಇದೆ**

ವಿದ್ಯಾನಗರದ ಕೊನೆಯ ಬಸ್ ಸ್ಟಾಪ್ ಬಳಿ ಇರುವ ಅಪಾರ್ಟ್‌ಮೆಂಟ್‌ನಲ್ಲಿ.

95913 60143

**ಮನೆ ಬಾಡಿಗೆಗೆ ಇವೆ**

1 BHK ಮತ್ತು 2 BHK ಮನೆಗಳು ಬಾಡಿಗೆಗೆ ಇವೆ. D.No # 570/12, ತಿರುಮಲ ಲೈನ್, 4th ಕ್ರಾಸ್, ಜರಿಕಟ್ಟೆ ರಸ್ತೆ ಶಾಮನೂರು, ದಾವಣಗೆರೆ. ಸಂಪರ್ಕಿಸಿ:

84968 64988, 8618786415

**ಬಾಡಿಗೆಗೆ ಇವೆ**

3 ಗೋಡೌನ್‌ಗಳು ವಿಸ್ತೀರ್ಣ, 5033, 8100, 6847 ಚದರ ಅಡಿಗಳು, 2 ಶೆಡ್‌ಗಳು 4200, 2520 ಚದುರ ಅಡಿಯುಳ್ಳ ಗೋಡೌನ್ ಹಾಗೂ ಶೆಡ್‌ಗಳು ಬಾಡಿಗೆಗೆ ಇವೆ. ಸಂಪರ್ಕಿಸಿ:

94822 41415, 78139 54977

**ಹಾಲ್ ಬಾಡಿಗೆಗೆ ಇದೆ**

ಎಂಸಿಸಿ ಬಿ ಬ್ಲಾಕ್, ಮಾಮಾಸ್ ಜಾಯಿಂಟ್ ರಸ್ತೆಯ ಶಿಲ್ಪ ಡಯಾಗ್ನಸ್ಟಿಕ್ ಪಕ್ಕದ ಕಟ್ಟಡದ ಒಂದನೇ ಮಹಡಿಯಲ್ಲಿ 1500 ಚ.ಅಡಿಯ ಹಾಲ್ ಬಾಡಿಗೆಗೆ ಇದೆ. ಸಂಪರ್ಕಿಸಿ :

98440 65638

**ಬೇಕಾಗಿದ್ದಾರೆ**

ಕ್ಲರ್ಕ್ ಕೆಲಸಕ್ಕೆ SSLC & PUC ಆದ ಮಹಿಳೆಯರು ಬೇಕಾಗಿದ್ದಾರೆ.

93411 19195
99800 32237

**ಸೈಟುಗಳು ಮಾರಾಟಕ್ಕಿವೆ**

ಶಿವ-ಪಾರ್ವತಿ ಬಡಾವಣೆ ಪೂರ್ವ 40×60, 30×55, ಪಶ್ಚಿಮ 40×30, ಬನಶಂಕರಿ ಬಡಾವಣೆ 30×63 (60 ಅಡಿ ರಸ್ತೆಗೆ) ಪಶ್ಚಿಮ 40×70. ಐಗೂರು ವಿಜಯಕುಮಾರ

99457 02495

**Corner ಸೈಟುಗಳು ಮಾರಾಟಕ್ಕಿವೆ**

ಶಿವ-ಪಾರ್ವತಿ ಬಡಾವಣೆ ಪೂರ್ವ, ದಕ್ಷಿಣ (40 ಅಡಿ ರಸ್ತೆ) 40×62, ಬನಶಂಕರಿ ಬಡಾವಣೆ ಪೂರ್ವ-ದಕ್ಷಿಣ (60 ಅಡಿ ರಸ್ತೆ) 34×50, ಪೂರ್ವ ಮತ್ತು ಉತ್ತರ 38×50, ಐಗೂರು ವಿಜಯಕುಮಾರ

99457 02495

**ಬೇಕಾಗಿದ್ದಾರೆ**

ಬೆಂಗಳೂರಿನಲ್ಲಿ Cook ಬೇಕಾಗಿದ್ದಾರೆ. ಸಂಬಳ 12000 ಸಸ್ಯಹಾರಿ, ಮಾಂಹಾರಿ ಗೊತ್ತಿರಬೇಕು. ಊಟ, ರೂಂ ಉಚಿತ. ಸಂಪರ್ಕಿಸಿ :

97400 98064, 97400 98047

**ನೀರಿನ ಲೀಕೇಜ್ (ವಾಟರ್ ಪ್ರೂಫಿಂಗ್)**

ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:

ಮೊ. 9538777582

ಕೆಲಸ 100% ಗ್ಯಾರಂಟಿ.

**ಓದುಗರ ಗಮನಕ್ಕೆ**

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ಧಾರಿ ಯಾಗುವುದಿಲ್ಲ. -ಜಾಹೀರಾತು ವ್ಯವಸ್ಥಾಪಕರು


## ಸಾರ್ವಜನಿಕ ಪ್ರಕಟಣೆ

**ಶ್ರೀಮತಿ ವಿಮಲ ರಮೇಶ್ ಕೋಂ ಕೆ.ರಮೇಶ್,** ವಯಸ್ಸು 55 ವರ್ಷ, ವಾಸ: ಎಂ.ಸಿ.ಸಿ 'ಬಿ' ಎಕ್ಸ್‌ಟೆಂಡೆಡ್ ಡೋರ್ ನಂ.3626/2, 8ನೇ ಮೇನ್, 5ನೇ ಕ್ರಾಸ್, ಫುಡ್‌ಮಾರ್ಟ್ ಹತ್ತಿರ, ದಾವಣಗೆರೆ ಮೊ.ನಂ.98808,08159 ವಾಸಿಯಾದ ನಾನು ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ.

ಮೇಲ್ಕಂಡ ನಾನು ಷೆಡ್ಯೂಲ್ ಸ್ವತ್ತಿನ ಮಾಲೀಕಳಾಗಿದ್ದು, ಸದರಿ ಷೆಡ್ಯೂಲ್ ಸ್ವತ್ತಿಗೆ ಸಂಬಂಧಪಟ್ಟ ಹಿಂದಿನ ಕ್ರಯಪತ್ರವಾದ ದಿನಾಂಕ 24.05.1989 ರಂದು ಎಸ್.ಆರ್. ನಂ.938/1989-90ರ ಕ್ರಯಪತ್ರದ ಅಸಲು ದಾಖಲೆಯು ದಿನಾಂಕ 14.06.2022ರಂದು ದಾವಣಗೆರೆ ಪಿ.ಜೆ.ಬಡಾವಣೆಯ ರಾಂ ಅಂಡ್ ಕೋಂ ಸರ್ಕಲ್ ಹತ್ತಿರ ಇರುವ ಜೆರಾಕ್ಸ್ ಅಂಗಡಿಯಲ್ಲಿ ಜೆರಾಕ್ಸ್ ಮಾಡಿಸಲು ಅಂಗಡಿಗೆ ಹೋದಾಗ ಆಕಸ್ಮಿಕವಾಗಿ ಅಸಲು ಕ್ರಯಪತ್ರವು ಕಳೆದು ಹೋಗಿರುತ್ತದೆ. ಸದರಿ ಅಸಲು ಕ್ರಯಪತ್ರವು ಯಾರಿಗಾದರೂ ಸಿಕ್ಕಲ್ಲಿ ಮೇಲ್ಕಂಡ ನನ್ನನ್ನು ಸಂಪರ್ಕಿಸಿ ಅದನ್ನು ನನಗೆ ತಲುಪಿಸಬೇಕಾಗಿ ಈ ಮೂಲಕ ಸಾರ್ವಜನಿಕರ ಗಮನಕ್ಕೆ ಪ್ರಕಟಿಸಲಾಗಿದೆ.

**ಷೆಡ್ಯೂಲ್ :** ದಾವಣಗೆರೆ ಸಬ್ ರಿಜಿಸ್ಟ್ರಾರ್‌ರವರ ಕಛೇರಿ ವ್ಯಾಪ್ತಿಗೆ ಒಳಪಟ್ಟಿರುವ ದಾವಣಗೆರೆ ತಾಲ್ಲೂಕು, ಕಸಬಾ ಹೋಬಳಿ, ಶ್ಯಾಬನೂರು ರಿ.ಸರ್ವೆ ನಂ.151/1 ರಲ್ಲಿ ವಿಂಗಡಿಸಿರುವ ಸೈಟ್‌ಗಳ ಪೈಕಿ ಸೈಟ್ ನಂ.54, ಡೋರ್ ನಂ.2008/54, ವಿಸ್ತೀರ್ಣ 30 x 50 ಅಡಿ ಇದರ ಚಕ್ಕುಬಂದಿ.

ಪೂರ್ವ : ಸೈಟ್ ನಂ.55, ಪಶ್ಚಿಮ : ಸೈಟ್ ನಂ.53, ಉತ್ತರ : ಸೈಟ್ ನಂ.87, ದಕ್ಷಿಣ : 30 ಅಡಿ ಅಗಲ ರಸ್ತೆ. ಈ ಮಧ್ಯೆ ಇರುವ ಸ್ವತ್ತು.

ಮೊ.98808 08159 ಸಹಿ/- (ವಿಮಲ ರಮೇಶ್)

## ಯೋಗ ಗುರು ಪರಶುರಾಮಪ್ಪಗೆ ಪ್ರಶಸ್ತಿ



ದಾವಣಗೆರೆ, ಜೂ.17- ಗಂಗಾವತಿ ನಗರದ ಲಯನ್ಸ್ ಕ್ಲಬ್ ಆವರಣದ ಐಎಂಎ ಹಾಲ್‌ನಲ್ಲಿ ಕರ್ನಾಟಕ ಯೂತ್ ವೆಲ್‌ಫೇರ್ ಅಸೋಸಿಯೇಷನ್ ವತಿಯಿಂದ ಆಯೋಜಿಸಿದ್ದ 'ಸಾಧಕರಿಗೆ ಸನ್ಮಾನ' ಕಾರ್ಯಕ್ರಮದಲ್ಲಿ ದಾವಣಗೆರೆ ಯೋಗ ಗುರು ಪ್ರಶಸ್ತಿ ಪುರಸ್ಕೃತ ಎನ್.ಪರಶುರಾಮಪ್ಪ ಅವರನ್ನು ಕರ್ನಾಟಕ ಕ್ರೀಡಾ ರತ್ನ ರಾಜ್ಯ ಪ್ರಶಸ್ತಿ ನೀಡಿ ಸನ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಆನೆಗೊಂದಿ ಮಹಾಸಂಸ್ಥಾನ ಸರಸ್ವತಿ ಪೀಠದ ಪೀಠಾಧೀಶರಾದ ಶ್ರೀಕಂಠ ಸ್ವಾಮೀಜಿ, ಪ್ರತಿಯೊಬ್ಬರೂ ಬೇಕೆಂದಾದರೆ ಸಮಯ ಪ್ರಜ್ಞೆಯ ಜತೆಗೆ ಶಿಸ್ತು, ಶ್ರದ್ಧೆ ಹಾಗೂ ಪರಿಶ್ರಮ ಮೈಗೂಡಿಸಿಕೊಂಡಿರಬೇಕು ಎಂದು ಹೇಳಿದರು.

# ಕೆರೆ ಸಂರಕ್ಷಣೆ ನಮ್ಮೆಲ್ಲರ ಆದ್ಯ ಕರ್ತವ್ಯವಾಗಬೇಕು



**ರಾಣೇಬೆನ್ನೂರು ಶಾಸಕ ಅರುಣಕುಮಾರ ಪೂಜಾರ**

ರಾಣೆಬೆನ್ನೂರು, ಜೂ.17- ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಸಂಸ್ಥೆ ರಾಜ್ಯದ ಪ್ರತಿ ಗ್ರಾಮಗಳಿಗೂ ಸಹಾಯಹಸ್ತ ಕಲ್ಪಿಸಿ ಸಮಾಜ ನಿರ್ಮಾಣಕ್ಕೆ ಶ್ರಮಿಸುತ್ತಿರುವ ಕಾರ್ಯ ಸರ್ಕಾರಕ್ಕೆ ಮಾದರಿ. ಮುಂದಿನ ದಿನಗಳಲ್ಲಿ ಜಗತ್ತಿನಲ್ಲಿ ನೀರಿನ ಅಭಾವ ಉಂಟಾಗಬಾರದೆಂದರೆ ಕೆರೆಗಳ ಸಂರಕ್ಷಣೆ ನಮ್ಮೆಲ್ಲರ ಆದ್ಯ ಜವಾಬ್ದಾರಿಯಾಗಿದೆ. ಈ ನಿಟ್ಟಿನಲ್ಲಿ ಸಂಸ್ಥೆಯ ವತಿಯಿಂದ 300ಕ್ಕೂ ಹೆಚ್ಚಿನ ಕೆರೆಗಳ ಕಾಮಗಾರಿ ನಡೆದಿರುವುದು ಶ್ಲಾಘನೀಯ ಎಂದು ಶಾಸಕ ಅರುಣಕುಮಾರ ಪೂಜಾರ ಹೇಳಿದರು.

ತಾಲ್ಲೂಕಿನ ನಿಟ್ಟೂರು ಗ್ರಾಮದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಇವರ ಆರ್ಥಿಕ ಸಹಕಾರದೊಂದಿಗೆ ಹಾಗೂ ಗ್ರಾಮ ಪಂಚಾಯಿತಿ ನಿಟ್ಟೂರು ಇವರ ಸಹಯೋಗದೊಂದಿಗೆ 'ನಮ್ಮೂರು ನಮ್ಮ ಕೆರೆ' ಯೋಜನೆಯಡಿ ಪುನಶ್ಚೇತನಗೊಳಿಸಲಾದ 196ನೇ ಕೆರೆ ಹಸ್ತಾಂತರ ಕಾರ್ಯಕ್ರಮದಲ್ಲಿ ನಾಮಫಲಕ ಅನಾವರಣ ಮಾಡಿ ಶಾಸಕರು ಮಾತನಾಡಿದರು.

ಜಾಗತಿಕ ತಾಪಮಾನ ಹೆಚ್ಚಳವಾಗುತ್ತಿದ್ದು, ಅತಿವೃಷ್ಟಿ, ಅನಾವೃಷ್ಟಿ ಬರಗಾಲದಂತಹ ಸನ್ನಿವೇಶಗಳನ್ನು ನಾವು ನೋಡುವಂತಾಗಿದೆ. ಇದು ಹೀಗೆಯೇ ಮುಂದುವರೆದರೆ ಭೂಮಿಯ ಮೇಲೆ ಮನುಷ್ಯ ಬದುಕುವುದು ಕಷ್ಟಕರ. ಹಿಂದೆ ನಮ್ಮ ಪೂರ್ವಜರಿಗೆ ಉಚಿತವಾಗಿ ನೀರಿನ ಲಭ್ಯತೆ ಇದ್ದರೆ ಪ್ರಸ್ತುತ ಹಣ ಪಾವತಿ ಮಾಡಿ ನೀರಿನ ಸೌಲಭ್ಯ ಪಡೆಯುವ ಸ್ಥಿತಿಗೆ ಮನುಷ್ಯ ಇಂದು ತಲುಪಿದ್ದಾನೆ. ಇದನ್ನು ಸರಿದೂಗಿಸಬೇಕಾದರೆ ಕೆರೆಗಳ ಹಾಗೂ ಪರಿಸರದ ರಕ್ಷಣೆ ತೀರ ಅಗತ್ಯ ಇದೆ ಎಂದು ರಟ್ಟಿಹಳ್ಳಿ ಕಬ್ಬಿನಕಂತಿ ಮಠದ ಶ್ರೀ ಶಿವಲಿಂಗ ಶಿವಾಚಾರ್ಯ ಸ್ವಾಮೀಜಿ ನುಡಿದರು.

ಧರ್ಮಸ್ಥಳ ಸಂಸ್ಥೆಯ ಪ್ರಾದೇಶಿಕ ನಿರ್ದೇಶಕ ದುಗ್ಗೇಗೌಡ ಇವರು ಗ್ರಾಮ ಪಂಚಾಯಿತಿ ಅಧ್ಯಕ್ಷರಿಗೆ ಕೆರೆಯ ಜವಾಬ್ದಾರಿ ಹಸ್ತಾಂತರ ಮಾಡಿದರು. ಜಿಲ್ಲಾ ನಿರ್ದೇಶಕ ನಾಗರಾಜ ಶೆಟ್ಟಿ ಸ್ವಾಗತಿಸಿದರು. ರವಿ ವಂದಿಸಿದರು. ಸತೀಶ್ ಶೇಟ್ ನಿರೂಪಿಸಿದರು.

# ಭ್ರಷ್ಟ ಅಧಿಕಾರಿಗಳಿಗೆ ಎಸಿಬಿ ಬಿಸಿ

(3ನೇ ಪುಟದಿಂದ) ಅಪಾರ್ಟ್‌ಮೆಂಟ್, ತಾವರೆಕೆರೆಯಲ್ಲಿ ತಾಯಿ ಹೆಸರಿನಲ್ಲಿರುವ 4 ಎಕರೆ ಜಮೀನು ಮತ್ತಿತರೆ ಆಸ್ತಿ ದಾಖಲೆಗಳನ್ನು ವಶಪಡಿಸಿಕೊಳ್ಳಲಾಗಿದೆ.

ಜನಾರ್ದನ್ ಅಕ್ರಮವಾಗಿ ಸಂಪಾದಿಸಿದ್ದ ಭಾರೀ ಆಸ್ತಿಯನ್ನು ಎಸಿಬಿ ಅಧಿಕಾರಿಗಳು ಬಯಲಿಗೆಳೆದಿದ್ದಾರೆ.

ಕಾರವಾರದ ಸಬ್ ರಿಜಿಸ್ಟ್ರಾರ್ ಕಚೇರಿಯಲ್ಲಿ ಉಪನೋಂದ ಣಾಧಿಕಾರಿ ಯಾಗಿರುವ ಶ್ರೀಧರ್ ಅವರ ಕನಕಪುರ ಸಮೀಪದ ಅಗರದಲ್ಲಿರುವ ತೋಟದ ಮನೆ ಹಾಗೂ ಮತ್ತಿತರೆ ಕಡೆಗಳಲ್ಲೂ ದಾಳಿ ನಡೆದಿದೆ.

ಕೋಲಾರ ಎಸಿಬಿಯ 8 ಅಧಿಕಾರಿಗಳ ತಂಡ ಏಕಕಾಲಕ್ಕೆ ದಾಳಿ ನಡೆಸಿ ಮಡಿಕೇರಿ, ಬೆಂಗಳೂರಿನ ಎಚ್‌ಎಸ್‌ಆರ್ ಲೇಔಟ್, ಕೋಲಾರ, ಕನಕಪುರ ಸೇರಿದಂತೆ ವಿವಿಧ ಕಡೆಗಳಲ್ಲಿ ಅಕ್ರಮವಾಗಿ ಸಂಪಾದಿಸಿರುವ ಕೋಟಿ ಕೋಟಿ ಮೌಲ್ಯದ ಸಂಪತ್ತನ್ನು ಪತ್ತೆ ಹಚ್ಚಿದೆ.

ಹಾಸನದ ಸಣ್ಣ ನೀರಾವರಿ ಇಲಾಖೆಯಲ್ಲಿ ಸಹಾಯಕ ಎಂಜಿನಿಯರ್ ಆಗಿರುವ ರಾಮಕೃಷ್ಣ ಅವರ ಮನೆ ಮೇಲೆ ಎಸಿಬಿ ಡಿವೈಎಸ್‌ಪಿ ಸತೀಶ್ ನೇತೃತ್ವದ ತಂಡ ದಿಢೀರ್ ದಾಳಿ ನಡೆಸಿ ಭಾರೀ ಪ್ರಮಾಣದ ಅಕ್ರಮ ಸಂಪತ್ತು ಪತ್ತೆ ಹಚ್ಚಿದೆ.

ಹಾಸನದ ವಿದ್ಯಾನಗರದಲ್ಲಿರುವ ರಾಮಕೃಷ್ಣ ಅವರ ನಿವಾಸ, ಹಿರಿಸಾವೆಯಲ್ಲಿರುವ ಮತ್ತೊಂದು ಮನೆ ಹಾಗೂ ಕುವೆಂಪು ನಗರದಲ್ಲಿರುವ ಕಚೇರಿಗಳ ಮೇಲೆ ಏಕಕಾಲಕ್ಕೆ ದಾಳಿ ನಡೆಸಿ ದಾಖಲೆ ಪರಿಶೀಲನೆ ನಡೆಸಲಾಗುತ್ತಿದೆ.

ಪರಿಶೀಲನೆ ಸಂದರ್ಭದಲ್ಲಿ ರಾಮಕೃಷ್ಣ ಅವರು ಆದಾಯ ಮೂಲಕ್ಕಿಂತ ಮೂರು ಪಟ್ಟು ಹೆಚ್ಚು ಅಕ್ರಮ ಆಸ್ತಿ ಸಂಪಾದಿಸಿರುವುದು ಕಂಡುಬಂದಿದೆ.

ಉಡುಪಿಯ ಸಣ್ಣ ನೀರಾವರಿ ಇಲಾಖೆಯ ಜ್ಯೂನಿಯರ್ ಎಂಜಿನಿಯರ್ ಹರೀಶ್ ನಿವಾಸದ ಮೇಲೆ ದಾಳಿ ನಡೆಸಿದ ಸಂದರ್ಭದಲ್ಲಿ ಭಾರೀ ಪ್ರಮಾಣದ ಚಿನ್ನಾಭರಣ ಪತ್ತೆಯಾಗಿದೆ. ಚಿನ್ನದ ತಟ್ಟೆ, ಲೋಟ, ಕೈ ಬಳೆಗಳು, ನೆಕ್ಲೆಸ್ ಸೇರಿದಂತೆ ಹಲವಾರು ಆಭರಣ ಹಾಗೂ 4 ಲಕ್ಷ ನಗದು ಪತ್ತೆಯಾಗಿದೆ.

ಬೆಳಗಾವಿಯ ಸೂಪರಿಂಟೆಂಡೆಂಟ್ ಎಂಜಿನಿಯರ್ ಭೀಮರಾವ್ ವೈ. ಪವಾರ್, ಉಡುಪಿ ಸಣ್ಣ ನೀರಾವರಿ ಇಲಾಖೆಯ ಸಹಾಯಕ ಅಭಿಯಂತರ ಹರೀಶ್, ಹಾಸನ ಸಣ್ಣ ನೀರಾವರಿ ಇಲಾಖೆಯ ಎಇಇ ರಾಮಕೃಷ್ಣ ಎಚ್.ವಿ., ಕಾರವಾರ ಲೋಕೋಪಯೋಗಿ ಇಲಾಖೆಯ ಸಹಾಯಕ ಎಂಜಿನಿಯರ್ ರಾಜೀವ್ ಪುರುಷಯ್ಯ ನಾಯಕ್, ಪೊನ್ನಂಪೇಟೆಯ ಜಿಲ್ಲಾ ಪಂಚಾಯತ್ ಜ್ಯೂನಿಯರ್ ಎಂಜಿನಿಯರ್ ಬಿ.ಆರ್. ಬೋಪಯ್ಯ, ಬೆಳಗಾಂ ಐಜಿಆರ್ ಕಚೇರಿಯ ಜಿಲ್ಲಾ ರಿಜಿಸ್ಟ್ರಾರ್ ಮಧುಸೂದನ್ ಅವರ ನಿವಾಸಗಳ ಮೇಲೂ ದಾಳಿ ನಡೆಸಲಾಗಿದೆ.

# ಅಂಗನವಾಡಿ ನಿವೇಶನ ದಾನಿಗಳಿಗೆ ಸನ್ಮಾನ



**ಜಿಗಳಿ**

ಮಲೇಬೆನ್ನೂರು, ಜೂ. 17- ಜಿಗಳಿ ಗ್ರಾಮದಲ್ಲಿ ನೂತನವಾಗಿ 'ಡಿ' ಅಂಗನವಾಡಿ ಕೇಂದ್ರದ ಕಟ್ಟಡ ಉದ್ಘಾಟನೆ ಹಾಗೂ ಕೇಂದ್ರಕ್ಕೆ ನಿವೇಶನವನ್ನು ಉಚಿತವಾಗಿ ನೀಡಿದ ಶ್ರೀಮತಿ ನಾಗಮ್ಮ ಕೋಂ ಗುರುಪಾದಯ್ಯ ಅವರಿಗೆ ಸನ್ಮಾನ ಕಾರ್ಯಕ್ರಮ ಮಂಗಳವಾರ ಸರಳವಾಗಿ ಜರುಗಿತು.

ಗ್ರಾ.ಪಂ. ಅಧ್ಯಕ್ಷೆ ಶ್ರೀಮತಿ ರೇಣುಕಮ್ಮ, ಮಡಿವಾಳರ ರಂಗಪ್ಪ, ಉಪಾಧ್ಯಕ್ಷ ಡಿ.ಎಂ. ಹರೀಶ್, ಸದಸ್ಯರಾದ ಎನ್.ಎಂ. ಪಾಟೀಲ್, ಕೆ.ಜಿ. ಬಸವರಾಜ್, ಶ್ರೀಮತಿ ಕರಿಯಮ್ಮ, ಶ್ರೀಮತಿ ವಿನೋದಮ್ಮ, ಶ್ರೀಮತಿ ಮಂಜುಳಾ, ಶ್ರೀಮತಿ ಕವಿತಾ, ಜಿ. ಬೇವಿನಹಳ್ಳಿ ಕೆ.ಜಿ. ಮಹಾಂತೇಶಪ್ಪ, ಆನಂದಗೌಡ, ಶ್ರೀಮತಿ ಆಶಾ, ಪಿ.ಹೆಚ್. ದೇವರಾಜ್, ಶ್ರೀಮತಿ ರೂಪಾ, ಗ್ರಾ.ಪಂ. ಮಾಜಿ ಅಧ್ಯಕ್ಷರಾದ ಡಿ.ಹೆಚ್. ಮಂಜುನಾಥ, ಎಂ.ವಿ. ನಾಗರಾಜ, ಬಿ.ಕೆ. ಮಹೇಶ್ವರಪ್ಪ, ಮಾಜಿ ಸದಸ್ಯೆ ಶ್ರೀಮತಿ ಸೌಮ್ಯ, ಶ್ರೀಮತಿ ಪದ್ಮಮ್ಮ, ಕೆ.ಎಸ್. ನಂದ್ಯಪ್ಪ, ಪೂಜಾರ್ ನಾಗರಾಜ್, ಗುತ್ತಿಗೆದಾರ ದೊಡ್ಡಘಟ್ಟದ ಅಣ್ಣಪ್ಪ, ಕೆ.ಎಂ. ರಾಮಪ್ಪ, ಪಿಡಿಓ ಉಮೇಶ್, ಕಾರ್ಯದರ್ಶಿ ಶೇಖರನಾಯ್ಕ, ಬಿಲ್ ಕಲೆಕ್ಟರ್ ಬಿ. ಮೌನೇಶ್, ಅಂಗನವಾಡಿ ಕಾರ್ಯಕರ್ತೆ ಸುವರ್ಣ, ನೇತ್ರಾವತಿ ಹಾಗೂ ಗ್ರಾ.ಪಂ. ಸಿಬ್ಬಂದಿಗಳು ಮತ್ತಿತರರು ಈ ವೇಳೆ ಉಪಸ್ಥಿತರಿದ್ದರು.

## ಸ್ವಪ್ನ ಎಜುಕೇಶನ್ ಟ್ರಸ್ಟ್‌ಗೆ ಅಶ್ವಿನಿ ಕಾರ್ಯದರ್ಶಿ



ದಾವಣಗೆರೆ, ಜೂ.17- ನಗರದ ಸ್ವಪ್ನ ಎಜುಕೇಷನ್ ಟ್ರಸ್ಟ್‌ಗೆ ಡಿ. ಅಶ್ವಿನಿ ಅವರನ್ನು ಕಾರ್ಯದರ್ಶಿಯನ್ನಾಗಿ ನೇಮಕ ಮಾಡಲಾಗಿದೆ ಎಂದು ಟ್ರಸ್ಟ್ ಅಧ್ಯಕ್ಷ ಟಿ. ನಾರಾಯಣರಾವ್ ತಿಳಿಸಿ ದ್ದಾರೆ. ಈ ಸಂದರ್ಭದಲ್ಲಿ ಡಾ.ಸ್ವಪ್ನ, ಟಿ.ಜಿ. ಶಿವಮೂರ್ತಿ, ವೈ. ಕಾಂತರಾಜ್ ಉಪಸ್ಥಿತರಿದ್ದರು

## ನಗರದ ಸಂತ ಪೌಲರ ಶಾಲೆಯಲ್ಲಿ ಇಂದು ನೃತ್ಯ ಸ್ಪರ್ಧೆ

ಸಂತ ಪೌಲರ ವಿದ್ಯಾಸಂಸ್ಥೆಯ ಅಮೃತ ಮಹೋತ್ಸವದ ಅಂಗವಾಗಿ ಇಂದು ಬೆಳಿಗ್ಗೆ 9 ಗಂಟೆಗೆ ಶಾಲಾ ಸಭಾಂಗಣದಲ್ಲಿ ಅಂತರ್‌ಶಾಲಾ ನೃತ್ಯ ಸ್ಪರ್ಧೆ ನಡೆಯಲಿದೆ.

ಸುಮಾರು 30 ಶಾಲೆಗಳಿಗೆ ಸ್ಪರ್ಧೆಗೆ ಆಹ್ವಾನ ನೀಡಲಾಗಿದ್ದು, ಮುಖ್ಯ ಅತಿಥಿಗಳಾಗಿ ನೂಪುರ ಕಲಾಸಂಸ್ಥೆಯ ಭರತನಾಟ್ಯ ಕಲಾವಿದೆ ಬೃಂದಾ ಶ್ರೀನಿವಾಸ್, ನಿವೃತ್ತ ಶಿಕ್ಷಕಿ ನ್ಯಾನ್ಸಿ ಫರ್ನಾಂಡೀಸ್, ಜೆ.ಜೆ.ಎಂ.ಸಿ. ಕಾಲೇಜಿನ ಪ್ರಾಧ್ಯಾಪಕಿ ಡಾ.ಸ್ಮಿತಾ, ಜೊಯಾಲುಕಾಸ್‌ನ ವ್ಯವಸ್ಥಾಪಕ ಪ್ರಮೋದ್ ತಿಳಿಸಿದ್ದಾರೆ.

## ನ್ಯಾಮತಿಯಲ್ಲಿ ಇಂದು ವಿದ್ಯುತ್ ಅದಾಲತ್

ಬೆವಿಕಂ ನ್ಯಾಮತಿ ಉಪ ವಿಭಾಗದ ವ್ಯಾಪ್ತಿಗೆ ಬರುವ ಹೊಸ ಮಳಲಿ ಗ್ರಾಮದಲ್ಲಿ ಇಂದು ಬೆಳಿಗ್ಗೆ 10 ಕ್ಕೆ ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್ ಬಿ.ಕೆ.ಶ್ರೀನಿವಾಸ್ ಅಧ್ಯಕ್ಷತೆಯಲ್ಲಿ ಗ್ರಾಹಕರ ಕುಂದು - ಕೊರತೆಗಳ ಬಗ್ಗೆ ವಿದ್ಯುತ್ ಅದಾಲತ್ ಮಾಸಿಕ ಸಭೆ ನಡೆಯಲಿದೆ.

## ನಲ್ಲಿ ನೀರಿನಲ್ಲಿ ದುರ್ವಾಸನೆ

(3ನೇ ಪುಟದಿಂದ) ಸಾರ್ವಜನಿಕರು ನೀರು ಕಾಯಿಸಿ ನಂತರ ಕುಡಿಯಲು ಬಳಸುವಂತೆ ಸಾರ್ವಜನಿಕರಿಗೆ ತಿಳಿ ಹೇಳುವುದಕ್ಕೆ ಮುಂದಾಗಬೇಕಾಗಿದೆ.

24/7 ನೀರು ಸರಬರಾಜು ಹೆಸರಿಗೆ ಮಾತ್ರವಾಗಿದೆ. ದಿನಕ್ಕೆ ಎರಡು ಗಂಟೆ ಮಾತ್ರ ನೀರು ಸರಬರಾಜು ಮಾಡಲಾಗುತ್ತಿದೆ. ಸರ್ಕಾರ ಈ ಯೋಜನೆಗೆ ಬಹಳ ದೊಡ್ಡ ಪ್ರಮಾಣದಲ್ಲಿ ಹಣವನ್ನು ವ್ಯಯ ಮಾಡಿದ್ದರೂ, ಅದು ಸರಿಯಾಗಿ ಪ್ರಯೋಜನ ಆಗದೆ ಇರುವುದು ಕಾಣಬಹುದು.

ಕೆಲವೊಂದು ಹೊರ ಪ್ರದೇಶದ ಬಡಾವಣೆಗಳಲ್ಲಿ ಇನ್ನೂ ನಲ್ಲಿ ಅಳವಡಿಕೆಯನ್ನೂ ಸಹ ಮಾಡಿರುವುದಿಲ್ಲ. ಅವರು ನೀರಿಗಾಗಿ ಅಲೆದಾಡುವುದು ಸಾಮಾನ್ಯವಾಗಿದೆ.

## ಹಸಿರು ಕ್ರಾಂತಿ ಪಸರಿಸಿ ಮುಂದಿನ ತಲೆಮಾರಿಗೆ ಕೊಡುಗೆ



**ರಾಣೇಬೆನ್ನೂರು**

ರಾಣೆಬೆನ್ನೂರು, ಜೂ. 17- 'ಮನೆಗೊಂದು ಗಿಡ, ಊರಿಗೊಂದು ವನ' ಎಂಬ ಸಂಕಲ್ಪದೊಂದಿಗೆ ಪ್ರತಿಯೊಬ್ಬರು ಪರಿಸರ ಸಂರಕ್ಷಣೆಗೆ ಮುಂದಾದಾಗ ಮಾತ್ರ ನಾವು ಉತ್ತಮ ಪರಿಸರದೊಂದಿಗೆ ಜೀವಿಸಲು ಸಾಧ್ಯ. ಹಸಿರು ಕ್ರಾಂತಿ ಪಸರಿಸುವ ಮೂಲಕ ಮುಂದಿನ ತಲೆಮಾರಿಗೆ ನಾವು ಬಹುದೊಡ್ಡ ಕೊಡುಗೆ ನೀಡಲು ಸಾಧ್ಯ ಎಂದು ಎಪಿಎಂಸಿ ಮಾಜಿ ಅಧ್ಯಕ್ಷ ರಾಮಣ್ಣ ನಾಯಕ ತಿಳಿಸಿದರು.

ವಿಶ್ವ ಪರಿಸರ ದಿನದ ಅಂಗವಾಗಿ ಧರ್ಮಸ್ಥಳ ಸಂಸ್ಥೆಯ ವತಿಯಿಂದ ಗೋವಿಂದ ಬಡಾವಣೆಯ ಶೀ ಸೇವಾಲಾಲ್ ದೇವಾಲಯದ ಆವರಣದಲ್ಲಿ ಗಿಡ ನೆಡುವ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ತಾಲ್ಲೂಕಿನ ಯೋಜನಾಧಿಕಾರಿ ಸತೀಶ್ ಶೇಟ್ ಮಾತನಾಡಿ, ವಿಶ್ವ ಪರಿಸರ ದಿನಾಚರಣೆಯ ಅಂಗವಾಗಿ ತಾಲ್ಲೂಕಿನ 10 ಪ್ರದೇಶದಲ್ಲಿ ಅರಣ್ಯ ಇಲಾಖೆಯ ಸಹಕಾರದೊಂದಿಗೆ 400 ಸಸಿಗಳನ್ನು ನೆಡಲಾಗುತ್ತಿದೆ. ಪ್ರಕೃತಿಯಲ್ಲಿ ಸಮತೋಲನ ಕಾಯ್ದುಕೊಳ್ಳಲು ಸಸಿ ನಾಟಿ ಮಾಡಿ ಅದರ ಪಾಲನೆ ಪೋಷಣೆ ಮಾಡುವುದು ಪ್ರತಿಯೊಬ್ಬ ನಾಗರಿಕರ ಆದ್ಯ ಕರ್ತವ್ಯವಾಗಿದೆ ಎಂದು ತಿಳಿಸಿದರು.

ರಾಹುತನಕಟ್ಟಿ ಗ್ರಾಮ ಪಂಚಾಯಿತಿ ಅಧ್ಯಕ್ಷ ಪರಮೇಶಪ್ಪ ಲಮಾಣಿ ಹಾಗೂ ಪಂಚಾಯಿತಿ ಸದಸ್ಯ ಪ್ರಕಾಶ್ ನಾಯಕ ಮತ್ತಿತರರು ಹಾಜರಿದ್ದರು. ಜಗದೀಶ ಸ್ವಾಗತಿಸಿದರು.

## ವಡ್ಡಿನಹಳ್ಳಿ ಗ್ರಾಮದಲ್ಲಿ ಕಸ ವಿಲೇವಾರಿ ಹೊಸ ವಾಹನಕ್ಕೆ ಚಾಲನೆ



ವಡ್ಡಿನಹಳ್ಳಿ,ಜೂ.17- ಹರಪನಹಳ್ಳಿ ತಾಲ್ಲೂಕು ಹಿರೇಮೇಗಳಗೇರಿ ಗ್ರಾಮ ಪಂಚಾಯಿತಿ ವತಿಯಿಂದ ವಡ್ಡಿನಹಳ್ಳಿ ಗ್ರಾಮದಲ್ಲಿ ತ್ಯಾಜ್ಯ ವಿಲೇವಾರಿಗೆ ಹೊಸ ಕಸದ ವಾಹನ ವ್ಯವಸ್ಥೆ ಮಾಡಲಾಗಿದೆ. ಪಂಚಾಯಿತಿ ಅಧ್ಯಕ್ಷೆ ಉಮಾ ಎಸ್.ಎಸ್.ಮಂಜುನಾಥ್ ಅವರು ಕಸದ ವಾಹನಕ್ಕೆ ಚಾಲನೆ ನೀಡಿ ಮಾತನಾಡಿ, ಗ್ರಾಮಸ್ಥರು ಹಸಿ ಕಸ, ಒಣ ಕಸವನ್ನು ವಿಂಗಡಿಸಿ ಕಸದ ವಾಹನಕ್ಕೆ ಹಾಕುವ ಮೂಲಕ ಗ್ರಾಮದಲ್ಲಿ ಸ್ವಚ್ಛ ಪರಿಸರ ನಿರ್ಮಾಣ ಮಾಡುವಲ್ಲಿ ಸಹಕರಿಸುವಂತೆ ಕೋರಿದರು. ಉಪಾಧ್ಯಕ್ಷೆ ನೀಲಾಬಾಯಿ, ಕರಿಬಸಪ್ಪ, ಲಿಂಗೇಶ್, ಅಂಜಿನಪ್ಪ, ಮಂಜುನಾಥ್, ಪಿಡಿಒ ರೇವಣಸಿದ್ದೇಶ್, ಕೆ. ಪರಶುರಾಮ್, ಭರಮನಗೌಡ್ರು, ಅಂಗಡಿ ಪ್ರಕಾಶ್, ಡಿ.ಲಿಂಗೇಶ್, ಟಿ. ಪರಶುರಾಮ್ ಮತ್ತಿತರರು ಉಪಸ್ಥಿತರಿದ್ದರು.

## ಸಾರ್ವಜನಿಕ ನೋಟಿಸ್

ಈ ನೋಟಿಸ್ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ದಾವಣಗೆರೆ ತಾಲ್ಲೂಕು ಆವರಗೆರೆ ಗ್ರಾಮದ ರಿ. ಸರ್ವೆ ನಂ.215/2ಬಿ9 ರಲ್ಲಿರುವ 2 ಎಕರೆ, 39 ಗುಂಟೆ ಜಮೀನು ಮೂಲತಃ ದಿವಂಗತ ಬಿ.ಎಂ. ಕಡೇಕೊಪ್ಪ ಇವರಿಗೆ ಸೇರಿದ್ದು ಇರುತ್ತದೆ. ಸದರಿ ಬಿ.ಎಂ. ಕಡೇಕೊಪ್ಪ ಇವರು 2000ನೇ ಇಸ್ವಿಯಲ್ಲಿ ನಿಧನರಾಗಿರುತ್ತಾರೆ. ಸದರಿಯವರಿಗೆ ಮೂವರು ಗಂಡು ಮಕ್ಕಳು ಹಾಗೂ ಇಬ್ಬರು ಹೆಣ್ಣುಮಕ್ಕಳು ಉತ್ತರಾಧಿಕಾರಿಗಳಿರುತ್ತಾರೆ. ಅವರುಗಳ ಹೆಸರು **(1) ಮೃತ್ಯುಂಜಯ ಕಡೇಕೊಪ್ಪ (2) ಕೊಟ್ರೇಶಪ್ಪ ಕಡೇಕೊಪ್ಪ (3) ಸುಶೀಲಾ ಕಡೇಕೊಪ್ಪ ಕೋಂ ಶಿವಣ್ಣ (4) ಪ್ರಮೀಳಾ ಕಡೇಕೊಪ್ಪ ಕೋಂ ಶೈಲೇಂದ್ರ (5) ರಾಜಶೇಖರ್ ಕಡೇಕೊಪ್ಪ** ಇವರು ವಾರಸುದಾರರಾಗಿರುತ್ತಾರೆ.

ಈ ಮೇಲೆ ತಿಳಿಸಿದ ಸ್ವತ್ತು ಪಿತ್ರಾರ್ಜಿತ ಆಸ್ತಿಯಾಗಿದ್ದು, ದಿವಂಗತ ಬಿ.ಎಂ. ಕಡೇಕೊಪ್ಪ ಇವರ ಎಲ್ಲಾ ಮಕ್ಕಳು ಸದರಿ ಆಸ್ತಿಯಲ್ಲಿ ಸಮಾನ ಹಕ್ಕುಳ್ಳವರಾಗಿರುತ್ತಾರೆ. ಅವರಲ್ಲಿ 1ನೇ ಮಗನಾದ ಮೃತ್ಯುಂಜಯಪ್ಪ ಕಡೇಕೊಪ್ಪ ಇವರು ನಿಧನರಾಗಿದ್ದು, ಅವರಿಗೆ **ರತ್ನಮ್ಮ** ಎನ್ನುವ ಪತ್ನಿ ಹಾಗೂ **ಸಚಿನ್, ಸಂದೀಪ್, ಸ್ವಪ್ನ** ಎಂಬ ಮಕ್ಕಳಿರುತ್ತಾರೆ. **ಶಿಲ್ಪ** ಎನ್ನುವ ಮಗಳು ನಿಧನ ಹೊಂದಿರುತ್ತಾಳೆ. **3ನೇ ಮಗಳಾದ ಸುಶೀಲಮ್ಮ ಕಡೇಕೊಪ್ಪ** ಇವರು ನಿಧನರಾಗಿದ್ದು, ಅವರಿಗೆ **ರೂಪ, ದೀಪ, ಶ್ವೇತ** ಮತ್ತು **ವಿನಯ್** ಎನ್ನುವ ಮಕ್ಕಳಿರುತ್ತಾರೆ.

ಸದರಿ ಸ್ವತ್ತಿನ ಬಗ್ಗೆ ದಿವಂಗತ ಬಿ.ಎಂ. **ಕಡೇಕೊಪ್ಪ** ಇವರ 2ನೇ ಮಗನಾದ **ಕೊಟ್ರೇಶಪ್ಪ ಕಡೇಕೊಪ್ಪ** ಇವರು **ದಾವಣಗೆರೆ ಘನ ನ್ಯಾಯಾಲಯದಲ್ಲಿ ಅಸಲು ದಾವೆ ನಂಬರ್ 603/2014**ನ್ನು ಪಾಲುವಿಭಾಗಕ್ಕೆ ದಾಖಲಿಸಿರುತ್ತಾರೆ. ಸದರಿ ಅಸಲು ದಾವೆಯು **ದಾವಣಗೆರೆಯ 3ನೇ ಹೆಚ್ಚುವರಿ ಸಿವಿಲ್ ಜಡ್ಜ್ ಹಾಗೂ ಜೆ.ಎಂ.ಎಫ್.ಸಿ. ನ್ಯಾಯಾಲಯದಲ್ಲಿ** ಚಾಲ್ತಿಯಲ್ಲಿರುತ್ತದೆ. ಸದರಿ ಆಸ್ತಿಗೆ ಸಂಬಂಧಪಟ್ಟಂತೆ ಪ್ರಕರಣವು ನ್ಯಾಯಾಲಯವದಲ್ಲಿ ಚಾಲ್ತಿಯಲ್ಲಿರುವಾಗಲೇ **ಮೆ: ಜಯಸುಬ್ರಮಣ್ಯ ಇಂಡಸ್ಟ್ರೀಸ್ ಮಾಲೀಕರಾದ ರವಿರಾಜ್ ಎಂ.ಇ. ಬಿನ್ ಇ.ಎಂ. ಪಾಂಡಿಯನ್** ಎನ್ನುವವರು ಕ್ರಯಪತ್ರವನ್ನು ಮಾಡಿಸಿಕೊಂಡಿರುತ್ತಾರೆ. ಸದರಿ **ಮೆ: ಜಯಸುಬ್ರಮಣ್ಯ ಇಂಡಸ್ಟ್ರೀಸ್ ಮಾಲೀಕರಾದ ರವಿರಾಜ್ ಎಂ.ಇ. ಬಿನ್ ಇ.ಎಂ. ಪಾಂಡಿಯನ್** ಇವರೂ ಸಹ ಈಗ ದಾವೆಯಲ್ಲಿ ಪಕ್ಷಗಾರರಾಗಿರುತ್ತಾರೆ.

ಸದರಿ ಸ್ವತ್ತಿನ ಬಗ್ಗೆ ಅಸಲು ದಾವೆ ನಂ.603/2014 ನ್ಯಾಯಾಲಯದಲ್ಲಿ ಚಾಲ್ತಿಯಲ್ಲಿರುವಾಗಲೇ **ಜಯಸುಬ್ರಮಣ್ಯ ಇಂಡಸ್ಟ್ರೀಸ್ ಮಾಲೀಕರಾದ ರವಿರಾಜ್ ಎಂ.ಇ. ಬಿನ್ ಇ.ಎಂ. ಪಾಂಡಿಯನ್** ಸದರಿ ದಾವಾ ಷೆಡ್ಯೂಲ್ ಸ್ವತ್ತನ್ನು ವಿಲೇವಾರಿ ಮಾಡುವ ಪ್ರಯತ್ನದಲ್ಲಿದ್ದಾರೆನ್ನುವುದು ತಿಳಿದು ಬಂದಿರುತ್ತದೆ. ಸದರಿ ದಾವಾ ಆಸ್ತಿ ಬಗ್ಗೆ ದಾವಣಗೆರೆ ನ್ಯಾಯಾಲಯದಲ್ಲಿ ದಾವೆಯಿರುವುದರಿಂದ ಮತ್ತು ದಿವಂಗತ ಬಿ.ಎಂ. ಕಡೇಕೊಪ್ಪ ಇವರ ಮೇಲ್ಕಂಡ ಎಲ್ಲಾ ಮಕ್ಕಳು ದಾವಾ ಆಸ್ತಿಗೆ ವಾರಸುದಾರರು ಆಗಿರುವುದರಿಂದ ಸಾರ್ವಜನಿಕರಿಗೆ ಸದರಿ ದಾವಾ ಆಸ್ತಿಯನ್ನು ಖರೀದಿಸಬಾರದೆಂದು ಈ ಮೂಲಕ ಸಾರ್ವಜನಿಕರಿಗೆ ತಿಳಿಸಲಾಗಿದೆ. ಸದರಿ ಮೇಲ್ಕಂಡ ವಿವಾದಿತ ಆಸ್ತಿಯನ್ನು ಮುಂದುವರೆದು ಯಾರಾದರೂ ಸಾರ್ವಜನಿಕರು ಖರೀದಿಸಿದರೆ, ಅವರೇ ಹೊಣೆಗಾರರಿರುತ್ತಾರೆ ತಿಳಿಯಿರಿ.

ಸಹಿ/- **ಕೊಟ್ರೇಶಪ್ಪ ಕಡೇಕೊಪ್ಪ** ಸಹಿ/- **ರತ್ನಮ್ಮ ಎಂ.ಕೆ.**


**ಬೇಕಾಗಿದ್ದಾರೆ**

ಕನ್ನಡ ಬೋಧಿಸುವ B.A, B.Ed, MA, B.Ed ತರಬೇತಿ ಪಡೆದ ಶಿಕ್ಷಕರು ಬೇಕಾಗಿದ್ದಾರೆ. ದೈಹಿಕ ಶಿಕ್ಷಕರೂ ಸಂಪರ್ಕಿಸಬಹುದು

ನಂದಗೋಕುಲ ಆಂಗ್ಲ ಮಾಧ್ಯಮ ಪ್ರೌಢಶಾಲೆ ಹಾಗೂ ಹಿರಿಯ ಪ್ರಾಥಮಿಕ ಶಾಲೆ

ಆರ್.ಟಿ.ಓ. ಆಫೀಸ್ ಹಿಂಭಾಗ, ಕೊಂಡಜ್ಜಿ ರಸ್ತೆ, ದಾವಣಗೆರೆ. ಮೊ. 99640-17729

**ಬೇಕಾಗಿದ್ದಾರೆ**

ಬಟ್ಟೆ ಅಂಗಡಿಗೆ ಕೆಲಸಕ್ಕೆ ಸೇಲ್ಸ್‌ಮ್ಯಾನ್ ಬೇಕಾಗಿದ್ದಾರೆ. ಅನುಭವವುಳ್ಳವರು ಹಾಗೂ ದಾವಣಗೆರೆ ನಗರ ವಾಸಿಗಳಿಗೆ ಆದ್ಯತೆ. ಸಂಪರ್ಕಿಸಿ :

77602 68105

**FLAT AVAILABLE FLAT FOR LEASE**

2 BHK, 2nd floor,
Nainika Prime Rose AM Apartment
# 1779/23, 20th Cross,
Vidyanagara main Road, Last city bus stop, Davanagere.
82134 07991, 83100 62694

**ಬೇಕಾಗಿದ್ದಾರೆ**

ಹೋಟೆಲ್ ಅಥವಾ ಕೆಫೆಯಲ್ಲಿ ಕೆಲಸ ಮಾಡಿದ ಅನುಭವವಿರುವ ಯುವಕರು ಬೇಕಾಗಿದ್ದಾರೆ. ಸಂಬಳ ಹಾಗೂ ಪ್ರೋತ್ಸಾಹ ಧನ ಹಾಗೂ ವಸತಿ ಇರುತ್ತದೆ.

70197 64596

**JOB RECRUITMENT**

Marketing Persons
Male or Female
Part time only
PUC, Any degree
500/-rs to 1000/- Rs per day.
Ph 70220 76255

**ಸೈಟ್ ಮಾರಾಟಕ್ಕಿದೆ**

ಸೈಜ್ 47x70, Bit of Land 60 ಅಡಿ Free ಸಿಗುತ್ತದೆ.
Facing : North P.B Roadಗೆ ಲಗತ್ತಾಗಿರುತ್ತದೆ.
Location: P.B Road Avaragere, Hyundai Car Showroom ಪಕ್ಕದಲ್ಲಿ ಸುತ್ತಲೂ ಕಾಂಪೌಂಡ್ ಹಾಕಿರುತ್ತದೆ.
Only Genuine buyers May Contact :
91643 82998, 90082 27199

**ಬೇಕಾಗಿದ್ದಾರೆ**

ಸೆಕ್ಯೂರಿಟಿ ಗಾರ್ಡ್ಸ್ & ಕ್ಲೀನಿಂಗ್ (ಮಹಿಳೆಯರು ಕ್ಲೀನಿಂಗ್ ಕೆಲಸಕ್ಕೆ) ಬೇಕಾಗಿದ್ದಾರೆ. K.B Extn, ತ್ರಿಶೂಲ್ ಥಿಯಟರ್ ಹತ್ತಿರ, ಹೆಬ್ಬಾರ್ ಕಾಂಪ್ಲೆಕ್ಸ್, ದಾವಣಗೆರೆ .

98803 37686

**ಸುವರ್ಣ ಉದ್ಯೋಗಾವಕಾಶ**

ಪ್ರತಿ ತಿಂಗಳು 1 ಲಕ್ಷದವರೆಗೆ ಸಂಭಾವನೆ ನಿರುದ್ಯೋಗಿ ಯುವಕ, ಯುವತಿಯರು, ನಿವೃತ್ತರು, ವಿಮಾಪ್ರತಿನಿಧಿಗಳು, ಗೃಹಿಣಿಯರು, ಅಂಗವಿಕಲರು ಆಸಕ್ತಿಯುಳ್ಳ ಪ್ರತಿಯೊಬ್ಬರಿಗು ಸುವರ್ಣಅವಕಾಶ. ಸಂಪರ್ಕಿಸಿ.

ಸಾಯಿ ಕ್ರೆಡಿಟ್ ಕೋ ಅಪರೇಟಿವ್ ಸೊಸೈಟಿ.

99802 40407, 86606 69218

**ನೇರ ಪರೀಕ್ಷೆಗಳು**

ಉನ್ನತ ಶಿಕ್ಷಣಕ್ಕೆ ಮತ್ತು ಸರ್ಕಾರಿ ಕೆಲಸಕ್ಕೆ ಉಪಯೋಗ SSLC, PUC Degree, Pharmacy & BHMS (Government & Private Collage)

ಶ್ರೀ ಸಾಯಿ ಕರೆಸ್ಪಾಂಡೆನ್ಸ್ ಕಾಲೇಜ್

ಸೋಮು ಮೆಡಿಕಲ್ಸ್ ಮೇಲೆ, ಗಣೇಶ ದೇವಸ್ಥಾನದ ಹಿಂಭಾಗ, ರಾಂ ಆಂಡ್ ಕೋ ಸರ್ಕಲ್, ದಾವಣಗೆರೆ.

87620 58369, 90080 67049

**LEWA**

Proffessional Makeup Artist Course & Beauty Courses Conducting here
Contact No :
81971 79414, 78924 68118

**WORK FROM HOME**

Male/Female, Full / Part time
Hand writing work. Small Letter to Capital Letter
Earn Per month
12,000/- to 15,000/-
89718 52431

**ಅಕೌಂಟೆಂಟ್ ಬೇಕಾಗಿದ್ದಾರೆ**

ಮಲೇಬೆನ್ನೂರು ಪಟ್ಟಣದ ಶ್ರೀ ಚನ್ನೇಶ್ವರ ರೈಸ್ ಇಂಡಸ್ಟ್ರೀಸ್‌ನಲ್ಲಿ ಅಕೌಂಟೆಂಟ್ ಆಗಿ ಕೆಲಸ ಮಾಡಲು ಕ್ಯಾಶ್ ಬುಕ್, ಬಿಲ್ಲಿಂಗ್, ಟ್ಯಾಲಿ, ಡಾಟಾ ಎಂಟ್ರಿ ಜ್ಞಾನ ಇರುವವರು ಬೇಕಾಗಿದ್ದಾರೆ. ಸಂಪರ್ಕಿಸಿ :

99011 22854

**ಬ್ಯೂಟಿಷಿಯನ್ ಬೇಕಾಗಿದ್ದಾರೆ**

ನುರಿತ ಜ್ಞಾನವುಳ್ಳ Beutician ಕೆಲಸಕ್ಕೆ ಬೇಕಾಗಿದ್ದಾರೆ.
ಸಮಯ : ಬೆಳಿಗ್ಗೆ 10 ರಿಂದ 8 ಗಂಟೆವರೆಗೆ
Contact :
81974 43214, 99457 37214

**ಬೇಕಾಗಿದ್ದಾರೆ**

ದಾವಣಗೆರೆಯ ವಿದ್ಯಾನಗರದಲ್ಲಿರುವ ಕಚೇರಿಯೊಂದಕ್ಕೆ ಸಹಾಯಕರೊಬ್ಬರು ಬೇಕಾಗಿದ್ದಾರೆ. ವಿದ್ಯಾರ್ಥಿಗಳೊಂದಿಗೆ ಉತ್ತಮ ಸಂವಹನ ನಡೆಸುವ & ಕಂಪ್ಯೂಟರ್ ಜ್ಞಾನ ಅಗತ್ಯ. ನಿಮ್ಮ ಬಯೋಡಾಟಾ ಕಳುಹಿಸಿ :
directorpaeltd@gmail.com
99804 38600

**ಸೈಟ್‌ಗಳು ಮಾರಾಟಕ್ಕಿವೆ**

ದಾವಣಗೆರೆ ರಾಮನಗರ, ಎಸ್.ಎಸ್. ಆಸ್ಪತ್ರೆ ಹಿಂಭಾಗದಲ್ಲಿ ಸುಲಭ ಕಂತುಗಳಲ್ಲಿ ಸೈಟುಗಳು ಮಾರಾಟಕ್ಕಿವೆ. (Rs 1,500/-Sqft)

ಹುಲ್ಲುಮನೆ ಪ್ರಾಪರ್ಟೀಸ್

ಫೋ.: 95135 03000

**ಸಾಲಗಳಿಗಾಗಿ ಸಂಪರ್ಕಿಸಿ**

ಕಡಿಮೆ ಬಡ್ಡಿ ದರದಲ್ಲಿ ಮನೆ ಕಟ್ಟಲು, ಮನೆ ತೆಗೆದುಕೊಳ್ಳಲು, ಸೈಟ್ ಖರೀದಿ, ಮನೆ ಅಡಮಾನ ಬೇರೆ ಬ್ಯಾಂಕಿನ ಸಾಲ ವರ್ಗಾವಣೆ ಮತ್ತು ಅಧಿಕ ಸಾಲ ಪರ್ಸನಲ್ ಲೋನ್ ಮತ್ತು ವ್ಯವಹಾರ ಸಾಲಗಳಿಗಾಗಿ ಸಂಪರ್ಕಿಸಿ :

99455 22287

**MBBS**

Aspirants looking for admission in Russia, with low budget, call or visit
+91 7022 321 123
www.doctorsquery.com

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**

ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, KSRTC ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ. 4 ಮತ್ತು 18 ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.

ಅಸ್ತಮಾ, ಕೀಲು ನೋವು

ಡಾ|| ಎಸ್.ಎಂ. ಸೇಠಿ. ಫೋ. : 96322 95561
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ

**ನೀರಿನ ಲೀಕೇಜ್ (ವಾಟರ್ ಪ್ರೂಫಿಂಗ್)**

ನಿಮ್ಮ ಮನೆ, ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಟೆರೇಸ್, ಬಾಲ್ಕನಿ, ಸಂಪು, ಗೋಡೆ ಬಿರುಕು, ನೀರಿನ ಟ್ಯಾಂಕ್ ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿರಿ :

80955 09025

ಕೆಲಸ : 100% ಗ್ಯಾರಂಟಿ

**ಸೂರ್ಯ ನವೋದಯ**

(4ನೇ ಮತ್ತು 5ನೇ ತರಗತಿ ಮಕ್ಕಳಿಗೆ) ಅಡ್ಮಿಷನ್ ಪ್ರಾರಂಭ :1.6.2022 ರಿಂದ. ತರಗತಿಗಳು ಪ್ರಾರಂಭ: 22.6.2022
ಸ್ಥಳ: K.S.S ಕಾಲೇಜು ಸರಸ್ವತಿ ಬಡಾವಣೆ ದಾವಣಗೆರೆ.
ಸಮಯ: ಬೆಳಿಗ್ಗೆ 6-15 ರಿಂದ 7-45
ಸ್ಥಳ: ಕಾಮ್ರೇಡ್ ಲೆನಿನ್ ಶಾಲೆ ಡಾಂಗೇ ಪಾರ್ಕ್ ಹತ್ತಿರ, ದಾವಣಗೆರೆ.
ಸಮಯ: ಸಂಜೆ. 5-15 ರಿಂದ 6-45
ಶ್ರೀ ಸುರೇಶ ಪಿ. ಮುರಗಿ M.Sc, B.Ed
99028 24909, 98447 48763

# ವೀರಶೈವ ಮಹಾಸಭಾದಿಂದ ಎಸ್ಸೆಸ್ ಜನ್ಮದಿನಾಚರಣೆ



ದಾವಣಗೆರೆ, ಜೂ.17 - ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ರಾಷ್ಟ್ರೀಯ ಅಧ್ಯಕ್ಷರಾದ ಡಾ. ಶಾಮನೂರು ಶಿವಶಂಕರಪ್ಪ ಅವರ 92 ನೇ ಹುಟ್ಟುಹಬ್ಬದ ಅಂಗವಾಗಿ ಹಿರಿಯ ವನಿತೆಯರ ಆಶ್ರಮ ಪ್ರೇಮಾಲಯ ದಲ್ಲಿ ಜಿಲ್ಲಾ ವೀರಶೈವ ಲಿಂಗಾಯತ ಮಹಾಸಭಾ ಘಟಕದ ವತಿಯಿಂದ ಜಿಲ್ಲಾಧ್ಯಕ್ಷ ದೇವರಮನೆ ಶಿವಕುಮಾರ್ ಅವರ ನೇತೃತ್ವದಲ್ಲಿ ಸಿಹಿ, ಹಣ್ಣು ಹಂಪಲು, ಬಟ್ಟೆ ವಿತರಿಸಲಾಯಿತು.

ಈ ಕಾರ್ಯಕ್ರಮದ ಸಾನಿಧ್ಯವನ್ನು ಆವರಗೊಳ್ಳದ ಶ್ರೀ ಓಂಕಾರೇಶ್ವರ ಸ್ವಾಮೀಜಿ ವಹಿಸಿದ್ದರು. ಎಸ್ಸೆಸ್ ಅವರಿಂದ ಕೇಕ್ ಕತ್ತರಿಸುವ ಮೂಲಕ ಹುಟ್ಟುಹಬ್ಬವನ್ನು ಆಚರಣೆ ಮಾಡಲಾಯಿತು.

ಈ ಸಂಧರ್ಭದಲ್ಲಿ ವೀರಶೈವ ಲಿಂಗಾಯತ ಮಹಾಸಭಾ ರಾಷ್ಟ್ರೀಯ ಉಪಾಧ್ಯಕ್ಷರುಗಳಾದ ಅಥಣಿ ವೀರಣ್ಣ, ಅಣಬೇರು ರಾಜಣ್ಣ, ರಾಷ್ಟ್ರೀಯ ಯುವ ಘಟಕದ ಉಪಾಧ್ಯಕ್ಷ ಸಂದೀಪ್ ಅಣಬೇರು, ಜಿಲ್ಲಾ ಯುವ ಘಟಕದ ಅಧ್ಯಕ್ಷ ಶಂಭು ಉರೇಕೊಂಡಿ, ವನಿತಾ ಸಮಾಜದ ಸುನಿತ ವೀರನಾರಾಯಣ್, ಪದಾಧಿಕಾರಿಗಳಾದ ಕರೇಶಿವಪ್ಪ ಸಿದ್ದೇಶ್, ಕೊರಟಗೆರೆ ಶಿವಕುಮಾರ್, ವಿಶ್ವನಾಥ್ ಬುಳ್ಳಪುರ, ಜಯಪ್ರಕಾಶ್ ಮಾಗಿ, ರವಿ ಧಣಿ, ಐಗೂರು ಸಿ ಪ್ರಭು, ಕುರುಡಿ ಗಿರೀಶ್, ಶೋಭಾ ಕೊಟ್ರೇಶ್, ಶಶಿಕಲಾ ಬಡದಾಳ್, ರೇಖಾ ವಾಲಿ, ಅನಿಲ್, ರತನ್ ಶಿವಣ್ಣ, ಆರ್. ಜಿ. ಸಚಿನ್, ಲೋಹಿತ್, ಕಾರ್ತಿಕ್ ಹಿರೇಮಠ, ಕಿಶನ್ ಶಾಮನೂರು, ವಜ್ರಸ್ವಾಮಿ ಇನ್ನಿತರರು ಉಪಸ್ಥಿತರಿದ್ದರು.

# ಸಿದ್ದರಾಮಯ್ಯ ವಿರುದ್ಧ ಜಾತಿ ನಿಂದನೆ ದೂರು

## ಬಂಧಿಸಿ ಕ್ರಮಕ್ಕೆ ನಾರಾಯಣಸ್ವಾಮಿ ಒತ್ತಾಯ

ಬೆಂಗಳೂರು, ಜೂ. 17 - ರಾಜ್ಯದ ಮಾಜಿ ಮುಖ್ಯಮಂತ್ರಿ ಮತ್ತು ವಿಧಾನಸಭೆಯ ವಿಪಕ್ಷ ನಾಯಕ ಸಿದ್ದರಾಮಯ್ಯನವರು ಟ್ವೀಟ್ ಮಾಡುವ ಭರದಲ್ಲಿ, ತಾವು ಸದಾ ಅಸ್ಪೃಶ್ಯರು ಎಂದು ತಿಳಿಸಿ ನನ್ನ ಜಾತಿಗೆ ಅಪಮಾನ ಮಾಡಿದ್ದಾರೆ ಎಂದು ಬಿಜೆಪಿ ಎಸ್.ಸಿ. ಮೋರ್ಚಾ ರಾಜ್ಯ ಅಧ್ಯಕ್ಷ ಮತ್ತು ವಿಧಾನ ಪರಿಷತ್ ಸದಸ್ಯ ಛಲವಾದಿ ನಾರಾಯಣ ಸ್ವಾಮಿ ಆರೋಪಿಸಿದರು.

ಸಿದ್ದರಾಮಯ್ಯ ವಿರುದ್ಧ ಕ್ರಮಕ್ಕೆ ಆಗ್ರಹಿಸಿ ಬಿಜೆಪಿ ಎಸ್.ಸಿ. ಮೋರ್ಚಾ ದಿಂದ ಇಂದು ಹೈಗ್ರೌಂಡ್ಸ್ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದೇನೆ ಎಂದವರು ಸುದ್ದಿಗಾರರಿಗೆ ತಿಳಿಸಿದರು.

ಸಿದ್ದರಾಮಯ್ಯ ಬಗ್ಗೆ ನಮಗೆ ಬಹಳ ಗೌರವವಿದೆ. ಆದರೆ, ಅವರ ರಾಜಕೀಯ ಜಿದ್ದಾಜಿದ್ದಿ ವಿಚಾರದಲ್ಲಿ ನಮ್ಮ ಆಕ್ಷೇಪವಿದೆ. ನಮ್ಮನ್ನು ಗುಲಾಮರು, ಅಸ್ಪೃಶ್ಯ ರೆಂದು ಕರೆದು ನಿಂದಿಸಿದ್ದಾರೆ, ಇಂಥ ನಿಂದನೆಯ ಅಧಿಕಾರ ಅವರಿಗೆ ಇಲ್ಲ ಎಂದು ನಾರಾಯಣಸ್ವಾಮಿ ಹೇಳಿದ್ದಾರೆ. ಸಿದ್ದರಾಮಯ್ಯ ನಮ್ಮನ್ನು ಗುಲಾಮರು, ಅಸ್ಪೃಶ್ಯರೆಂದು ಕರೆದು ನಿಂದಿಸಿದ್ದಾರೆ. ಇಂಥ ನಿಂದನೆಯ ಅಧಿಕಾರ ಅವರಿಗೆ ಇಲ್ಲ. ಎಸ್‌ಸಿ, ಎಸ್‌ಟಿ ಮೇಲಿನ ದೌರ್ಜನ್ಯ ತಡೆ ಕಾಯ್ದೆಯಡಿ ದೂರು ನೀಡಿದ್ದೇನೆ. ಜಾತಿ ನಿಂದನೆ ಮಾಡಿದ್ದರಿಂದ ಅವರನ್ನು ಬಂಧಿಸಬೇಕು. ಬಂಧಿಸುವಲ್ಲಿ ತಡ ಮಾಡಿದರೆ ಧರಣಿ ಮಾಡುತ್ತೇನೆ ಎಂದೂ ಹೇಳಿದ್ದಾರೆ.

ನನ್ನ ಎಲ್ಲ ಬೆಳವಣಿಗೆಗೂ ಸಿದ್ದರಾಮಯ್ಯ ಬಾಗಿಲು ಹಾಕಿದರು ಎಂದು ಮೋಟಮ್ಮ ಅವರು ತಮ್ಮ ಆತ್ಮಕಥೆ ಯಲ್ಲಿ ಹೇಳಿದ್ದಾರೆ. ಕಾಂಗ್ರೆಸ್ ಮನಸ್ಥಿತಿ ದಲಿತ ವಿರೋಧಿ ಎಂಬುದು ಈ ಮೂಲಕ ವ್ಯಕ್ತವಾಗುತ್ತದೆ ಎಂದು ಇದೇ ಸಂದರ್ಭದಲ್ಲಿ ನಾರಾಯಣಸ್ವಾಮಿ ತಿಳಿಸಿದ್ದಾರೆ.

# ಪಠ್ಯಪುಸ್ತಕದಲ್ಲಿ ಹೇಮರೆಡ್ಡಿ ಮಲ್ಲಮ್ಮ ಜೀವನ ಚರಿತ್ರೆ ಸೇರಿಸಲು ಮನವಿ



ದಾವಣಗೆರೆ, ಜೂ. 17- ಮಹಾ ಸಾಧ್ವಿ, ಶಿವಶರಣೆ ಹೇಮರೆಡ್ಡಿ ಮಲ್ಲಮ್ಮನವರ ಜೀವನ ಚರಿತ್ರೆ ಹಾಗೂ ಯೋಗಿ ವೇಮನರೆಡ್ಡಿ ಪದ್ಯವನ್ನು ಪಠ್ಯಪುಸ್ತಕದಲ್ಲಿ ಸೇರ್ಪಡೆ ಮಾಡುವಂತೆ ಆಗ್ರಹಿಸಿ, ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ಸಮಾಜದಿಂದ ಜಿಲ್ಲಾಧಿಕಾರಿ ಮೂಲಕ ಮುಖ್ಯಮಂತ್ರಿಗಳಿಗೆ ಇಂದು ಮನವಿ ಸಲ್ಲಿಸಲಾಯಿತು.

ಹೇಮರೆಡ್ಡಿ ಮಲ್ಲಮ್ಮನವರ ಜೀವನ ಚರಿತ್ರೆ ಸಮಸ್ತ ಸ್ತ್ರೀಕುಲಕ್ಕೆ ಪ್ರೇರಣಾದಾಯಕವಾಗಿದೆ. ಪ್ರಾಥಮಿಕ ಮತ್ತು ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಹೇಮರೆಡ್ಡಿ ಮಲ್ಲಮ್ಮನವರ ಜೀವನ ಚರಿತ್ರೆ, ತತ್ವ ಸಿದ್ಧಾಂತಗಳು, ಅವರ ತಾಳ್ಮೆ, ತ್ಯಾಗ, ಭಕ್ತಿಯನ್ನು ಪರಿಚಯಿಸುವ ಅಗತ್ಯವಿದೆ ಎಂದು ಮನವಿಯಲ್ಲಿ ತಿಳಿಸಲಾಗಿದೆ.

ಹೇಮರೆಡ್ಡಿ ಮಲ್ಲಮ್ಮನವರ ಜೀವನ ಚರಿತ್ರೆಯನ್ನು ಪಠ್ಯಪುಸ್ತಕದಲ್ಲಿ ಸೇರಿಸುವ ಮೂಲಕ ಮಹಾಸಾಧ್ವಿಯ ಮೌಲ್ಯಯುತ ಗುಣಗಳನ್ನು ಮಕ್ಕಳಲ್ಲಿ ಬೆಳೆಸಲು ಅನುಕೂಲ ಮಾಡಿಕೊಡುವಂತೆ ಹಾಗೂ ಮಹಾ ತತ್ವಜ್ಞಾನಿ ಯೋಗಿ ವೇಮನ ಅವರ ವಚನಗಳನ್ನು ಪಠ್ಯಪುಸ್ತಕದಲ್ಲಿ ಸೇರಿಸುವಂತೆ ಸಮಾಜದ ಮುಖಂಡರು ಒತ್ತಾಯಿಸಿದ್ದಾರೆ.

ಶಾಸಕ ಎಸ್.ಎ. ರವೀಂದ್ರನಾಥ್ ಹಾಗೂ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಅವರಿಗೆ ಮನವಿ ಸಲ್ಲಿಸುವ ಸಂದರ್ಭದಲ್ಲಿ ಹೇಮರೆಡ್ಡಿ ಮಲ್ಲಮ್ಮ ಸಂಘದ ಅಧ್ಯಕ್ಷ ಡಾ. ಕೊಟ್ರೇಶ್ ಬಿದರಿ, ಮುಖಂಡರಾದ ಶ್ರೀಹರ್ಷ ಪಾಟೀಲ್, ಜಿ. ಸುರೇಶ್, ಎಂ. ಶ್ರೀನಿವಾಸ ರೆಡ್ಡಿ, ವೆಂಕಟರಮಣ ರೆಡ್ಡಿ ಮತ್ತಿತರರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

# ಕುರುಬ ಜಾತಿ ನಿಂದಿಸಿದ ವ್ಯಕ್ತಿ ಬಂಧನಕ್ಕೆ ಆಗ್ರಹ



ದಾವಣಗೆರೆ, ಜೂ.17- ಕುರುಬ ಜಾತಿಯನ್ನು ಸಾರ್ವಜನಿಕವಾಗಿ ನಿಂದಿಸಿರುವ ವ್ಯಕ್ತಿಯ ವಿರುದ್ದ ಎಫ್‌ಐಆರ್ ದಾಖಲಿಸಿ ಬಂಧಿಸುವಂತೆ ಆಗ್ರಹಿಸಿ ಹಾಲುಮತ ಮಹಾಸಭಾದ ನಿಯೋಗವು ನಗರದ ಉಪವಿಭಾಗಾಧಿಕಾರಿಗಳ ಮುಖಾಂತರ ಸರ್ಕಾರಕ್ಕೆ ಮನವಿ ಸಲ್ಲಿಸಿದೆ.

ಇದೇ ದಿನಾಂಕ 13ರಂದು ಸಾಮಾಜಿಕ ಜಾಲತಾಣಗಳಲ್ಲಿ ಜನತಾದಳ ಜಾತ್ಯತೀತ ಪಕ್ಷದ ಬೆಂಗಳೂರು ನಗರ ಘಟಕದ ಸಂಘಟನಾ ಕಾರ್ಯದರ್ಶಿ ಕುರುಬ ಜಾತಿಯನ್ನು ನಿಂದನೆ ಮಾಡಿ ವಿಡಿಯೋವನ್ನು ಹರಿ ಬಿಟ್ಟಿದ್ದು, ವಿಡಿಯೋದಲ್ಲಿ ಈ ವ್ಯಕ್ತಿಯು ಹೇಳಿರುವ ಮಾತುಗಳು ಕುರುಬ ಸಮಾಜದ ಮನಸ್ಸುಗಳನ್ನು ತೀವ್ರ ಘಾಸಿಗೊಳಿಸಿವೆ. ರಾಜ್ಯದ ಇಡೀ ಕುರುಬ ಸಮಾಜದ ಭಾವನೆಗಳಿಗೆ ಧಕ್ಕೆ ಉಂಟು ಮಾಡಿದ್ದಲ್ಲದೇ, ದ್ವೇಷದ ವಾತಾವರಣ ಸೃಷ್ಟಿಸಿ, ಪ್ರಚೋದನೆಗೆ ದಾರಿ ಮಾಡಿಕೊಟ್ಟಿದೆ ಎಂದು ನಿಯೋಗದ ಸದಸ್ಯರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ವಿಡಿಯೋದಲ್ಲಿ ಜಾತಿ ನಿಂದನೆ ಮಾಡಿರುವ ವ್ಯಕ್ತಿಯು ಜೆಡಿಎಸ್ ಪಕ್ಷದ ಚಿಹ್ನೆಯುಳ್ಳ ಬಾವುಟ ಮತ್ತು ಕೊರಳ ಪಟ್ಟಿಯನ್ನು ಹೊಂದಿದ್ದು, ಬೆಂಗಳೂರಿನ ಜೆಡಿಎಸ್ ಪಕ್ಷದ ಕಚೇರಿಯಲ್ಲಿ ಸಾರ್ವಜನಿಕವಾಗಿ ಬಹಿರಂಗ ಸಭೆಯಲ್ಲಿ ರಾಜ್ಯದ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಏಕ ವಚನದಲ್ಲಿ ಟೀಕಿಸಿದ್ದಲ್ಲದೇ, ಕುರುಬ ಜಾತಿಯನ್ನು ಹಾಗೂ ಕುರುಬ ಜಾತಿಯ ಕುರಿ ಕಾಯುವ ವೃತ್ತಿಯನ್ನು ನಿಂದನೆ ಮಾಡಿದ್ದಾನೆ ಎಂದು ಆರೋಪಿಸಿದ್ದಾರೆ.

ಈ ವೇಳೆ ಹಾಲುಮತ ಮಹಾಸಭಾದ ರಾಜ್ಯ ಸಂಚಾಲಕ ರಾಜು ಬಿ. ಮೌರ್ಯ, ದಾವಣಗೆರೆ ಜಿಲ್ಲಾಧ್ಯಕ್ಷ ಸಿ. ವೀರಣ್ಣ, ಕಾರ್ಯಾಧ್ಯಕ್ಷ ಚಂದ್ರು ದೀಟೂರು, ಪ್ರಧಾನ ಕಾರ್ಯದರ್ಶಿ ಬಿ.ಜಿ.ಘನರಾಜ್, ಪದಾಧಿಕಾರಿಗಳಾದ ಎಸ್.ಎಂ. ಸಿದ್ದಲಿಂಗಪ್ಪ, ಜಿ. ಷಣ್ಮುಖಪ್ಪ, ಆರ್.ಬಿ. ಪರಮೇಶ್, ಎನ್. ಪರಶುರಾಮ, ನಾಗರಾಜ್, ರಮೇಶ್ ಸೇರಿದಂತೆ ಇತರರು ಇದ್ದರು.

# ಡಾ. ಬಿ.ಎಂ. ತಿಪ್ಪೇಸ್ವಾಮಿ ಕಾಲೇಜಿನ ವಿದ್ಯಾರ್ಥಿಗಳಿಗೆ ಕೊರೊನಾ ಲಸಿಕೆ



ದಾವಣಗೆರೆ, ಜೂ.17- ಆದಿ ಕರ್ನಾಟಕ ವಿದ್ಯಾಭಿವೃದ್ಧಿ ಸಂಘದ ಆಶ್ರಯದಲ್ಲಿ ನಡೆಯುತ್ತಿರುವ ಡಾ. ಬಿ.ಎಂ. ತಿಪ್ಪೇಸ್ವಾಮಿ ಸಂಯುಕ್ತ ಪದವಿ ಪೂರ್ವ ಕಾಲೇಜು, ಪ್ರೌಢಶಾಲಾ ವಿಭಾಗದ ವಿದ್ಯಾರ್ಥಿಗಳಿಗೆ 2ನೇ ಡೋಸ್ ಕೊರೊನಾ ಲಸಿಕೆ ನೀಡಲಾಯಿತು. ಸಂಸ್ಥೆಯ ಅಧ್ಯಕ್ಷ ಎಲ್.ಎಂ. ಹನುಮಂತಪ್ಪ, ನಿರ್ದೇಶಕರಾದ ಎ.ಕೆ. ನಾಗಪ್ಪ, ಕೆ. ಚಂದ್ರಣ್ಣ ಮತ್ತಿತರರು ಉಪಸ್ಥಿತರಿದ್ದರು.

# ಹರಪನಹಳ್ಳಿಯ ಕುಂಚೂರು ಗ್ರಾ.ಪಂ. ಅಧ್ಯಕ್ಷರಾಗಿ ಪಾರ್ವತಮ್ಮ



ಹರಪನಹಳ್ಳಿ, ಜೂ. 17 - ತಾಲ್ಲೂಕಿನ ಕುಂಚೂರು ಗ್ರಾಮ ಪಂಚಾಯ್ತಿಯ ಅಧ್ಯಕ್ಷರಾಗಿ ಶ್ರೀಮತಿ ಪಾರ್ವತಮ್ಮ ನೀಲನಾಯ್ಕ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಅರಸನಾಳು ಮಾತಂಗಿ ಮೈಲಮ್ಮ ಅವರ ರಾಜೀನಾಮೆಯಿಂದ ತೆರವಾಗಿದ್ದ ಅಧ್ಯಕ್ಷ ಸ್ಥಾನಕ್ಕೆ ಚುನಾವಣೆ ನಡೆದಿದ್ದು, ಅಧ್ಯಕ್ಷ ಸ್ಥಾನ ಬಯಸಿ ಕುಂಚೂರು ಕೆರೆತಾಂಡಾದ ಪಾರ್ವತಮ್ಮ ನೀಲನಾಯ್ಕ್ ಅವರೊಬ್ಬರೇ ನಾಮಪತ್ರ ಸಲ್ಲಿಸಿದ್ದರಿಂದ ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿ ತಹಶೀಲ್ದಾರ್ ಡಾ. ಶಿವಕುಮಾರ್ ಬಿರಾದಾರ್ ಘೋಷಿಸಿದರು.

ಈ ಸಂದರ್ಭದಲ್ಲಿ ಮುಖಂಡರಾದ ಗಂಗಾನಾಯ್ಕ್, ಲಕ್ಷ್ಮಣ್‌ನಾಯ್ಕ್, ಅರಸನಾಳು ತಮ್ಮಣ್ಣ, ನಾಗನಾಯ್ಕ್, ನಿಂಗನಾಯ್ಕ್, ಮಲ್ಲಪ್ಪ, ಸಿದ್ದಲಿಂಗಪ್ಪ, ಪಕ್ಕೀರಪ್ಪ, ಪಿಡಿಒ ಆನಂದ್‌ಕುಮಾರ್, ಕಾರ್ಯದರ್ಶಿ ಬಸಪ್ಪ ಮತ್ತು ಇತರರು ಉಪಸ್ಥಿತರಿದ್ದರು.

# ಓಶೋ ಧ್ಯಾನ ಶಿಬಿರ

ದಾವಣಗೆರೆ, ಜೂ. 17 - ಓಶೋ ಸನ್ನಿಧಿ ಇನ್‌ಸೈಟ್ ಫೌಂಡೇಶನ್ ವತಿಯಿಂದ ಮಾನಸಿಕ ಮತ್ತು ದೈಹಿಕ ಒತ್ತಡಗಳ ನಿವಾರಣೆಗಾಗಿ, ಸಂಭ್ರಮದಿಂದ ಬದುಕಲು ಹಾಗೂ ಧ್ಯಾನ ಜೀವನ ನಡೆಸಲು ದಿನಾಂಕ 20 ರಿಂದ 26 ರವರೆಗೆ ಎವಿಕೆ ಕಾಲೇಜು ರಸ್ತೆಯಲ್ಲಿನ ಆಲೂರ್ ಕನ್ವೆನ್ಷನ್ ಹಾಲ್‌ನಲ್ಲಿ ಓಶೋ ಡೈನಮಿಕ್ ಧ್ಯಾನ ಶಿಬಿರ ನಡೆಯಲಿದೆ ಎಂದು ಅರ್ಚನಾ (9738572318), ಪುಷ್ಪ (9036719573) ತಿಳಿಸಿದ್ದಾರೆ.

# ಚಳ್ಳಕೆರೆ ತಾ.ನಲ್ಲಿ ಎರಡು ತಲೆ, ಐದು ಕಾಲು ಕುರಿಮರಿಗೆ ಜನ್ಮ

ಚಳ್ಳಕೆರೆ, ಜೂ. 17- ತಾಲ್ಲೂಕಿನ ಕೋನಗರಹಳ್ಳಿಯಲ್ಲಿ ಎರಡು ತಲೆ, ಐದು ಕಾಲುಗಳನ್ನು ಹೊಂದಿದ ಕುರಿ ಮರಿಗೆ ಜನ್ಮ ನೀಡಿ, ಕೇವಲ ಅರ್ಧ ಗಂಟೆಯಲ್ಲೇ ಸಾವನ್ನಪ್ಪಿದ ಘಟನೆ ನಡೆದಿದೆ. ಗ್ರಾಮದ ನಿಂಗಪ್ಪ ಅವರ ತೋಟದಲ್ಲಿ ಈ ಘಟನೆ ನಡೆದಿದೆ ಎಂದು ಪ್ರತ್ಯಕ್ಷ ದರ್ಶಿ ತಿಳಿಸಿದ್ದಾರೆ.

# ಗ್ರಾಮಾಂತರದಲ್ಲಿ ಇಂದು ವಿದ್ಯುತ್ ಅದಾಲತ್

ದಾವಣಗೆರೆ ಗ್ರಾಮೀಣ ಉಪ ವಿಭಾಗದ ಗಡಿ ಭಾಗದ ಗ್ರಾಮೀಣ ಪ್ರದೇಶಗಳಲ್ಲಿ ವಿದ್ಯುತ್ ಸಮಸ್ಯೆಗಳ ಬಗ್ಗೆ ಅರಿತುಕೊಂಡು ತಕ್ಷಣ ಪರಿಹಾರ ನೀಡಲು ಇಂದು ಬೆಳಿಗ್ಗೆ 11 ಗಂಟೆಗೆ ಕೋಡಿಹಳ್ಳಿ ಗ್ರಾಮ, ಕಕ್ಕರಗೊಳ್ಳ ಪಂಚಾಯತಿ, ಕೋಡಿಹಳ್ಳಿ ಕ್ಯಾಂಪ್ ಶ್ಯಾಗಲೆ ಪಂಚಾಯತಿಗಳಲ್ಲಿ ಅದಾಲತ್ ಸಭೆ ಕರೆಯಲಾಗಿದೆ.

# ಇಂದು ಜಿ.ಎಂ.ಹಾಲಮ್ಮ ಕಾಲೇಜಿನಲ್ಲಿ ಪ್ರಶಸ್ತಿ ಪ್ರದಾನ

ದಾವಣಗೆರೆ, ಜೂ.17 - ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಶೇ 100 ಫಲಿತಾಂಶ ಹಾಗೂ ಹೆಚ್ಚು ಅತ್ಯುನ್ನತ ಶ್ರೇಣಿ ಪಡೆದ ಶಾಲೆಗಳ ಪ್ರಾಚಾರ್ಯರು ಹಾಗೂ ಮುಖ್ಯಸ್ಥರಿಗೆ ಪ್ರಶಸ್ತಿ ಪ್ರದಾನ ಸಮಾರಂಭವನ್ನು ನಾಳೆ ದಿನಾಂಕ 18ರ ಶನಿವಾರ ಬೆಳಿಗ್ಗೆ 9.30ಕ್ಕೆ ಜಿ.ಎಂ. ಹಾಲಮ್ಮ ಪಿಯು ಕಾಲೇಜಿನಿಂದ ಹಮ್ಮಿಕೊಳ್ಳಲಾಗಿದೆ ಎಂದು ಕಾಲೇಜಿನ ಪ್ರಾಚಾರ್ಯ ಹಾಗೂ ಸಿಇಒ ಡಾ. ವಿ. ವೆಂಕಟ ರಾಯುಡು ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಜಿಎಂಐಟಿ ಕಾಲೇಜಿನ ಜಿ.ಎಂ. ಹಾಲಮ್ಮ ಸಭಾಂಗಣದಲ್ಲಿ ಸಮಾರಂಭ ಆಯೋಜಿಸಲಾಗಿದ್ದು, ಕಾರ್ಯಕ್ರಮದಲ್ಲಿ 'ಎಜುಕೇಷನ್ ಟೆಕ್ನಾಲಜಿ ಟುಡೇ ಅಂಡ್ ಟುಮಾರೊ' ಎಂಬ ವಿಷಯದ ಮೇಲೆ ಕಾರ್ಯಾಗಾರ ಹಮ್ಮಿಕೊಳ್ಳಲಾಗಿದೆ ಎಂದರು.

ಸಂಸದ ಜಿ.ಎಂ. ಸಿದ್ದೇಶ್ವರ ಭಾಗವಹಿಸಲಿದ್ದಾರೆ ಎಂದು ಅವರು ವಿವರಿಸಿದರು. ಕಾಲೇಜಿನ ಉದ್ಯೋಗ ಮತ್ತು ತರಬೇತಿ ವಿಭಾಗದ ಮುಖ್ಯಸ್ಥ ತೇಜಸ್ವಿ ಕಟ್ಟೀಮನಿ ಪತ್ರಿಕಾಗೋಷ್ಠಿಯಲ್ಲಿದ್ದರು.

# ಯಕ್ಷಗಾನ ತರಬೇತಿ ಶಿಬಿರ

ದಾವಣಗೆರೆ, ಜೂ. 17- ನಗರದ ಕಲಾಕುಂಚ ಸಾಂಸ್ಕೃತಿಕ ಸಂಸ್ಥೆಯ ಅಂಗ ಸಂಸ್ಥೆ ಯಕ್ಷರಂಗ ಯಕ್ಷಗಾನ ಸಂಸ್ಥೆಯಿಂದ ಯಕ್ಷಗಾನ ತರಬೇತಿ ಶಿಬಿರ ನಡೆಯಲಿದೆ ಎಂದು ಸಂಸ್ಥೆ ಅಧ್ಯಕ್ಷ ಮಲ್ಯಾಡಿ ಪ್ರಭಾಕರ ಶೆಟ್ಟಿ ತಿಳಿಸಿದ್ದಾರೆ. ವಿವರಕ್ಕೆ ಸಂಸ್ಥೆಯ ಖಜಾಂಚಿ ನೀಲಾವರ ಭಾಸ್ಕರ ನಾಯಕ್ (9449374300) ಅವರನ್ನು ಸಂಪರ್ಕಿಸಬಹುದು.

# ರೈತರ ರಾಗಿಯನ್ನು ಬೆಂಬಲ ಬೆಲೆಗೆ ಖರೀದಿಸಲು ಮುಖ್ಯಮಂತ್ರಿ ಬೊಮ್ಮಾಯಿಗೆ ಮನವಿ

ದಾವಣಗೆರೆ, ಜೂ.17 - ನಗರದ ಬಾಪೂಜಿ ಬ್ಯಾಂಕ್ ಸಮುದಾಯ ಭವನದಲ್ಲಿ ಇಂದು ನಡೆದ ಖಾಸಗಿ ಕಾರ್ಯಕ್ರಮವೊಂದರಲ್ಲಿ ಪಾಲ್ಗೊಂಡಿದ್ದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಭೇಟಿ ಮಾಡಿದ ತಾಲ್ಲೂಕಿನ ಆಲೂರು ಹಾಗೂ ಸುತ್ತಮುತ್ತಲಿನ ಗ್ರಾಮದ ರೈತ ನಾಯಕರು, ಸಣ್ಣ ರೈತರು, ದೊಡ್ಡ ರೈತರು ಎನ್ನದೆ ರಾಗಿ ಬೆಳೆದಿರುವ ಎಲ್ಲಾ ರೈತರ ರಾಗಿ ಧವಸವನ್ನು ಸರ್ಕಾರ ಕೂಡಲೇ ಬೆಂಬಲ ಬೆಲೆಗೆ ಖರೀದಿ ಮಾಡುವುದರ ಮೂಲಕ ಎಲ್ಲಾ ರೈತರ ಕಷ್ಟಕ್ಕೆ ಸ್ಪಂದಿಸಲು ಆಗ್ರಹಿಸಿದರು.

ಈ ಸಂದರ್ಭದಲ್ಲಿ ಪ್ರಮುಖರಾದ ಕೆ.ಎಂ. ಹೇಮಂತರಾಜ್ ಕೆರೆ ಹೋರಾಟಗಾರರ ಜೊತೆ ಸುತ್ತಮುತ್ತಲಿನ ಗ್ರಾಮಸ್ಥರು ಜೊತೆಯಾಗಿದ್ದರು.

# ನಾಮದೇವ ಸಿಂಪಿ ಸಮಾಜದಿಂದ ನಗರದಲ್ಲಿ ಇಂದು ಆರೋಗ್ಯ ತಪಾಸಣೆ

ನಾಮದೇವ ಸಿಂಪಿ ಸಮಾಜದಿಂದ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಶಸ್ತ್ರಚಿಕಿತ್ಸಕರು, ಚಿಗಟೇರಿ ಜಿಲ್ಲಾಸ್ಪತ್ರೆ ಇವರ ಸಂಯುಕ್ತಾಶ್ರಯದಲ್ಲಿ ಇಂದು ಬೆಳಿಗ್ಗೆ 11.30 ಕ್ಕೆ ದೊಡ್ಡಪೇಟೆಯಲ್ಲಿರುವ ನಾಮದೇವ ಭಜನಾ ಮಂದಿರದಲ್ಲಿ ಸಾರ್ವಜನಿಕರಿಗೆ ಉಚಿತ ಆರೋಗ್ಯ ತಪಾಸಣಾ ಶಿಬಿರ ನಡೆಯಲಿದೆ.

ವಿಧಾನಪರಿಷತ್ ಮಾಜಿ ಮುಖ್ಯ ಸಚೇತಕ ಡಾ. ಎ.ಹೆಚ್. ಶಿವಯೋಗಿ ಸ್ವಾಮಿ ಶಿಬಿರ ಉದ್ಘಾಟಿಸಲಿದ್ದು, ಮುಖ್ಯ ಅತಿಥಿಗಳಾಗಿ ಮರಾಠ ಸಮಾಜದ ಗೌರವಾಧ್ಯಕ್ಷ ಯಶವಂತರಾವ್ ಜಾಧವ್, ಡಿಹೆಚ್‌ಓ ಡಾ. ನಾಗರಾಜ್, ಜಿಲ್ಲಾ ಮುಖ್ಯ ಶಸ್ತ್ರಚಿಕಿತ್ಸಕ, ಡಾ. ಷಣ್ಮುಖಪ್ಪ, ನಾಮದೇವ ಸಿಂಪಿ ಸಮಾಜದ ಗೌರವಾಧ್ಯಕ್ಷ ಜ್ಞಾನದೇವ ಬೊಂಗಾಳೆ, ಸಮಾಜದ ಆರೋಗ್ಯ ಸಮಿತಿ ಅಧ್ಯಕ್ಷ ಡಾ.ಎ.ಬಿ. ಕಾನಡೆ, ವಿಠಲ ರುಕ್ಮಿಣಿ ಸಮುದಾಯ ಭವನ ಕಟ್ಟಡ ನಿರ್ಮಾಣ ಸಮಿತಿ ಅಧ್ಯಕ್ಷ ಕೆ.ಬಿ. ಶಂಕರನಾರಾಯಣ ಭಾಗವಹಿಸಲಿದ್ದಾರೆ. ಸಮಾಜದ ಅಧ್ಯಕ್ಷ ಎಂ.ಎಸ್. ವಿಠಲ್ ಅಧ್ಯಕ್ಷತೆ ವಹಿಸಲಿದ್ದಾರೆ.

ಶಿಬಿರದಲ್ಲಿ ರಕ್ತದೊತ್ತಡ, ಕೀಲುಮೂಳೆ ತಪಾಸಣೆ, ಸ್ತ್ರೀರೋಗ ತಪಾಸಣೆ, ನೇತ್ರ ತಪಾಸಣೆ, ಹಲ್ಲಿನ ತಪಾಸಣೆ, ಮಕ್ಕಳ ತಪಾಸಣೆ ನಡೆಯಲಿದೆ ಎಂದು ಸಮಾಜದ ಪ್ರಧಾನ ಕಾರ್ಯದರ್ಶಿ ವಿ. ಮನೋಹರ ವಿವರಿಸಿದ್ದಾರೆ.

# ಶಾಲಾ ಮಾನ್ಯತೆ ನವೀಕರಣಕ್ಕೆ ಮಾನದಂಡಗಳ ಸರಳೀಕರಣಕ್ಕೆ ಮನವಿ



ದಾವಣಗೆರೆ, ಜೂ.17- ಶಾಲಾ ಮಾನ್ಯತೆ ನವೀಕರಣಕ್ಕೆ ಇರುವ ಮಾನದಂಡಗಳನ್ನು ಸರಳೀಕರಣಗೊಳಿಸಲು ಹಾಗೂ ಆರ್‌ಟಿಇ ಹಣ ಬಿಡುಗಡೆಗೊಳಿಸಬೇಕು. ಖಾಸಗಿ ಶಾಲೆಗಳ ಸೇವೆ ಹಾಗೂ ಶಿಕ್ಷಣ ಕ್ಷೇತ್ರದಲ್ಲಿ ಸಾಧಿಸುತ್ತಿರುವ ಸಾಧನೆ ತಮಗೆ ತಿಳಿದಿರುವುದೇ ಆಗಿದೆ. ಪ್ರತಿ ವರ್ಷ ಎಸ್ಸೆಸ್ಸೆಲ್ಸಿ ಫಲಿತಾಂಶದಲ್ಲಿ ಖಾಸಗಿ ಶಾಲೆಗಳದೇ ಮೇಲುಗೈ ಆಗಿದೆ. ಹೀಗಿರುವಾಗ ಖಾಸಗಿ ಶಾಲೆಗಳ ಮೇಲೆ ಸರ್ಕಾರದ ಗದಾಪ್ರಹಾರ ಎಷ್ಟರಮಟ್ಟಿಗೆ ಸರಿ. ಶಾಲಾ ಮನ್ನಣೆ ನವೀಕರಣ ನೀಡುವಾಗ ಅಗ್ನಿನಂದಕ ಅಳವಡಿಕೆ ಹಾಗೂ ಪಿಡಬ್ಲ್ಯೂಡಿ ಕಚೇರಿಯಿಂದ ಪ್ರಮಾಣ ಪತ್ರವನ್ನು ತರಲು ಕೇಳುತ್ತಿದ್ದಾರೆ. ಈ ಕೆಲಸ ಅಷ್ಟು ಸುಲಭವಾಗಿರುವುದಿಲ್ಲ. ಈ ವಿಷಯವನ್ನು ಮುಂದಿಟ್ಟು ಮನ್ನಣೆ ನವೀಕರಣಕ್ಕೆ ಕೊಟ್ಟ ಅರ್ಜಿಗಳನ್ನು ತಿರಸ್ಕಾರ ಮಾಡುತ್ತಿದ್ದಾರೆ.

ಸಾವಿರಾರು ಶಿಕ್ಷಕರಿಗೆ ಜೀವನ ಕಟ್ಟಿಕೊಟ್ಟಿರುವ ಖಾಸಗಿ ಶಾಲೆಗಳ ಮೇಲೆ ಇಂತಹ-ಹೊಸ ಹೊಸ ಕಾನೂನುಗಳ ಹೇರಿಕೆಯನ್ನು ನಿಲ್ಲಿಸಲು ತಾವುಗಳು ಆದೇಶಿಸಬೇಕೆಂದು ಹಾಗೂ ಮನ್ನಣೆ ನವೀಕರಣಕ್ಕೆ ಈ ಹಿಂದೆ ಇದ್ದ ಪದ್ಧತಿಯನ್ನೇ ಮುಂದುವರೆಸಬೇಕೆಂದು ಅವರು ಮನವಿ ಮಾಡಿಕೊಂಡಿದ್ದಾರೆ.

ಕಳೆದ ವರ್ಷ ಆರ್‌ಟಿಇ ಶುಲ್ಕ ಮರುಪಾವತಿ ಇನ್ನೂ ಸಹ ಆಗಿರುವುದಿಲ್ಲ, ತಕ್ಷಣವೇ ಬಿಡುಗಡೆಗೊಳಿಸಲು ಕ್ರಮ ಕೈಗೊಳ್ಳಬೇಕೆಂದು ತಮ್ಮಲ್ಲಿ ಸಂಘದ ಅಧ್ಯಕ್ಷ ತ್ಯಾವಣಿಗಿ ವೀರಭದ್ರಸ್ವಾಮಿ, ಗೌರವಾಧ್ಯಕ್ಷ ಕಂದನಕೋವಿ ಪ್ರಕಾಶ್, ಹೆಚ್.ಜಿ. ಪ್ರಕಾಶ್, ಕೆ.ಎಂ.ಸುರೇಶ್, ವೀರೇಶ್ ಬಿರಾದಾರ್, ಉಪಾಧ್ಯಕ್ಷ ನಿಂಗಪ್ಪ, ಶಿವಕುಮಾರ್, ದಿನೇಶ್, ಮಂಜಾನಾಯ್ಕ, ವಕ್ತಾವರ್ ಸಿಂಗ್, ಮಂಜುನಾಥ ಸ್ವಾಮಿ ಎಸ್.ಎಂ., ನಾಗರಾಜಯ್ಯ, ಬಸವರಾಜಪ್ಪ, ಚೇತನ್ ಕುಮಾರ್, ಮಧುಕೇಶ್ ಸೇರಿದಂತೆ ಮತ್ತಿತರರು ವಿನಂತಿಸಿದ್ದಾರೆ.

## ಓದುಗರ ಪತ್ರ

### ಬಾತಿ ಕೆರೆಗೆ ತಡೆಗೋಡೆ ನಿರ್ಮಿಸಿ

ಮಾನ್ಯರೇ,

ದಾವಣಗೆರೆ ಸಮೀಪದ ದೊಡ್ಡ ಬಾತಿ ಸಮೀಪ ಕೆರೆ ಇರುವುದು, ಈ ಕೆರೆಯ ದಡದ ಮೇಲೆ ರಸ್ತೆ ಇರುವುದು ಸರಿಯಷ್ಟೇ, ಈ ರಸ್ತೆಯ ಮೇಲೆ ಪ್ರತಿದಿನ ಸಾವಿರಾರು ವಾಹನಗಳು ಸಂಚರಿಸುತ್ತವೆ. ಅಕಸ್ಮಾತ್ ಕೆರೆಯ ಸಮೀಪ ವಾಹನಗಳು ಅಪಘಾತಕ್ಕೆ ಒಳಗಾದರೆ ಜನರಿಗೆ ದೊಡ್ಡ ಆಘಾತ ಉಂಟಾಗುತ್ತದೆ. ಆದ್ದರಿಂದ ಕೂಡಲೇ ಸಂಬಂಧಪಟ್ಟ ಅಧಿಕಾರಿಗಳು ಸೂಕ್ತ ಕ್ರಮ ಕೈಗೊಂಡು, ತಡೆಗೋಡೆ ನಿರ್ಮಾಣ ಮಾಡಲು ಮನವಿ ಮಾಡಿಕೊಳ್ಳುತ್ತೇನೆ.

- ಷಣ್ಮುಖ ಹಳೇಬಾತಿ

### ಚರಂಡಿ ಮುಚ್ಚಿಸಿ, ಮಕ್ಕಳ ಪ್ರಾಣ ಉಳಿಸಿ

ಮಾನ್ಯರೇ

ನಿಟುವಳ್ಳಿ 36ನೇ ವಾರ್ಡ್‌ನ ಹೆಚ್.ಕೆ.ಆರ್. ರಸ್ತೆಯಲ್ಲಿ ಚರಂಡಿ ಕುಸಿದು ಆರು ತಿಂಗಳಾಯಿತು. ತಗ್ಗಿಗೆ ಬಿದ್ದಿದ್ದ ಎರಡು ಮಕ್ಕಳನ್ನು ನಾಗರಿಕರು ಎತ್ತಿದ್ದಾರೆ. ಚರಂಡಿ ಸ್ವಚ್ಛವಾಗಿಲ್ಲ ಹಾಗಾಗಿ ಸೊಳ್ಳೆ ಕಾಟ ಜಾಸ್ತಿಯಾಗಿದೆ. ನಿತ್ಯವೂ ಸಾವಿರಾರು ಶಾಲಾ ಮಕ್ಕಳು ಈ ರಸ್ತೆಯಲ್ಲಿ ಓಡಾಡುತ್ತಾರೆ. ಮಹಾನಗರ ಪಾಲಿಕೆ ಆಯುಕ್ತರು ಖುದ್ದು ಪರಿಶೀಲಿಸಿ, ಚರಂಡಿ ದುರಸ್ತಿ ಪಡಿಸಿ, ಮಕ್ಕಳ ಪ್ರಾಣ ಉಳಿಸಬೇಕಾಗಿ ವಿನಂತಿ.

ಕೆ.ಎನ್. ಸ್ವಾಮಿ, ಸಾಹಿತಿ ದಾವಣಗೆರೆ.

### ಹದಿನೈದು ದಿನಗಳಿಗೊಮ್ಮೆ ಉಚಿತ ಪಶು ಚಿಕಿತ್ಸೆ ಒದಗಿಸಿ

ಮಾನ್ಯರೇ,

ರಾಜ್ಯಾದ್ಯಂತ ಎಲ್ಲಾ ಗ್ರಾಮಗಳಲ್ಲೂ ಹದಿನೈದು ದಿನಗಳಿಗೊಮ್ಮೆ ಪಶುಗಳುಗಳಿಗೆ ಉಚಿತ ಚಿಕಿತ್ಸೆ ನೀಡಬೇಕು ಎಂದು ಸರ್ಕಾರಕ್ಕೆ ಈ ಮೂಲಕ ಸಮಸ್ತ ರೈತ ಬಾಂಧವರ ಪರವಾಗಿ ಮನವಿ ಮಾಡಿಕೊಳ್ಳುತ್ತೇನೆ. ಹಾಗೂ ಸರ್ಕಾರಿ ಪಶು ಆಸ್ಪತ್ರೆಗಳಲ್ಲಿ ಪಶುಗಳ ರೋಗ ಗುಣವಾಗಲು ಉಚಿತವಾಗಿ ಮೆಡಿಸಿನ್ ಒದಗಿಸಬೇಕು ಹೊರಗಡೆ ತರಲು ಅಂಗಡಿಗಲ್ಲಿ ಚೀಟಿ ಬರೆದು ಕೊಡಬಾರದು.

- ಷಣ್ಮುಖ ಎಸ್.ಹೆಚ್., ಹಳೇಬಾತಿ .


ಆತ್ಮೀಯ ಗೆಳೆಯನಿಗೆ ಹುಟ್ಟುಹಬ್ಬದ ಶುಭಾಶಯಗಳು




✦ ಶ್ರೀನಿವಾಸ ದಾಸಕರಿಯಪ್ಪ ಗೆಳೆಯರ ಬಳಗ
✦ ಹ್ಯಾಪಿ ಫ್ರೆಂಡ್ಸ್ ಗ್ರೂಪ್, ವಿನೋಬನಗರ
✦ ಇಂಡಿಯನ್ ಕಾಫಿ ಬಾರ್ ಗೆಳೆಯರ ಬಳಗ, ಹಳೇ ಬಸ್ ನಿಲ್ದಾಣ
✦ ಟೀ ಲಾಂಚ್ ಗೆಳೆಯರ ಬಳಗ, ದಾವಣಗೆರೆ

## ದಾವಣಗೆರೆ ಹುಡುಗನ 'ಪೋಸ್ಟರ್ ಬಾಯ್' ಕಿರುಚಿತ್ರ




ದಾವಣಗೆರೆ, ಜೂ. 17- ನಗರದ ಶ್ರೀಹಾನ್ ಎಂ. ಹದಡಿ ಅಮೋಘ ಅಭಿನಯದ 'ಪೋಸ್ಟರ್ ಬಾಯ್' ಕಿರುಚಿತ್ರ ಸತ್ಯ ಪಿಚ್ಚರ್ ಅಫಿಶಿಯಲ್ ಯೂಟ್ಯೂಬ್ ಚಾನೆಲ್‌ನಲ್ಲಿ ಎಲ್ಲರ ಗಮನ ಸೆಳೆಯುತ್ತಿದೆ.

ಒಬ್ಬ ಚಿಂದಿ ಆಯುವ ಹುಡುಗನ ಕನಸಿನ ಕಥೆಯನ್ನು ರಾಜಶೇಖರ್ ಅರಸ್ ಅವರು ನಿರ್ದೇಶಿಸಿದ್ದಾರೆ. ಜಗದೀಶ್ ಅಭಿನಯಿಸಿದ್ದಾರೆ. ಶ್ರೀಹಾನ್, ಎಸ್.ಎಸ್. ಬಡಾವಣೆಯ ಎಜು ಏಶಿಯಾ ಎಂ.ಎನ್.ಎಸ್ ಕಾಂಟಿನೆಂಟಲ್ ಶಾಲೆಯ ವಿದ್ಯಾರ್ಥಿ. ಶ್ರೀಹಾನ್, ಕರ್ಣ ಮಾಸ್ತರವರ ಕೆ.ಡಿ. ಡಾನ್ಸ್ ಕಂಪನಿಯಲ್ಲಿ ನೃತ್ಯ ತರಬೇತಿ ಪಡೆಯುತ್ತಿದ್ದಾನೆ.

satya.pictures.official YouTube channel https://youtu.be/CHkUw006yjs ಲಿಂಕ್ ಉಪಯೋಗಿಸಿ ಚಿತ್ರವನ್ನು ವೀಕ್ಷಿಸಬಹುದಾಗಿದೆ.

## ಗುಜರಾತ್ ಗಲಭೆಯ 12ನೇ ತರಗತಿ ಪಾಠಕ್ಕೆ ಕೊಕ್

ನವದೆಹಲಿ, ಜೂ. 17 – 2002ರ ಗುಜರಾತ್ ಗಲಭೆ, ತುರ್ತು ಪರಿಸ್ಥಿತಿ, ಶೀತಲ ಸಮರ, ನಕ್ಸಲ್ ಹೋರಾಟ ಹಾಗೂ ಮುಘಲ್ ನ್ಯಾಯಾಲಯಗಳ ಕುರಿತ ಪಾಠಗಳನ್ನು ಎನ್.ಸಿ.ಇ.ಆರ್.ಟಿ.ಯ 12ನೇ ತರಗತಿ ಪಠ್ಯಗಳಿಂದ ತೆಗೆದು ಹಾಕಲಾಗಿದೆ. ಈ ಪಾಠಗಳು ಪುನರಾವರ್ತನೆಯಾಗಲಿವೆ ಹಾಗೂ ಅಪ್ರಸ್ತುತವಾಗಿವೆ. ಈ ಕಾರಣದಿಂದ ಪಠ್ಯ ಪರಿಷ್ಕರಣೆಯ ವೇಳೆ ಕೈ ಬಿಟ್ಟಿರುವುದಾಗಿ ಎನ್.ಸಿ.ಇ.ಆರ್.ಟಿ. ತಿಳಿಸಿದೆ. ಸಿ.ಬಿ.ಎಸ್.ಇ. ಹಾಗೂ ಕೆಲ ರಾಜ್ಯಗಳು ಎನ್.ಸಿ.ಇ.ಆರ್.ಟಿ. ಪಠ್ಯ ಬಳಸುತ್ತವೆ.

## ರಸಗೊಬ್ಬರ ಅವ್ಯವಹಾರ : ರಾಜಸ್ಥಾನ ಸಿಎಂ ಸಹೋದರನ ವಿರುದ್ಧ ಸಿಬಿಐ ಪ್ರಕರಣ

ನವದೆಹಲಿ, ಜೂ. 17 – ರೈತರಿಗೆ ನೀಡಬೇಕಾಗಿದ್ದ ರಸಗೊಬ್ಬರವನ್ನು ದುರ್ಬಳಕೆ ಮಾಡಿಕೊಂಡ ಆರೋಪದ ಮೇಲೆ ರಾಜಸ್ಥಾನದ ಮುಖ್ಯಮಂತ್ರಿ ಅಶೋಕ್ ಗೆಹ್ಲೋಟ್ ಅವರ ಸಹೋದರ ಅಗ್ರಸೇನ ಗೆಹ್ಲೋಟ್ ಸೇರಿದಂತೆ 15 ಜನರ ವಿರುದ್ಧ ಸಿ.ಬಿ.ಐ. ಪ್ರಕರಣ ದಾಖಲಿಸಿದೆ. ಜೋಧಪುರದಲ್ಲಿರುವ ಅಗ್ರಸೇನ ನಿವಾಸ ಸೇರಿದಂತೆ ಮೂರು ರಾಜ್ಯಗಳ 16 ತಾಣಗಳ ಮೇಲೆ ದಾಳಿ ನಡೆಸಿದ ನಂತರ ಈ ಕ್ರಮ ತೆಗೆದುಕೊಳ್ಳಲಾಗಿದೆ.

ಸಿ.ಬಿ.ಐ.ನ 60 ಅಧಿಕಾರಿಗಳು ಗುಜರಾತ್, ರಾಜಸ್ಥಾನ ಹಾಗೂ ಪಶ್ಚಿಮ ಬಂಗಾಳಗಳಲ್ಲಿ ನಡೆಸಲಾದ ದಾಳಿಯಲ್ಲಿ ಭಾಗಿಯಾಗಿದ್ದಾರೆ.

ರೈತರಿಗೆ ಶೇ.80ರ ಸಬ್ಸಿಡಿ ದರದಲ್ಲಿ ಪೊಟ್ಯಾಷಿಯಂ ಕ್ಲೋರೈಡ್ ವಿತರಿಸಲಾಗುತ್ತದೆ. ಆದರೆ, ಈ ಗೊಬ್ಬರವನ್ನು ಮರು ಪ್ಯಾಕ್ ಮಾಡಿ ಕೈಗಾರಿಕೆಗಳಿಗೆ ಮಾರಲಾಗಿತ್ತು. ಅಲ್ಲದೇ ದಕ್ಷಿಣ ಏಷಿಯಾದ ದೇಶಗಳು, ಸೌದಿ ಅರೇಬಿಯಾ ಮತ್ತಿತರೆ ಮಾರುಕಟ್ಟೆಗಳಿಗೆ ರಫ್ತು ಮಾಡಲಾಗಿತ್ತು ಎಂದು ಸಿ.ಬಿ.ಐ. ಆರೋಪಿಸಿದೆ.

## ಜರೀಕಟ್ಟೆಯಲ್ಲಿಂದು ಗ್ರಾಮ ವಾಸ್ತವ್ಯ

ದಾವಣಗೆರೆ ತಾಲ್ಲೂಕಿನ ತಹಶೀಲ್ದಾರ್‌ರವರು ಒಳಗೊಂಡಂತೆ ತಾಲ್ಲೂಕು ಮಟ್ಟದ ಅಧಿಕಾರಿಗಳು ದಾವಣಗೆರೆ ತಾಲ್ಲೂಕು ಕಸಬಾ ದಕ್ಷಿಣ ಹೋಬಳಿ ಜರೀಕಟ್ಟೆ ಗ್ರಾಮಕ್ಕೆ ಇಂದು ಭೇಟಿ ನೀಡಿ ಗ್ರಾಮ ವಾಸ್ತವ್ಯ ಮಾಡುವರು. ಜರೀಕಟ್ಟೆ ಗ್ರಾಮದ ಸಾರ್ವಜನಿಕರು ತಮ್ಮ ಕುಂದು-ಕೊರತೆಗಳನ್ನು ಪರಿಹರಿಸಿಕೊಳ್ಳಬಹುದು ಎಂದು ದಾವಣಗೆರೆ ತಹಶೀಲ್ದಾರ್ ಬಸನಗೌಡ ಕೋಟೂರ ತಿಳಿಸಿದ್ದಾರೆ.

## ಬೂದಿಹಾಳ್: ಇಂದು ಗ್ರಾಮ ವಾಸ್ತವ್ಯ

ಮಲೇಬೆನ್ನೂರು ಸಮೀಪದ ಎರೇಬೂದಿಹಾಳ್ ಗ್ರಾಮದಲ್ಲಿ ಇಂದು 'ಜಿಲ್ಲಾಧಿಕಾರಿಗಳ ನಡೆ ಹಳ್ಳಿಗಳ ಕಡೆ' ಕಾರ್ಯಕ್ರಮದಡಿ ಗ್ರಾಮ ವಾಸ್ತವ್ಯ ಕಾರ್ಯಕ್ರಮವನ್ನು ಶಾಸಕ ಎಸ್. ರಾಮಪ್ಪ ಅವರ ಅಧ್ಯಕ್ಷತೆಯಲ್ಲಿ ಮತ್ತು ತಹಶೀಲ್ದಾರ್ ಡಾ. ಬಿ.ಎಂ. ಅಶ್ವತ್ಥ್ ಅವರ ನೇತೃತ್ವದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಉಪ ತಹಶೀಲ್ದಾರ್ ಆರ್. ರವಿ ತಿಳಿಸಿದ್ದಾರೆ.

**ಬೇಕಾಗಿದ್ದಾರೆ**

ನಮ್ಮ ಶೋ ರೂಂನಲ್ಲಿ ಸೇಲ್ಸ್ ಮಾಡಲು ಅನುಭವವುಳ್ಳ ಸೇಲ್ಸ್ ಬಾಯ್ಸ್ ಮತ್ತು ಸೇಲ್ಸ್ ಗರ್ಲ್ಸ್ ಬೇಕಾಗಿದ್ದಾರೆ.

ಸೂಕ್ತ ಪರಿಚಯದೊಂದಿಗೆ ಸಂಪರ್ಕಿಸಿ :

ಶಾಂತಲಾ ವೆಡ್ಡಿಂಗ್ ಮಾಲ್
96861 95327
ಚಾಮರಾಜಪೇಟೆ, ದಾವಣಗೆರೆ - 577 001.

**ಹತ್ತನೇ ವರ್ಷದ ಪುಣ್ಯಸ್ಮರಣೆ**



**ದಿ. ಡಾ|| ಡಿ.ಎಸ್. ಸತ್ಯೇಂದ್ರರಾವ್**

ಹೆಸರಾಂತ ಕೀಲು-ಮೂಳೆ ಮತ್ತು ಕೈಶಸ್ತ್ರ ತಜ್ಞರು, ದಾವಣಗೆರೆ.

ಸದಾ ನಿಮ್ಮ ಸ್ಮರಣೆ, ಮಾರ್ಗದರ್ಶನದೊಂದಿಗೆ ಮುನ್ನಡೆಯುತ್ತಿರುವ
ಶ್ರೀಮತಿ ಜಮುನಾ ಸತ್ಯೇಂದ್ರರಾವ್ ಮತ್ತು ಮಕ್ಕಳು, ಸೊಸೆಯಂದಿರು ಹಾಗೂ ಮೊಮ್ಮಕ್ಕಳು
ಡಾ|| ಸತ್ಯೇಂದ್ರರಾವ್ ಲೆಗಸಿ ಫೌಂಡೇಶನ್-9844124418

**ವಿವಾಹ ಮಹೋತ್ಸವ ಆಹ್ವಾನ ಪತ್ರಿಕೆ**

|| ಶ್ರೀ ಕೋಗುಂಡಿ ಬಸವೇಶ್ವರ ಪ್ರಸನ್ನ ||

ಶ್ರೀಮತಿ ದ್ರಾಕ್ಷಾಯಣಮ್ಮ ಮತ್ತು
ಶ್ರೀ ಎಸ್. ಬಸವರಾಜಪ್ಪ
ಶಾಮನೂರು, ದಾವಣಗೆರೆ
ಇವರು ಮಾಡುವ ಸವಿನಯ ಆಮಂತ್ರಣ.



ನಮ್ಮ ಸುಪುತ್ರಿ
**ಚಿ. ಕುಂ. ಸೌ. ಅರ್ಪಿತಾ ಎಸ್.ಬಿ.**
B.E.
ಜೊತೆ
**ಚಿ. ರಾ. ನಾಗಾರ್ಜುನ್ ಎಸ್.ಎಸ್.**
B.E.
ಶ್ರೀಮತಿ ಸರೋಜ ಮತ್ತು ಶ್ರೀ ಬಿ.ಎಸ್. ಶ್ರೀಧರ್,
ಶಿಕ್ಷಕರು, ಬಸ್ತಿಹಳ್ಳಿ ಇವರ ಸುಪುತ್ರ

ಇವರ ವಿವಾಹ ಮಹೋತ್ಸವವನ್ನು ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಕುಟುಂಬ ಪರಿವಾರ ಸಮೇತ ಆಗಮಿಸಿ, ವಧು-ವರರಿಗೆ ಆಶೀರ್ವದಿಸಬೇಕಾಗಿ ಕೋರುವ,

ಆರತಕ್ಷತೆ : ದಿನಾಂಕ 18.06.2022ನೇ ಶನಿವಾರ ಸಂಜೆ 7.00 ರಿಂದ.
ಮುಹೂರ್ತ : ದಿನಾಂಕ 19.06.2022ನೇ ಭಾನುವಾರ ಬೆಳಿಗ್ಗೆ 10 ರಿಂದ 11.21ರವರೆಗೆ.
ವಿವಾಹ ಸ್ಥಳ : **ಬಾಪೂಜಿ ಬ್ಯಾಂಕ್ ಸಮುದಾಯ ಭವನ**
ಶಾಮನೂರು ರಸ್ತೆ, ದಾವಣಗೆರೆ.

ತಮ್ಮ ಆಗಮನಾಭಿಲಾಷಿಗಳು :
ಶ್ರೀಮತಿ ಲತಾ ಮತ್ತು ಶ್ರೀ ಎಸ್. ಮಂಜುನಾಥ್
ಶ್ರೀಮತಿ ಸರೋಜ ಮತ್ತು ಶ್ರೀ ಬಿ.ಎಸ್. ಶ್ರೀಧರ್

ತಮ್ಮ ಸುಖಾಗಮನ ಬಯಸುವವರು :
ಶ್ರೀಮತಿ ಇಂದಿರಾ ಮತ್ತು ಶ್ರೀ ಗುರುಮೂರ್ತಿ ಡಿ.ವಿ.
ಶ್ರೀಮತಿ ಮಂಜುಳಾ ಮತ್ತು ಶ್ರೀ ಪ್ರಕಾಶ್ ಬಿ.ಎಸ್., ಬಸ್ತಿಹಳ್ಳಿ
ಶ್ರೀಮತಿ ಪ್ರಿಯಾಂಕ ಮತ್ತು ಶ್ರೀ ಹರೀಶ್ ಎಸ್.ಎಂ., ಚಿ|| ತಕ್ಷ್
ಶ್ರೀಮತಿ ಅಶ್ವಿನಿ, ಶ್ರೀ ಮನುಕುಮಾರ್ ಎಸ್., ಚಿ|| ಅಮೋಘ್, ಯು.ಎಸ್.ಎ.
ಶ್ರೀಮತಿ ಡಾ|| ಆಶಾ ಮತ್ತು ಶ್ರೀ ಡಾ|| ವಿನಯ್ ಡಿ.ಜಿ.
ಸಣ್ಣ ಹಾಲಪ್ಪ ವಂಶಸ್ಥರು, ಶಾಮನೂರು ಹಾಗೂ ಬಂಧು-ಮಿತ್ರರು.
ಮೊಬೈಲ್ : 94484-22847, 96638-21134

ವಿ.ಸೂ. : ಆಹ್ವಾನ ಪತ್ರಿಕೆಗಳನ್ನು ಕಳುಹಿಸಲಾಗಿದ್ದು, ತಲುಪದವರು ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಲು ವಿನಂತಿ.







JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte